ಸೋಮವಾರ, ಫೆಬ್ರುವರಿ 24, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 55 | ಪುಟ 12

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ತ್ರಿಭಾಷಾ ಸೂತ್ರ
ಕೇಂದ್ರ v/s ತಮಿಳುನಾಡು

ಕೊಪ್ಪಳ: ದುಬಾರಿ ದ್ರಾಕ್ಷಿ ಆಕರ್ಷಣೆ 8

'ಟ್ರಂಪ್ ಗೆಲುವು: ಎದಪಂಥಕ್ಕೆ ಭೀತಿ' 8

ಬೆಳಗಾವಿ ಹಲ್ಲೆ ಪ್ರಕರಣ: ಮತ್ತೊಬ್ಬನ ಬಂಧನ 5

'ಭಾರತದ ಚುನಾವಣೆಗೆ ₹155 ಕೋಟಿ' 9

"THE LEADER IN RURAL EDUCATION EXCELLENCE"

ನಮ್ಮ ಎಕ್ಸೆಲ್ ಅಕಾಡೆಮಿಕ್ಸ್® ಬೆಂಗಳೂರು

IIT-Main & Advanced | NEET | BITS | AIIMS | JIPMER | CET | COMED-K

ಆಡಳಿತಾತ್ಮಕ ಕಚೇರಿ : ಎಕ್ಸೆಲ್ ಅಕಾಡೆಮಿಕ್ಸ್,
ನಂ.326, ಪೀಪಲ್ ಟೀ ಹಾಸ್ಪಿಟಲ್ ಮುಂಭಾಗ, ಶೇಷಾದ್ರಿಪುರಂ ಕಾಲೇಜ್ ರಸ್ತೆ,
ಯಲಹಂಕ ನ್ಯೂ ಟೌನ್ - 560 064, ಬೆಂಗಳೂರು
7676-91-7777, 9513657041, 9535656277

REG. OPEN FOR REGULAR / ONLINE
NEET, K-CET, IIT-JEE
CRASH COURSE
2ND PUC/12TH, +2 STUDYING / PASSED STUDENTS
POSTAL COACHING
1ST PUC & 2ND PUC, 11TH & 12, +1 & +2 STUDYING STUDENTS
BATCH FROM 19TH MAR, 2025

CELEBRATING 15 SUCCESSFUL YEARS Hardwork & Dedication EXCEL ACADAMICS

ವಿಶೇಷ ಸೂಚನೆ : ಅತ್ಯುತ್ತಮ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಕುಲದಲ್ಲಿ 100% ರಿಯಾಯಿತಿ ನೀಡಲಾಗುವುದು

ಹುಡುಗರಿಗೆ ಮತ್ತು ಹುಡುಗಿಯರಿಗೆ ಪ್ರತ್ಯೇಕ ವಸತಿ ಸೌಲಭ್ಯವಿರುತ್ತದೆ

ವಿವಿಧ ಇಲಾಖೆಗಳಲ್ಲಿ ಭರ್ತಿಗೆ ಬಾಕಿ 916 ಹುದ್ದೆಗಳು • ಹೈಕೋರ್ಟ್‌ಗೆ ಮಾಹಿತಿ ನೀಡುವ ಎಚ್ಚರಿಕೆ

ಬ್ಯಾಕ್‌ಲಾಗ್: ಮುಖ್ಯಸ್ಥರೇ ಹೊಣೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮಗಳು, ಮಂಡಳಿಗಳು, ವಿಶ್ವವಿದ್ಯಾಲಯಗಳು, ಸಹಕಾರ ಸಂಸ್ಥೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಹಿಂಬಾಕಿ) ಹುದ್ದೆಗಳನ್ನು ಭರ್ತಿ ಮಾಡದೇ ಇದ್ದರೆ, ಅಂತಹ ಇಲಾಖೆಗಳ ಮುಖ್ಯಸ್ಥರ ಹೆಸರನ್ನು ನ್ಯಾಯಾಂಗ ನಿಂದನಾ ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್‌ಗೆ ನೀಡಲಾಗುವುದು ಎಂದು 'ಬ್ಯಾಕ್‌ಲಾಗ್ ಸಚಿವ ಸಂಪುಟ ಉಪ ಸಮಿತಿ' ಎಚ್ಚರಿಕೆ ನೀಡಿದೆ.

2025ರ ಜ.24ರವರೆಗೆ ವಿವಿಧ ಇಲಾಖೆಗಳಲ್ಲಿ 916 ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ. ಈ ಪೈಕಿ, ಉನ್ನತ ಶಿಕ್ಷಣ ಇಲಾಖೆಯಲ್ಲಿ ಅತೀ ಹೆಚ್ಚು 530, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ 185, ಜಲಸಂಪನ್ಮೂಲ ಇಲಾಖೆಯಲ್ಲಿ 112 ಹುದ್ದೆಗಳು ಖಾಲಿ ಇವೆ.

ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಹೈಕೋರ್ಟ್‌ನಲ್ಲಿ 2023ರಲ್ಲಿಯೇ ರಿಟ್ ಅರ್ಜಿ ಸಲ್ಲಿಕೆಯಾಗಿದೆ. ಆರು ತಿಂಗಳ ಒಳಗೆ ಈ ಹುದ್ದೆಗಳನ್ನು ಭರ್ತಿ ಮಾಡುವಂತೆ ಹೈಕೋರ್ಟ್ ಆದೇಶ ನೀಡಿತ್ತು. ಆದರೆ, ಬಹುತೇಕ ಇಲಾಖೆಗಳು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಹೀಗಾಗಿ, 2024ರ ಮಾರ್ಚ್ 26ರಂದೇ ನ್ಯಾಯಾಂಗ ನಿಂದನಾ ಅರ್ಜಿ ದಾಖಲಾಗಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿದೆ.

5ನೇ ಪುಟ ನೋಡಿ



ಇಲಾಖೆಗಳಿಗೆ ನಿರ್ದೇಶನಗಳೇನು?

- ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಸಹಮತ ಅವಶ್ಯಕತೆ ಇಲ್ಲ
- ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಪ್ರತ್ಯೇಕ ಅಧಿಸೂಚನೆ ಹೊರಡಿಸಬೇಕು
- ಸಾಮಾನ್ಯ ಹುದ್ದೆಗಳೊಂದಿಗೆ ಸೇರಿಸಿ ನೇಮಕಾತಿ ಅಧಿಸೂಚನೆ ಹೊರಡಿಸಲು ಅವಕಾಶ ಇಲ್ಲ
- ಎಲ್ಲ ಇಲಾಖೆಗಳ ಮುಖ್ಯಸ್ಥರು ಸಚಿವ ಸಂಪುಟ ಉಪ ಸಮಿತಿ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕು

ಬ್ಯಾಕ್‌ಲಾಗ್ ಹುದ್ದೆಗಳನ್ನು ಯಾವುದೇ ವಿಳಂಬ ಮಾಡದೆ ಭರ್ತಿ ಮಾಡಿಕೊಳ್ಳುವಂತೆ ಈಗಾಗಲೇ ಸ್ಪಷ್ಟ ಸೂಚನೆ ನೀಡಲಾಗಿದೆ. ವಿಳಂಬವಾದರೆ ಇಲಾಖೆಗಳ ಅಧಿಕಾರಿಗಳೇ ಹೊಣೆ

ಎಚ್.ಸಿ. ಮಹದೇವಪ್ಪ, ಅಧ್ಯಕ್ಷ, ಬ್ಯಾಕ್‌ಲಾಗ್ ಸಚಿವ ಸಂಪುಟ ಉಪ ಸಮಿತಿ

ನಿಯಮ ಗೊಂದಲ; ತಿದ್ದುಪಡಿಗೆ ಸೂಚನೆ

ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ 2001ರ ನಿಯಮ ಜಾರಿಯಲ್ಲಿದೆ. ಆದರೆ, 2001ರ ಪೂರ್ವದಲ್ಲಿ ಗುರುತಿಸಿದ ಹುದ್ದೆಗಳಿಗೆ ಮಾತ್ರ ಈ ನಿಯಮ ಅನ್ವಯಿಸುತ್ತದೆ. ಆ ನಂತರದಲ್ಲಿ ಗುರುತಿಸಿದ ಹುದ್ದೆಗಳಿಗೂ ಈ ನಿಯಮಗಳನ್ನು ಅನ್ವಯಿಸುವ ವಿಚಾರದಲ್ಲಿ ಗೊಂದಲವಿದೆ. ಹೀಗಾಗಿ, ಈ ನಿಯಮಗಳಿಗೆ ತಿದ್ದುಪಡಿ ತರಲು ಸಚಿವ ಸಂಪುಟ ಉಪ ಸಮಿತಿ ತೀರ್ಮಾನಿಸಿದೆ. ಈ ಕುರಿತ ಪ್ರಸ್ತಾವವನ್ನು ಸಮಾಜ ಕಲ್ಯಾಣ ಇಲಾಖೆಯು ಡಿಪಿಎಆರ್‌ಗೆ ಸಲ್ಲಿಸಬೇಕು. ಅಲ್ಲದೆ, ಬ್ಯಾಕ್‌ಲಾಗ್ ಹುದ್ದೆಗಳಿಗೆ ಪ್ರಸ್ತುತ ವಯೋಮಿತಿ 29ರಿಂದ 40 ಇರುವುದನ್ನು 29ರಿಂದ 45ಕ್ಕೆ ಪರಿಷ್ಕರಿಸಲು ಕೂಡಾ ನಿಯಮ ತಿದ್ದುಪಡಿಗೆ ಸಮಿತಿ ನಿರ್ಧರಿಸಿದೆ.

ಮುಂಬಡ್ತಿಯಲ್ಲೂ ಪರಿಶಿಷ್ಟ ಜಾತಿಗೆ ಶೇ 17, ಪರಿಶಿಷ್ಟ ಪಂಗಡಕ್ಕೆ ಶೇ 7 ಮೀಸಲಾತಿ ನೀಡಬೇಕಿದೆ. ಹೀಗಾಗಿ, ಡಿಪಿಎಆರ್ 1999ರ ಫೆ. 3 ಮತ್ತು ಏಪ್ರಿಲ್ 13ರಂದು ಹೊರಡಿಸಿದ್ದ ಸರ್ಕಾರಿ ಆದೇಶವನ್ನು ಹಿಂಪಡೆಯಬೇಕು. ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇದ್ದು, ಎಸ್‌ಸಿ ಮತ್ತು ಎಸ್‌ಟಿ ಅರ್ಹ ಅಭ್ಯರ್ಥಿಗಳು ಮುಂಬಡ್ತಿಗೆ ಲಭ್ಯವಿದ್ದರೆ ಅರ್ಹರಿಗೆ ಮುಂಬಡ್ತಿ ನೀಡಲು ಅವಕಾಶವಾಗುವಂತೆ 2023ರ ನ. 28ರಂದು ಹೊರಡಿಸಿರುವ ಆದೇಶವನ್ನು ತಿದ್ದುಪಡಿ ಮಾಡುವಂತೆಯೂ ಡಿಪಿಎಆರ್‌ಗೆ ಸಮಿತಿ ಸೂಚನೆ ನೀಡಲು ಮುಂದಾಗಿದೆ.

ಕೊಹ್ಲಿ ಆರ್ಭಟ; ಸೆಮಿಗೆ ಭಾರತ

ದುಬೈ (ಪಿಟಿಐ): ಭಾರತದ ವಿರಾಟ್ ಕೊಹ್ಲಿ ಏಕದಿನ ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 14 ಸಾವಿರ ರನ್ ಗಳಿಸಿದ ದಾಖಲೆ ಬರೆದರು. ಅದರೊಂದಿಗೆ 51ನೇ ಶತಕವನ್ನೂ ಹೊಡೆದರು. ಇದರಿಂದಾಗಿ ಭಾನುವಾರ ನಡೆದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಭಾರತ ತಂಡವು ಪಾಕಿಸ್ತಾನದ ಎದುರಿನ ಪಂದ್ಯದಲ್ಲಿ ಜಯಭೇರಿ ಬಾರಿಸಿತು.



ಗಣಿ: ಅನುಮತಿ ಇಲ್ಲದೆ ಕಾಡು ಹರಾಜು

• ಹರಿಶಂಕರ್ ಆರ್.

ಬಳ್ಳಾರಿ: ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಇತ್ತೀಚೆಗೆ ಸಂಡೂರು ತಾಲ್ಲೂಕಿನಲ್ಲಿ ಒಟ್ಟು ಏಳು ಅದಿರು ಬ್ಲಾಕ್‌ಗಳನ್ನು ಹರಾಜು ಹಾಕಿದೆ. ಇದರಲ್ಲಿ ಒಂದು ಬ್ಲಾಕ್ ದಟ್ಟಾರಣ್ಯವಾಗಿದ್ದು (ವರ್ಜಿನ್ ಅರಣ್ಯ), ಹರಾಜಿಗೂ ಮುನ್ನ ಅರಣ್ಯ ಇಲಾಖೆಯ ಅನುಮತಿಯನ್ನೇ ಪಡೆದಿಲ್ಲ.

ಸಂಡೂರಿನ ಅರಣ್ಯ ಪ್ರದೇಶದ ದಕ್ಷಿಣ ವಲಯದಲ್ಲಿರುವ ದಟ್ಟಾರಣ್ಯದ ಒಟ್ಟು 217.453 ಎಕರೆ ವ್ಯಾಪ್ತಿಯ 'ಕುಮಾರಸ್ವಾಮಿ ಕಬ್ಬಿಣದ ಅದಿರು ಗಣಿ' ಹೆಸರಿನ ಅದಿರು ಬ್ಲಾಕ್ ಅನ್ನು ಇತ್ತೀಚೆಗೆ ನಡೆದ ಹರಾಜಿನಲ್ಲಿ ಆರ್‌ಬಿಎಸ್‌ಎಸ್‌ಎನ್ ಸಂಸ್ಥೆ ಅತ್ಯಧಿಕ ಪ್ರೀಮಿಯಂ (ಶೇಕಡ 200) ನೀಡಿ ಖರೀದಿ ಮಾಡಿದೆ.

'ವರ್ಜಿನ್' ಕಾಡಿನಲ್ಲಿ ಬ್ಲಾಕ್ ಗುರುತು ಮಾಡಲಾಗಿದೆ. ಹರಾಜನ್ನೂ ಮಾಡಲಾಗಿದೆ. ಆದರೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಅರಣ್ಯ ಇಲಾಖೆಯ ಅಭಿಪ್ರಾಯವನ್ನೂ ಕೇಳಿಲ್ಲ' ಎಂದು ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹೊಸ ಬ್ಲಾಕ್ ಹರಾಜಾಗಿದ್ದರೂ ಗಣಿ ಆರಂಭಿಸಬೇಕಿದ್ದರೆ ಇಲಾಖೆಯ ಅನುಮತಿ ಪಡೆಯಬೇಕು. ಆಗ ಪರಿಶೀಲನೆ ಮಾಡುತ್ತೇವೆ

ಸಂದೀಪ್ ಸೂರ್ಯವಂಶಿ, ಡಿಸಿಎಫ್, ಬಳ್ಳಾರಿ

5ನೇ ಪುಟ ನೋಡಿ

SIKSHA 'O' ANUSANDHAN
(DEEMED TO BE UNIVERSITY)

SAAT-2025

APPROVAL & RECOGNITION

Accredited by NAAC with Grade 'A++' | UGC Graded Autonomy(Category-I) | NBA Accredited | ICAR Accredited | NABL Accredited | NABH Accredited
AICTE Approved | NMC Approved | DCI Approved | PCI Approved | BCI Approved | INC Approved | VCI Approved

PROGRAMMES OFFERED

B.TECH PROGRAMMES
Civil Engineering
Electrical Engineering
Mechanical Engineering
Electrical and Electronics Engineering
Electronics and Communication Engineering
Computer Science and Engineering
Computer Science and Information Technology
Computer Science and Engineering (AI and ML)
Computer Science and Engineering (Cyber Security)
Computer Science and Engineering (Data Science)
Computer Science and Engineering (Internet of Things)

M.TECH PROGRAMMES
Structural Engineering
Electric Vehicle Technology
Machine Design and Robotics
Embedded System and VLSI Design
Computer Science and Engineering

MANAGEMENT PROGRAMMES
BBA
MBA
Integrated MBA
MBA (Hospital Administration)
MBA (Artificial Intelligence and Data Science)

M.Sc. PROGRAMMES
Physics
Chemistry
Mathemetics
Biotechnology
Integrated (M.Sc. Biotechnology)

COMPUTER APPLICATIONS PROGRAMMES
Bachelor of Computer Applications (BCA)
Master of Computer Applications (MCA)

PHARMACEUTICAL PROGRAMMES
B.Pharm.
M.Pharm.

LAW PROGRAMMES
BA LLB (H) - Integrated Law
BBA LLB (H) - Integrated Law
LLB (H) - 3 Years Law
LLM

HOTEL MANAGEMENT PROGRAMMES
BHMCT (Bachelor of Hotel Management & Catering Technology)
MBA (Hospitality Management)

NURSING PROGRAMMES
B.Sc. (Nursing) (Basic)
B.Sc. (Nursing) (Post Basic)
M.Sc. (Nursing)

AGRICULTURAL PROGRAMMES
B.Sc. (H) Agriculture
M.Sc. Agriculture

VETERINARY SCIENCE AND ANIMAL HUSBANDRY PROGRAMME
Bachelor of Veterinary Science & Animal Husbandry (B.V.Sc. & A.H.)

nirf National Institutional Ranking Framework 2024
14th in University Category
26th in Engineering Category
21st in Medical Category
09th in Dental Category
09th in Law Category

QS WORLD UNIVERSITY RANKINGS 2025
64 in QS Southern Asia University Ranking
278 in QS Asia University Ranking
1201- 1400 in QS World University Ranking
Institution of Happiness
Recognized by QS I-Guage

THE WORLD UNIVERSITY RANKINGS 2024
801-1000 in THE World University Ranking
401- 500 in Engineering Technology
601- 800 in Computer Science
801-1000 in Health Sciences

To apply for admission through SAAT 2025,
Visit: www.soa.ac.in

ರಾಜ್ಯದಲ್ಲಿ ಹೆಚ್ಚಲಿದೆ ಬಿಸಿಲ ಧಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಸಿಲ ಧಗೆ ದಿನದಿಂದ ದಿನಕ್ಕೆ ಹೆಚ್ಚಲಾರಂಭಿಸಿದ್ದು, ಮುಂದಿನ ಐದು ದಿನಗಳಲ್ಲಿ ಕೆಲವೆಡೆ ಉಷ್ಣಾಂಶದಲ್ಲಿ 4ರಿಂದ 5 ಡಿಗ್ರಿ ಸೆಲ್ಸಿಯಸ್‌ವರೆಗೆ ಹೆಚ್ಚಳವಾಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ರಾಜ್ಯದ ಹಲವೆಡೆ ವಾಡಿಕೆಗಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್‌ನಷ್ಟು ಅಧಿಕ ಉಷ್ಣಾಂಶ ದಾಖಲಾಗಿದೆ. ಬಹುತೇಕ ಜಿಲ್ಲೆಗಳಲ್ಲಿ ಪ್ರತಿನಿತ್ಯ ಗರಿಷ್ಠ ಉಷ್ಣಾಂಶವು 35 ಡಿಗ್ರಿ ಸೆಲ್ಸಿಯಸ್ ದಾಟುತ್ತಿದೆ. ಮುಂದಿನ 5 ದಿನಗಳಲ್ಲಿ ಏರುಗತಿ ಪಡೆಯುವ ಸಾಧ್ಯತೆಯಿದ್ದು, ಕರಾವಳಿ ಮತ್ತು ಉತ್ತರ ಒಳನಾಡಿನಲ್ಲಿ ಉಷ್ಣಾಂಶವು ವಾಡಿಕೆಗಿಂತ 5 ಡಿಗ್ರಿ ಸೆಲ್ಸಿಯಸ್ ವರೆಗೆ ಹೆಚ್ಚಳವಾಗಬಹುದು. ದಕ್ಷಿಣ ಒಳನಾಡಿನಲ್ಲಿ 2 ಡಿಗ್ರಿ ಸೆಲ್ಸಿಯಸ್ ವರೆಗೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಎರಡರ ಗುಣ ಒಂದರಲ್ಲಿ
ಕೇವಲ 2 ರೂಪಾಯಿಗೆ !

ಸದ್ಗುರು ಆಯುರ್ವೇದ

ಅಲೋವೆರಾ
ಶಾಂಪೂ + ಕಂಡೀಶನರ್

ಕೇವಲ 2* ರೂಪಾಯಿಗೆ ಉಪಯೋಗ

NEW
SADGURU AYURVEDA
₹2/-
ALOEVERA SHAMPOO + CONDITIONER
CLEANS GENTLY & SOFTEN HAIR
2 in 1 FORMULA
*MRP including all taxes. QTY: 5.5 ml

ಎಲ್ಲಾ ಕಿರಾಣಿ ಅಂಗಡಿ, ಸೂಪರ್ ಮಾರ್ಕೆಟ್,
ಮೆಡಿಕಲ್ ಸ್ಟೋರ್, ಫ್ಯಾನ್ಸಿ ಸ್ಟೋರ್ ಗಳಲ್ಲಿ ದೊರಯುತ್ತದೆ.
For Online Shopping - www.sadguruayurveda.com • For Queries: 8970703070

ಸೋಮವಾರದ ಉಷ್ಣಾಂಶ
33° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮುಂಜಾವಿನ ವೇಳೆ ಸ್ವಲ್ಪ ಪ್ರಮಾಣದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ. ಮಧ್ಯಾಹ್ನ ಬಿಸಿಲ ಝಳ ಹೆಚ್ಚಿರಲಿದೆ. ಸೆಖೆಯ ಅನುಭವ ಆಗಲಿದೆ

	ಮಂಗಳವಾರ	ಬುಧವಾರ	ಗುರುವಾರ
ತಾಪಮಾನ	33° 19°	33° 19°	33° 19°

ಕಾನ್‌ಸ್ಟೆಬಲ್‌ಗೆ ನಿಂದನೆ: ಇಬ್ಬರ ವಿರುದ್ಧ ಎಫ್‌ಐಆರ್

ಬೆಂಗಳೂರು: ಕರ್ತವ್ಯ ನಿರತ ಮಹಿಳಾ ಕಾನ್‌ಸ್ಟೆಬಲ್‌ಗೆ ನಿಂದಿಸಿದ್ದ ಆರೋಪದ ಅಡಿ ಹುಳಿಮಾವು ಪೊಲೀಸ್ ಠಾಣೆಯಲ್ಲಿ ಇಬ್ಬರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಹೊಂಗಸಂದ್ರದ ನಿವಾಸಿಗಳಾದ ಲೋಕೇಶ್ ಹಾಗೂ ರವಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಹುಳಿಮಾವು ಸಂಚಾರ ಠಾಣೆಯ ವಾಣಿಶ್ರೀ ಅವರು ಹುಳಿಮಾವು ಸಾಯಿಬಾಬಾ ದೇವಸ್ಥಾನದ ಜಂಕ್ಷನ್ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆ ಸಂದರ್ಭದಲ್ಲಿ ವಾಹನ ನಿಲುಗಡೆ ಮಾಡುವಂತೆ ವಾಣಿಶ್ರೀ ಅವರು ಸೂಚನೆ ನೀಡಿದ್ದರು. ಆಗ ವಾಣಿಶ್ರೀ ಅವರನ್ನು ಆರೋಪಿಗಳು ಅವಾಚ್ಯ ಪದಗಳಿಂದ ನಿಂದಿಸಿದ್ದರು. ವಾಣಿಶ್ರೀ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಹುಳಿಮಾವು ಪೊಲೀಸರು ಹೇಳಿದರು.

Prajna Education Trust (R.)

PACE PU COLLEGE SHIVAMOGGA.

No.1 Institution in Shivamogga for JEE, NEET & K-CET

www.pacepuc.com

CONGRATULATIONS TO JEE MAIN (SESSION 1) ACHIEVERS 2025

Registration Started for
NEET / KCET CRASH COURSE 2025
NEET Long Term 2026

Exclusive batch with limited seats for non-PACE students.

Highlights of NEET 2024 :
* 47 students secured admission to various Medical Colleges.
* 11 students scored more than 600 marks out of 720.

Highlights of KCET 2024 :
* 16 students secured KCET ranks within 1,000
* 68 students secured KCET ranks within 2,000
* 126 students secured KCET ranks within 5,000

Registration Started for
I P.U.C ADMISSION 2025-26
COURSES : PCMB / PCMCs
Integrated Coaching For : JEE/NEET & KCET

Registration and Enquiry : 9448884903 8951821555 8951721555 8951921555

ಮೆಟ್ರೊ: ಜನಾಭಿಪ್ರಾಯ ಸಂಗ್ರಹ ಸಮಾವೇಶದಲ್ಲಿ ನಿರ್ಣಯ

ದರಹೆಚ್ಚಳ ವಿರೋಧಿಸಿ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ, ಮೆಟ್ರೊ ಪ್ರಯಾಣ ದರ ಏರಿಕೆಯ ಪರಿಣಾಮವನ್ನು ಮನವರಿಕೆ ಮಾಡುವುದು, ರಾಜ್ಯಪಾಲರ ಮೂಲಕ ಕೇಂದ್ರ ಸರ್ಕಾರಕ್ಕೂ ಮಾಹಿತಿ ರವಾನಿಸುವುದು, ನಗರದ ವಿವಿಧೆಡೆಗಳಲ್ಲಿ ಸಾರ್ವಜನಿಕರ ಅಭಿಪ್ರಾಯ ಸಂಗ್ರಹ ಮತ್ತು ಜನಜಾಗೃತಿ ಸಭೆ ಏರ್ಪಡಿಸುವುದು...

ಇವು ಬೆಂಗಳೂರು ಮೆಟ್ರೋ ಪ್ರಯಾಣಿಕರ ಸಂಘ ಹಾಗೂ 'ಸೇವ್ ಬೆಂಗಳೂರು' ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 'ಮೆಟ್ರೊ ಪ್ರಯಾಣ ದರ ಏರಿಕೆ' ಕುರಿತು ಜನಾಭಿಪ್ರಾಯ ಸಂಗ್ರಹಿಸುವ ಸಮಾವೇಶದಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳು.

ನಗರದ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣದಲ್ಲಿ ನಡೆದ ಸಮಾವೇಶದಲ್ಲಿ 150ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಪ್ರಯಾಣ ದರ ಹೆಚ್ಚಳದಿಂದಾಗುವ ಸಮಸ್ಯೆಗಳು ಮತ್ತು ಪರಿಹಾರಗಳ ಕುರಿತು ಚರ್ಚಿಸಲಾಯಿತು.

ಚರ್ಚೆಯ ವೇಳೆ ಮಾತನಾಡಿದ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಾರಿಗೆ ವ್ಯವಸ್ಥೆಯ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಆಶಿಷ್ ವರ್ಮಾ, 'ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಸಮೂಹ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಸರ್ಕಾರಗಳ ಕರ್ತವ್ಯ. ಆದರೆ, ಸಾರ್ವಜನಿಕ ಸಾರಿಗೆಯ ಆರ್ಥಿಕ ಹೊರೆಯನ್ನು ಪ್ರಯಾಣಿಕರ ಮೇಲೆ ಹೊರಿಸಬಾರದು. 'ನಮ್ಮ ಮೆಟ್ರೊ' ಸಾರ್ವಜನಿಕ ಸೇವೆಯ ಬದಲು ಲಾಭಕ್ಕೆ ಆದ್ಯತೆ ನೀಡುತ್ತಿದೆ' ಎಂದು ಅವರು ಟೀಕಿಸಿದರು.

ಸಮಾವೇಶದಲ್ಲಿ ಐಐಎಸ್‌ಸಿಯ ಸಾರಿಗೆ ವ್ಯವಸ್ಥೆಯ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಆಶಿಷ್ ವರ್ಮಾ, ಮೆಡಿಕಲ್ ಸರ್ವೀಸ್ ಸೆಂಟರ್‌ನ ಉಪಾಧ್ಯಕ್ಷೆ ಡಾ.ಸುಧಾ ಕಾಮತ್, ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘದ ಪ್ರತಿನಿಧಿ ರಾಜೇಶ್ ಭಟ್ ಅವರು ವಿದ್ಯಾರ್ಥಿಗಳು ಮತ್ತು ನಾಗರಿಕರೊಂದಿಗೆ ಮೆಟ್ರೊ ಪ್ರಯಾಣ ದರ ಏರಿಕೆ ಕುರಿತು ಚರ್ಚೆ ನಡೆಸಿದರು

ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು
- ಸೇವೆ ಬದಲು ಲಾಭಕ್ಕೆ 'ಮೆಟ್ರೊ' ಬಳಕೆ: ದೂರು
- ತೆರಿಗೆ ವಿಧಿಸಿ, ಪ್ರಯಾಣ ದರ ಹೆಚ್ಚಿಸುವುದು ಸರಿಯಲ್ಲ
- ನಗರದಾದ್ಯಂತ ಜಾಗೃತಿ ಅಭಿಯಾನ ಮುಂದುವರಿಕೆ

ಕರ್ನಾಟಕ ವೈದ್ಯಕೀಯ ಸೇವಾ ಕೇಂದ್ರದ ಅಧ್ಯಕ್ಷೆ ಡಾ. ಸುಧಾ ಕಾಮತ್, 'ಆರೋಗ್ಯ ಕ್ಷೇತ್ರದಂತೆ ಮೆಟ್ರೊ ಕೂಡ ಕಾರ್ಪೊರೇಟೀಕರಣವಾಗುತ್ತಿದೆ. ನಾಗರಿಕರ ಮೇಲೆ ಮೆಟ್ರೊ ಸೆಸ್ ಹಾಕಿ, ಎಲ್ಲಾ ರೀತಿಯ ತೆರಿಗೆಗಳನ್ನು ವಿಧಿಸಿ, ಈಗ ಪ್ರಯಾಣದರ ಹೆಚ್ಚಿಸಿರುವುದು ಸರಿಯಾದ ಕ್ರಮವಲ್ಲ' ಎಂದು ಆಕ್ಷೇಪಿಸಿದರು.

'ಸೇವ್ ಬೆಂಗಳೂರು' ಸಮಿತಿಯ ವಿ.ಎನ್.ರಾಜಶೇಖರ್, 'ಮೆಟ್ರೊ ಪ್ರಯಾಣ ದರ ಏರಿಕೆ ಹೀಗೆ ಮುಂದುವರಿದರೆ 2029-30ರ ವೇಳೆಗೆ ಪ್ರತಿ ಕಿ.ಮೀಗೆ ₹20 ತೆರಬೇಕಾಗಬಹುದು. ಸಾರ್ವಜನಿಕರು ತಕ್ಷಣವೇ ಧ್ವನಿ ಎತ್ತಬೇಕು' ಎಂದು ತಿಳಿಸಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಸಹ ಪ್ರಾಧ್ಯಾಪಕಿ ಮೇಘನಾ ವರ್ಮಾ, 'ಬೆಂಗಳೂರಿನಂತಹ ಪ್ರಗತಿಶೀಲ ನಗರಕ್ಕೆ ಕ್ರಿಯಾತ್ಮಕ ಮತ್ತು ಕೈಗೆಟಕುವ ಮೆಟ್ರೊ ವ್ಯವಸ್ಥೆಯ ಅಗತ್ಯವಿದೆ. ಸರ್ಕಾರ ಜನಕೇಂದ್ರಿತ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು' ಎಂದು ಒತ್ತಾಯಿಸಿದರು.

ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘದ (ಬಿಎಂಸಿಎ) ಪ್ರತಿನಿಧಿ ರಾಜೇಶ್ ಭಟ್, 'ಮೆಟ್ರೊ ಪ್ರಯಾಣ ದರ ಹೆಚ್ಚಳದ ವಿರುದ್ಧ ನಗರವ್ಯಾಪಿ ಸಹಿ ಅಭಿಯಾನ ಮಾಡಿದ್ದು, ಈಗಾಗಲೇ 10,000 ಕ್ಕೂ ಹೆಚ್ಚು ಸಹಿ ಸಂಗ್ರಹಿಸಲಾಗಿದೆ' ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ. ಮುರಿಗೆಪ್ಪ, ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿ, ಮೆಡಿಕಲ್ ಸರ್ವಿಸ್ ಸೆಂಟರ್ ಸೇರಿದಂತೆ ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ನೀರು ಪೋಲು: 112 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರನ್ನು ಅನಗತ್ಯವಾಗಿ ಪೋಲು ಮಾಡುವವರ ವಿರುದ್ಧ 'ದಂಡ'ದ ಅಭಿಯಾನ ನಡೆಸುತ್ತಿರುವ ಜಲಮಂಡಳಿ, ಒಂದು ವಾರದಲ್ಲಿ 112 ಪ್ರಕರಣಗಳನ್ನು ದಾಖಲಿಸಿದೆ. ₹5.60 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಕುಡಿಯುವ ನೀರನ್ನು ಅನ್ಯ ಉದ್ದೇಶಕ್ಕೆ ಬಳಸದಂತೆ ಜಲಮಂಡಳಿ ಇತ್ತೀಚೆಗೆ ಸುತ್ತೋಲೆ ಹೊರಡಿಸಿತ್ತು. ನೀರು ಪೋಲು ಮಾಡುವವರ ವಿರುದ್ಧ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ - 1964 ರ ಕಲಂ 33 ಮತ್ತು 34 ರ ದಂಡ ವಿಧಿಸುವ ಕುರಿತು ಎಚ್ಚರಿಸಿತ್ತು. ಮಂಡಳಿಯ ಎಚ್ಚರಿಕೆಯನ್ನು ಕಡೆಗಣಿಸಿ, ಕುಡಿಯುವ ನೀರು ಪೋಲು ಮಾಡುತ್ತಿದ್ದವರನ್ನು ಅಧಿಕಾರಿಗಳು ಪತ್ತೆಹಚ್ಚಿ ದಂಡ ವಿಧಿಸಿದ್ದಾರೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಕ್ಷಿಣ ವಲಯದಲ್ಲಿ ಹೆಚ್ಚು: ಇಲ್ಲಿವರೆಗೆ(ಫೆಬ್ರುವರಿ 23) 112 ಪ್ರಕರಣಗಳನ್ನು ದಾಖಲಿಸಲಾಗಿದೆ. ಇದರಲ್ಲಿ ದಕ್ಷಿಣ ವಲಯದಲ್ಲಿ ಹೆಚ್ಚು ಪ್ರಕರಣಗಳು (33) ದಾಖಲಾಗಿವೆ. ಉತ್ತರ ವಲಯದಲ್ಲಿ 23, ಪಶ್ಚಿಮ ವಲಯದಲ್ಲಿ 28, ಪೂರ್ವ ವಲಯದಲ್ಲಿ 28 ಪ್ರಕರಣಗಳು ದಾಖಲಾಗಿವೆ ಎಂದು ಅವರು ಮಾಹಿತಿ ನೀಡಿದ್ದಾರೆ.

ನಗರದ ಕೆಲವು ವಾರ್ಡ್‌ಗಳಲ್ಲಿ ಅಂತರ್ಜಲದ ಮಟ್ಟ ಕುಸಿಯಬಹುದು ಎಂದು ಐಐಎಸ್‌ಸಿ ವಿಜ್ಞಾನಿಗಳು ಎಚ್ಚರಿಸಿದ್ದಾರೆ. ಈ ಕಾರಣದಿಂದ ಇಂಥ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರು ಕುಡಿಯುವ ನೀರನ್ನು ಅನಗತ್ಯ ಪೋಲು ಮಾಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ 'ದಂಡ ಅಭಿಯಾನ'ವನ್ನು ಇನ್ನಷ್ಟು ವ್ಯಾಪಕಗೊಳಿಸಲಾಗುವುದು' ಎಂದು ಅವರು ಎಚ್ಚರಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Graphic Designers

WANTED MALE Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 9845579620

Part-Time Jobs

OPPORTUNITY FEMALE/MALE GRADUATES Age 30-55years,Free Training, Good income & Foreign trip. @ Malleshwaram. JITENDRA:9901469625

General

REQUIRED: OFFICE Assistant at Malleswaram, Bengaluru. Any Degree Holders having minimum 2 Years Experience with Computer Knowledge is Desirable. Apply: RP Associates, 36, Emami Nest, Flat No. 202, Behind Reliance Smart Point, 16th Cross, Malleswaram, Bengaluru- 560055. Email: hr@rpassociatesblr.com Mobile: 9900098631/ 9845010607

WANTED HOUSEWIVES and Retired people for part time job opportunity in MNC company. Manager: 8217042937.

PERSONAL

Change of Name

CHANGE OF NAME
I, Dharani Kumar S, residing at No.402-A, SMR Vinay Cascades, Thimmarayappa Garden, Jagadish Nagar, Bengaluru-560075, have changed my minor daughter's name from NESHA NALINI to NESHA DHARANI vide affidavit dt:22.02.2025, before notary S.I. Balaguru, Bengaluru. Henceforth she shall be known as NESHA DHARANI only

I, CHANDRA Kumar R, S/o Rajan P, Resi at: No. 425/7, 2nd Main, 4th Cross, Dodda Banaswadi, Bangalore-43. I further declare that the Name Chandra Kumar R And Harry Chandra R Belongs To The Same "Chandra Kumar R".

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds More value, more impact | ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036

ದತ್ತಾಂಶ ವಿಶ್ಲೇಷಿಸಿ ಹೊಯ್ಸಳ ಗಸ್ತು ವಾಹನ, ನಿಗಾ ಹೆಚ್ಚಳ

ಬೆಂಗಳೂರು: ಕೃತಕ ಬುದ್ಧಿಮತ್ತೆ (ಎ.ಐ) ಆಧರಿಸಿ ಹೆಚ್ಚು ಅಪರಾಧ ಚಟುವಟಿಕೆಗಳು ಘಟಿಸುವ ಸ್ಥಳಗಳನ್ನು ಪತ್ತೆಹಚ್ಚಿ ಆ ಭಾಗದಲ್ಲಿ ಹೆಚ್ಚಿನ ನಿಗಾ ಹಾಗೂ ಹೊಯ್ಸಳ ಗಸ್ತು ವಾಹನ ಹೆಚ್ಚಿಸುವ ಸಂಬಂಧ ಪಶ್ಚಿಮ ವಿಭಾಗದಲ್ಲಿ ನಗರ ಪೊಲೀಸರು ಜಾರಿಗೆ ತಂದಿದ್ದ ಯೋಜನೆಯೂ ಯಶಸ್ವಿ ಆಗಿದೆ.

ಆ ಯೋಜನೆ ಪ್ರಾಯೋಗಿಕವಾಗಿ ಯಶಸ್ವಿಯಾದ ಬೆನ್ನಲ್ಲೇ ನಗರದ ಇತರೆ ವಿಭಾಗಗಳಲ್ಲೂ ಈ ಯೋಜನೆಯನ್ನು ವಿಸ್ತರಿಸಲು ಪೊಲೀಸ್ ಇಲಾಖೆ ಮುಂದಾಗಿದೆ.

ಎಫ್‌ಐಆರ್ ದಾಖಲಾತಿ ಪ್ರಮಾಣ ಹಾಗೂ ಪೊಲೀಸ್ ಸಹಾಯವಾಣಿ 112ಕ್ಕೆ ಬಂದ ಕರೆಗಳ ಮಾಹಿತಿ ಆಧರಿಸಿ ಎ.ಐ ಮೂಲಕ ದತ್ತಾಂಶವನ್ನು ವಿಶ್ಲೇಷಿಸಲಾಗುತ್ತದೆ.

ಈ ದತ್ತಾಂಶಗಳ ವಿಶ್ಲೇಷಣೆಯಲ್ಲಿ ಬಂದ ವರದಿ ಆಧರಿಸಿ, ಅಪರಾಧ ಚಟುವಟಿಕೆಗಳು ಹೆಚ್ಚು ನಡೆಯುವ ಪ್ರದೇಶಗಳಲ್ಲಿ ಹೊಯ್ಸಳ ಗಸ್ತು ವಾಹನ ನಿಯೋಜಿಸಲು ಸಾಧ್ಯವಾಗಲಿದೆ. ಈ ಅಧ್ಯಯನಕ್ಕೆ ಸಿಸಿಟಿವಿ ದೃಶ್ಯಾವಳಿ ಬಳಸಿಕೊಳ್ಳಲಾಗುವುದು. ಗಸ್ತು ಹೆಚ್ಚಳದ ಜತೆಗೆ ಸಿಸಿಟಿವಿ ಕ್ಯಾಮೆರಾ ಅಳವಡಿಕೆ ಹಾಗೂ ಬೀದಿ ದೀಪಗಳು ಉರಿಯದ ಸ್ಥಳವನ್ನೂ ಪತ್ತೆಹಚ್ಚಿ ಅವುಗಳನ್ನು ದುರಸ್ತಿ ಮಾಡುವಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಲು ಈ ವಿಶ್ಲೇಷಣೆಯಿಂದ ಸಾಧ್ಯವಾಗಲಿದೆ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ವಿಕಸಿತ ಭಾರತ@2047 ಯೋಜನೆಯ ಭಾಗವಾಗಿ ಐಸಿಎಸ್‌ಎಸ್‌ಆರ್ ರಾಷ್ಟ್ರೀಯ ವಿಚಾರಸಂಕಿರಣದ ಉದ್ಘಾಟನೆ: ಮಂಗಳಾ ನರಸಿಂಹನ್, ಅತಿಥಿಗಳು: ಸುನಿಲ್ ಕುಮಾರ್ ಕೆ.ಎಸ್., ಬಿ.ಕೆ. ಶಿವಕುಮಾರ್, ಅನಾಮಿಕಾ ಪಾಠಕ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

'ದ್ರಾಕ್ಷಿ-ಕಲ್ಲಂಗಡಿ ಮಾರಾಟ ಮೇಳ-2025'ದ ಉದ್ಘಾಟನೆ: ಎಸ್.ಎಸ್. ಮಲ್ಲಿಕಾರ್ಜುನ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ರಾಮಲಿಂಗಾರೆಡ್ಡಿ, ಪಿ.ಸಿ. ಮೋಹನ್, ಉದಯ್ ಬಿ. ಗರುಡಾಚಾರ್, ಬಿ.ಡಿ. ಭೂಕಾಂತ್, ಮಂಜುನಾಥ ಗೌಡ, ಶಮ್ಲಾ ಇಕ್ಬಾಲ್, ರಮೇಶ್ ಡಿ.ಎಸ್., ಆಯೋಜನೆ: ಹಾಪ್‌ಕಾಮ್ಸ್, ಸ್ಥಳ: ಹಾಪ್‌ಕಾಮ್ಸ್ ಪ್ರಧಾನ ಕಚೇರಿ, ಡಾ.ಎಂ.ಎಚ್. ಮರೀಗೌಡ ರಸ್ತೆ, ಲಾಲ್‌ಬಾಗ್, ಬೆಳಿಗ್ಗೆ 11

ಜನ ಜಾಗೃತಿಗೆ ನಗೆದೀವಿಗೆ: ಭಾಗವಹಿಸುವವರು: ಎಂ.ಎಸ್. ನರಸಿಂಹಮೂರ್ತಿ, ಎಚ್. ಡುಂಡಿರಾಜ್, ವೈ.ವಿ. ಗುಂಡೂರಾವ್, ಎಚ್.ಎಸ್. ವಿಶ್ವನಾಥ್, ಆಯೋಜನೆ: ಭಾರತೀಯ ರಿಸರ್ವ್ ಬ್ಯಾಂಕ್ ಒಂಬುಡ್ಸ್‌ಮನ್ ಕಾರ್ಯಾಲಯ, ಸ್ಥಳ: ಎಡಿಎ ರಂಗ ಮಂದಿರ, ಜೆ.ಸಿ. ರಸ್ತೆ, ಸಂಜೆ 5.30

'ಡಾ.ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ' ಪ್ರಶಸ್ತಿ ಪ್ರದಾನ: ಕೆ. ಮರುಳಸಿದ್ದಪ್ಪ, ಉದ್ಘಾಟನೆ: ಬಿ.ಆರ್. ಪಾಟೀಲ, ಪ್ರಶಸ್ತಿ ಸ್ವೀಕರಿಸುವವರು: ಮಾವಳ್ಳಿ ಶಂಕರ್, ಅತಿಥಿಗಳು: ಎಚ್.ಎಂ. ರೇವಣ್ಣ, ಬಿ.ಎಲ್. ಶಂಕರ್, ಸಿ. ಸೋಮಶೇಖರ್, ಅಧ್ಯಕ್ಷತೆ: ಎಸ್. ಮಹದೇವಯ್ಯ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣ, ಕುಮಾರಕೃಪಾ ರಸ್ತೆ, ಸಂಜೆ 6

'ನನ್ನೂರು' ನಾಟಕ ಪ್ರದರ್ಶನ: ನಿರ್ದೇಶನ: ಪ್ರಸನ್ನ ಜಿ.ವಿ., ಆಯೋಜನೆ: ಆಯಾಮ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

IDEMI
INSTITUTE FOR DESIGN OF ELECTRICAL MEASURING INSTRUMENTS
ವಿಸ್ತರಣೆ ಕೇಂದ್ರ, ಬೆಂಗಳೂರು
ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯ

Sr. No.	Course Name	Duration	Eligibility
	Free for SC, ST, OBC, EWS & WOMEN		
1	ಗ್ರಾಫಿಕ್ಸ್ ಮತ್ತು ವೆಬ್ ಡಿಸೈನರ್ ಸಹಾಯಕ	600 Hrs	PUC/12th
2	ಜೂನಿಯರ್ ವೆಬ್ ಡಿಸೈನರ್	UI/UX	390 Hrs	PUC/12th
3	ಚಲನಚಿತ್ರ ಸಂಯೋಜಕ ಸಹಾಯಕ	600 Hrs	PUC/12th
4	3D ಅನಿಮೇಟರ್ ಸಹಾಯಕ	600 Hrs	10th + 2
5	3D ಪ್ರಿಂಟಿಂಗ್ (3D Printing)	96 Hrs	10th + 2
	Free for SC, ST		
6	ತಂತ್ರಜ್ಞ - ಹ್ಯಾಂಡ್ ಹೆಲ್ಡ್ ಉತ್ಪನ್ನಗಳು(HHP) (ಮೊಬೈಲ್ ದುರಸ್ತಿ ಮಾಡಲಾಗುತ್ತದೆ ಕೋರ್ಸ್)	480 Hrs	10th + 2
7	PLC ಪ್ರೋಗ್ರಾಮಿಂಗ್	96 Hrs	10th + 2
8	ಕಂಪ್ಯೂಟರ್ ಹಾರ್ಡ್‌ವೇರ್ ಮತ್ತು ನೆಟ್‌ವರ್ಕಿಂಗ್	96 Hrs	10th

https://bit.ly/EC-BLR-REG-24-25
ಅಗತ್ಯವಿರುವ ದಾಖಲೆಗಳು: ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣಪತ್ರ, ಶಿಕ್ಷಣ ಪ್ರಮಾಣಪತ್ರಗಳು, 3 ಪಾಸ್‌ಪೋರ್ಟ್ ಗಾತ್ರದ
ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
9019870803 / 9481236511
c/o MSME-DFO, West of Chord Road, Rajaji Nagar Industrial Estate, Bangalore, Karnataka 560010
E-Mail: ecbengaluru@idemi.org, training@idemi.org, Website: www.idemi.org

ಸಹಕಾರಿ ಸಂಸ್ಥೆಗಳಲ್ಲಿ ನಡೆದಿದ್ದ ಬಹುಕೋಟಿ ಹಗರಣ • ಅಧಿಕಾರಿಗಳನ್ನು ನಿಯೋಜಿಸುವಂತೆ ರಾಜ್ಯ ಸರ್ಕಾರಕ್ಕೆ ಪತ್ರ

ವರ್ಷವಾದರೂ ಆರಂಭವಾಗದ ಸಿಬಿಐ ತನಿಖೆ

• ಆದಿತ್ಯ ಕೆ.ಎ.

ಬೆಂಗಳೂರು: ನಗರದ ಮೂರು ಸಹಕಾರಿ ಸಂಸ್ಥೆಗಳಲ್ಲಿ ನಡೆದಿದ್ದ ಬಹುಕೋಟಿ ರೂಪಾಯಿ ಮೊತ್ತದ ಹಗರಣಗಳ ತನಿಖೆಯನ್ನು ರಾಜ್ಯ ಸರ್ಕಾರವು ಸಿಬಿಐಗೆ ವಹಿಸಿ, ಒಂದು ವರ್ಷ ಎರಡು ತಿಂಗಳು ಕಳೆದಿದೆ. ಇನ್ನೂ ತನಿಖೆಯೇ ಆರಂಭವಾಗಿಲ್ಲ.

'ಸಿಬಿಐನಲ್ಲಿ ಹಲವು ಪ್ರಕರಣಗಳ ತನಿಖೆ ನಡೆಯುತ್ತಿದೆ. ಆ ಪ್ರಕರಣಗಳ ತನಿಖೆಗೆ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅಗತ್ಯವಿರುವ ಅಧಿಕಾರಿಗಳನ್ನು ನಿಯೋಜಿಸಿದರೆ ಮಾತ್ರವೇ ರಾಜ್ಯದ ಸಹಕಾರಿ ಸಂಸ್ಥೆಗಳಲ್ಲಿ ನಡೆದಿರುವ ಹಗರಣಗಳ ಕುರಿತು ತನಿಖೆ ಆರಂಭಿಸುವುದಾಗಿ ಹೇಳಿ ಸಿಬಿಐ, ರಾಜ್ಯ ಸರ್ಕಾರಕ್ಕೆ ವಾಪಸ್ ಪತ್ರ ಬರೆದಿದೆ. ಆ ಪತ್ರಕ್ಕೆ ರಾಜ್ಯ ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡದ ಕಾರಣಕ್ಕೆ ತನಿಖೆ ವಿಳಂಬವಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಸಿಬಿಐ ತನಿಖೆಗೆ ಆಗ್ರಹಿಸಿದ್ದ ಹಿತರಕ್ಷಣಾ ವೇದಿಕೆ
- ಕೆಲ ತಿಂಗಳು ತನಿಖೆ ನಡೆಸಿದ್ದ ಸಿಐಡಿ
- ತನಿಖೆ ವಿಳಂಬ – ಠೇವಣಿದಾರರ ಆಕ್ರೋಶ

ಎರಡು ಬಾರಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಸದ್ಯ ಸಿಐಡಿ ತನಿಖಾಧಿಕಾರಿಗಳೇ ಪ್ರಕರಣದ ತನಿಖೆ ಮುಂದುವರಿಸಿದ್ದಾರೆ
ಎಂ.ಎ.ಸಲೀಂ, ಡಿಜಿಪಿ, ಸಿಐಡಿ

ನ್ಯಾಯ ಕಲ್ಪಿಸುವಂತೆ ಆಗ್ರಹಿಸಿ ಶ್ರೀಗುರು ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಸದಸ್ಯರು ಬಸವನಗುಡಿಯಲ್ಲಿ ಈ ಹಿಂದೆ ಪ್ರತಿಭಟನೆ ನಡೆಸಿದ್ದರು (ಸಂಗ್ರಹ ಚಿತ್ರ)

ಬೆಂಗಳೂರಿನ ಶ್ರೀಗುರು ರಾಘವೇಂದ್ರ ಸಹಕಾರ ಬ್ಯಾಂಕ್, ಶ್ರೀಗುರು ಸಾರ್ವಭೌಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್, ಶ್ರೀವಸಿಷ್ಠ ಸೌಹಾರ್ದ ಸಹಕಾರ ಬ್ಯಾಂಕ್‌ಗಳಲ್ಲಿ ನಡೆದಿರುವ ದೊಡ್ಡ ಮೊತ್ತದ ಹಗರಣಗಳ ತನಿಖೆಯನ್ನು ರಾಜ್ಯ ಸರ್ಕಾರವು 2023ರ ಡಿಸೆಂಬರ್ 3ರಂದು ಸಿಬಿಐಗೆ ವಹಿಸಿತ್ತು. ಅಲ್ಲದೇ ಸಿರಿ ವೈಭವ ಪತ್ತಿನ ಸಹಕಾರ ಸಂಘದಲ್ಲಿ ನಡೆದಿದ್ದ ಹಗರಣದ ತನಿಖೆಯನ್ನೂ ಸಿಬಿಐಗೇ ವರ್ಗಾವಣೆ ಮಾಡುವಂತೆ ಸರ್ಕಾರವು ಸೂಚಿಸಿತ್ತು. ಸಹಕಾರ ಸಂಸ್ಥೆಗಳ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ತನಿಖೆ ನಡೆಸಬೇಕು ಎಂದು ಆದೇಶದಲ್ಲಿ ತಿಳಿಸಿತ್ತು.

ಸರ್ಕಾರದ ಆದೇಶದಂತೆ ಕಳೆದ ವರ್ಷದ ಆರಂಭದಲ್ಲೇ ಸಿಐಡಿ ಅಧಿಕಾರಿಗಳು ಪ್ರಕರಣದ ಕಡತವನ್ನು ಸಿಬಿಐಗೆ ನೀಡಲು ಸಿದ್ಧತೆ ಮಾಡಿಕೊಂಡಿದ್ದರು. ಸಿಬಿಐ ಅಧಿಕಾರಿಗಳು ಸಿಐಡಿಯಿಂದ ಯಾವುದೇ ಕಡತ ಹಾಗೂ ಮಾಹಿತಿಯನ್ನೂ ಪಡೆದುಕೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.

ಹಣ ಕಳೆದುಕೊಂಡ ಠೇವಣಿದಾರರು, ನ್ಯಾಯಕ್ಕೆ ಆಗ್ರಹಿಸಿ ಸಹಕಾರಿ ಸಂಸ್ಥೆಗಳ ಎದುರು ಪ್ರತಿಭಟನೆ ನಡೆಸಿದ್ದರು. ಅದಾದ ಮೇಲೆ ಸರ್ಕಾರ ಸಿಐಡಿಗೆ ತನಿಖೆ ಪ್ರಕರಣವನ್ನು ವಹಿಸಿತ್ತು. ಕೆಲ ತಿಂಗಳು ಸಿಐಡಿಯವರೇ ತನಿಖೆ ನಡೆಸಿದ್ದರು. ಠೇವಣಿದಾರರು ಹಾಗೂ ಷೇರುದಾರರಿಂದಲೂ ಮಾಹಿತಿ ಕಲೆಹಾಕಿದ್ದರು.

₹1,290 ಕೋಟಿ ವಂಚನೆ ಪತ್ತೆ: 'ಮೂರು ಸಹಕಾರಿ ಸಂಸ್ಥೆಗಳಲ್ಲಿನ ಅವ್ಯವಹಾರಗಳ ಕುರಿತು ವಿವಿಧ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳನ್ನು ವರ್ಗಾವಣೆ ಮಾಡಿಕೊಂಡು ಸಿಐಡಿ ತನಿಖೆ ಆರಂಭಿಸಿತ್ತು. ತನಿಖೆ ವೇಳೆ ಮಹತ್ವದ ದಾಖಲೆಗಳು ಪತ್ತೆಯಾಗಿದ್ದವು. ₹1,290 ಕೋಟಿ ಮೊತ್ತದ ವಂಚನೆಯನ್ನು ಪತ್ತೆಹಚ್ಚಲಾಗಿತ್ತು. ಹಲವರನ್ನು ವಿಚಾರಣೆಗೂ ಒಳಪಡಿಸಲಾಗಿತ್ತು. ಅಷ್ಟರಲ್ಲಿ ಸಿಬಿಐ ತನಿಖೆಗೆ ರಾಜ್ಯ ಸರ್ಕಾರ ಆದೇಶಿಸಿತ್ತು. ಹೀಗಾಗಿ ತನಿಖೆಯನ್ನು ಚುರುಕುಗೊಳಿಸಲು ಸಾಧ್ಯವಾಗಿರಲಿಲ್ಲ. ರಾಜ್ಯ ಸರ್ಕಾರದಿಂದ ಮತ್ತೆ ನಿರ್ದೇಶನ ಬಂದರೆ ತನಿಖೆಗೆ ವೇಗ ನೀಡುತ್ತೇವೆ' ಎಂದು ಸಿಐಡಿಯ ಅಧಿಕಾರಿಯೊಬ್ಬರು ಹೇಳಿದರು.

'ಆರು ಸಹಕಾರಿ ಸಂಸ್ಥೆಗಳಲ್ಲಿ ₹6 ಸಾವಿರ ಕೋಟಿಗೂ ಹೆಚ್ಚು ಅಕ್ರಮ ನಡೆದಿದೆ' ಎಂದು ಶ್ರೀಗುರು ರಾಘವೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಸದಸ್ಯರು ಆಪಾದಿಸಿದ್ದರು. 'ಸಹಕಾರ ಬ್ಯಾಂಕ್‌ಗಳ ಹಗರಣವನ್ನು ಸಿಬಿಐಗೆ ವಹಿಸಬೇಕು' ಎಂದೂ ಆಗ್ರಹಿಸಿದರು.

ಅಧಿಕಾರಿಗಳಿಗೆ 'ಬ್ಲ್ಯಾಕ್‌ಮೇಲ್' ಮಾಜಿ ಕಾನ್‌ಸ್ಟೆಬಲ್ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತದ ಅಧಿಕಾರಿ ಎಂದು ಹೇಳಿಕೊಂಡು ಸರ್ಕಾರಿ ಅಧಿಕಾರಿಗಳನ್ನು 'ಬ್ಲ್ಯಾಕ್‌ಮೇಲ್' ಮಾಡಿ, ಹಣ ಪಡೆದು ವಂಚಿಸುತ್ತಿದ್ದ ಆರೋಪಿ, ಮಾಜಿ ಕಾನ್‌ಸ್ಟೆಬಲ್ ಮುರುಗಪ್ಪ ನಿಂಗಪ್ಪ ಕುಂಬಾರ್ (56) ಎಂಬಾತನನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿ ಬಸವರಾಜು ಆರ್. ಮಗದಮ್ ನೀಡಿದ ದೂರಿನ ಮೇರೆಗೆ ಫೆ. 3ರಂದು ಪ್ರಕರಣ ದಾಖಲಿಸಿಕೊಂಡಿದ್ದರು.

'ಬೆಳಗಾವಿ ಜಿಲ್ಲೆ, ಚಿಕ್ಕೋಡಿ ತಾಲ್ಲೂಕಿನ ಸದಲಗ ಗ್ರಾಮದ ಆರೋಪಿ ಮುರುಗಪ್ಪ, ರಾಜ್ಯ ಮೀಸಲು ಪೊಲೀಸ್ ಪಡೆಯಲ್ಲಿ ಕೆಲಸ ಮಾಡುತ್ತಿದ್ದ. ಕೆಲವು ವರ್ಷಗಳ ಹಿಂದೆ ವಜಾಗೊಂಡಿದ್ದ' ಎಂದು ಮೂಲಗಳು ತಿಳಿಸಿವೆ.

'ಕೆಲವು ಸರ್ಕಾರಿ ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದ ಆರೋಪಿ, ತಾನು ಲೋಕಾಯುಕ್ತ ಕಚೇರಿ ಅಧಿಕಾರಿ ಎಂಬುದಾಗಿ ಪರಿಚಯ ಮಾಡಿಕೊಳ್ಳುತ್ತಿದ್ದ. ನಿಮ್ಮ ವಿರುದ್ಧ ಅಕ್ರಮ ಆಸ್ತಿ ಗಳಿಕೆಗೆ ಸಂಬಂಧಿಸಿ ಪ್ರಕರಣ ದಾಖಲಾಗುತ್ತಿದೆ ಎಂದು ಬೆದರಿಕೆ ಹಾಕುತ್ತಿದ್ದ. ಪ್ರಕರಣ ದಾಖಲಾಗುವುದನ್ನು ತಪ್ಪಿಸಲು ಹಣ ನೀಡಬೇಕು ಎಂಬ ಬೇಡಿಕೆ ಇಡುತ್ತಿದ್ದ' ಎಂದು ಹೇಳಿವೆ.

'ಆರೋಪಿಯ ಮೊಬೈಲ್ ಸಂಖ್ಯೆಯನ್ನು ಟ್ರೂಕಾಲರ್‌ನಲ್ಲಿ ಪರಿಶೀಲಿಸಿದಾಗ ಲೋಕಾಯುಕ್ತ ಡಿವೈಎಸ್‌ಪಿ ಎಂದು ನಮೂದು ಮಾಡಿಕೊಂಡಿದ್ದು ಪತ್ತೆಯಾಗಿತ್ತು. ಮೊಬೈಲ್ ಲೊಕೇಶನ್ ಪರಿಶೀಲಿಸಿದಾಗ ಮಹಾರಾಷ್ಟ್ರದ ಶಿರೋಳ್ ಎಂದು ತೋರಿಸುತ್ತಿತ್ತು. ಪೊಲೀಸರು ಅಲ್ಲಿಗೆ ತೆರಳಿ ಆರೋಪಿಯನ್ನು ಬಂಧಿಸಿದರು' ಎಂದು ಪೊಲೀಸರು ಹೇಳಿದರು. ಆರೋಪಿ ವಿರುದ್ಧ ವಿವಿಧ ಠಾಣೆಗಳಲ್ಲಿ 60ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ಪ್ರೀತಿಸಲು ನಿರಾಕರಣೆ: ಕಾರಿಗೆ ಬೆಂಕಿ

ಆರೋಪಿ ಕಾಲಿಗೆ ಗುಂಡು ಹಾರಿಸಿ ಬಂಧಿಸಿದ ಪೊಲೀಸರು

ಪ್ರಜಾವಾಣಿ ವಾರ್ತೆ

ರಾಹುಲ್

ಬೆಂಗಳೂರು: ಪ್ರೀತಿಸಲು ನಿರಾಕರಿಸಿದ ಯುವತಿಯ ಮೇಲೆ ಸೇಡು ತೀರಿಸಿ ಕೊಳ್ಳಲು ಆಕೆಯ ಮನೆಯ ಎದುರು ನಿಲುಗಡೆ ಮಾಡಿದ್ದ ಕಾರು ಮತ್ತು ದ್ವಿಚಕ್ರ ವಾಹನಕ್ಕೆ ರೌಡಿಯೊಬ್ಬ ಬೆಂಕಿಯಿಟ್ಟು ಸುಟ್ಟು ಹಾಕಿದ್ದಾನೆ.

ಈ ಘಟನೆಯು ಸುಬ್ರಹ್ಮಣ್ಯಪುರ ಮತ್ತು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಹನುಮಂತನಗರ ಠಾಣೆಯ ರೌಡಿ ಶೀಟರ್ ರಾಹುಲ್ ಅಲಿಯಾಸ್ ಸ್ಟಾರ್ (26) ಎಂಬಾತ ಸಹಚರರ ಜತೆ ಸೇರಿ ಕೃತ್ಯ ಎಸಗಿದ್ದಾನೆ. ಈ ಸಂಬಂಧ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದೆ.

ಬೆಂಕಿ ಹಚ್ಚಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೋಣನಕುಂಟೆ ಬಳಿಯಿದ್ದ ಆರೋಪಿಯನ್ನು ಬಂಧಿಸಲು ಪೊಲೀಸರು ಹೋಗಿದ್ದರು. ಆಗ ಆರೋಪಿ ಪೊಲೀಸರ ಮೇಲೆಯೇ ಹಲ್ಲೆಗೆ ಮುಂದಾಗಿದ್ದ. ಹೀಗಾಗಿ, ಆತ್ಮರಕ್ಷಣೆಗಾಗಿ ಪೊಲೀಸರು, ಆರೋಪಿ ಮೇಲೆ ಗುಂಡು ಹಾರಿಸಿ ಬಂಧಿಸಿದ್ದಾರೆ.

ಪದವಿ ವ್ಯಾಸಂಗ ಮಾಡುತ್ತಿದ್ದ ಯುವತಿ ಒಂದು ವರ್ಷದಿಂದ ಸುಬ್ರಹ್ಮಣ್ಯಪುರದ ಹರೇಹಳ್ಳಿಯಲ್ಲಿರುವ ಫ್ಲ್ಯಾಟ್‌ವೊಂದನ್ನು ಭೋಗ್ಯಕ್ಕೆ ಪಡೆದು ವಾಸವಾಗಿದ್ದರು. ತಂದೆ ಮತ್ತು ಸಹೋದರ ಬನಶಂಕರಿಯಲ್ಲಿ ವಾಸ ಮಾಡುತ್ತಿದ್ದರು.

ಒಂಬತ್ತು ವರ್ಷಗಳಿಂದ ರಾಹುಲ್ ನನ್ನು ಪ್ರೀತಿಸುತ್ತಿದ್ದ ಯುವತಿ, ಈಚೆಗೆ ನಿರ್ಲಕ್ಷ್ಯ ಮಾಡಿದ್ದರು ಎನ್ನಲಾಗಿದೆ. ಈ ಮಧ್ಯೆ ರಾಹುಲ್ ಬೇರೆ ಯುವತಿಯ ಜತೆಗೆ ಮದುವೆ ಮಾಡಿಕೊಂಡಿದ್ದ. ಮದುವೆಯಾದ ಮೇಲೂ ತನ್ನನ್ನು ಪ್ರೀತಿಸುವಂತೆ ಆರೋಪಿಯು ಯುವತಿಯನ್ನು ಪೀಡಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿ ದೂರಾಗಿದ್ದರಿಂದ ಆರೋಪಿ ಕೋಪಗೊಂಡಿದ್ದ. ಶನಿವಾರ ತಡರಾತ್ರಿ ತನ್ನ ಮೂವರು ಸಹಚರರ ಜತೆ ಸೇರಿಕೊಂಡು ಬನಶಂಕರಿಯಲ್ಲಿ ಇರುವ ಯುವತಿ ಮನೆಗೆ ಹೋಗಿ ಗಲಾಟೆ ಮಾಡಿದ್ದ. ಮನೆ ಎದುರು ನಿಲ್ಲಿಸಿದ್ದ ಬೈಕ್‌ಗೆ ಬೆಂಕಿ ಹಚ್ಚಿದ್ದ. ಈ ಬೆಂಕಿಯಿಂದ ಮನೆಯ ಪಕ್ಕದಲ್ಲಿ ನಿಲುಗಡೆ ಮಾಡಿದ್ದ ಮತ್ತೊಂದು ಕಾರಿಗೂ ಹಾನಿಯಾಗಿದೆ.

ಯುವತಿ ಮನೆಯಲ್ಲಿ ಇಲ್ಲ ಎಂಬುದು ಗೊತ್ತಾದ ಮೇಲೆ ಹರೇಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್‌ಗೆ ಹೋಗಿದ್ದ ಆರೋಪಿ ಕೆಳಕ್ಕೆ ನುಗ್ಗಲು ಪ್ರಯತ್ನಿಸಿದ್ದ. ಆದರೆ, ಸೆಕ್ಯೂರಿಟಿ ಗಾರ್ಡ್ ಒಳಗೆ ಬಿಟ್ಟಿರಲಿಲ್ಲ. ಆತನಿಗೆ ಮಾರಕಾಸ್ತ್ರ ತೋರಿಸಿ ಬೆದರಿಸಿದ್ದ. ಅಲ್ಲದೆ, ಪ್ರೇಯಸಿಯ ಫೋಟೊ ತೋರಿಸಿದ್ದ. ಆಕೆಯ ಕಾರು ಪತ್ತೆ ಹಚ್ಚಿ, ಆ ಕಾರಿಗೂ ಬೆಂಕಿ ಹಚ್ಚಿದ್ದ. ಆ ಕಾರನ್ನು ರೌಡಿಯೇ ಉಡುಗೊರೆ ನೀಡಿದ್ದ ಎಂದು ಮೂಲಗಳು ಹೇಳಿವೆ.

ರಾಹುಲ್ ವಿರುದ್ಧ ಹನುಮಂತನಗರ, ಗಿರಿನಗರ ಠಾಣೆ ಹಾಗೂ ಇತರೆ ಠಾಣೆಗಳಲ್ಲಿ ಹತ್ಯೆ, ಹತ್ಯೆ ಯತ್ನ, ದರೋಡೆ, ಸುಲಿಗೆ, ಮಾದಕ ಪದಾರ್ಥಗಳ ಮಾರಾಟ ಸೇರಿದಂತೆ 18ಕ್ಕೂ ಹೆಚ್ಚು ವಿವಿಧ ಅಪರಾಧ ಪ್ರಕರಣಗಳು ದಾಖಲಾಗಿವೆ. ಈತನ ವಿರುದ್ಧ ಕೆಲ ವರ್ಷಗಳ ಹಿಂದೆ ಹನುಮಂತನಗರ ಠಾಣೆ ಪೊಲೀಸರು ರೌಡಿ ಪಟ್ಟಿ ತೆರೆದಿದ್ದರು.

ಹಳೇ ದ್ವೇಷಕ್ಕೆ ಕೃತ್ಯ ಶಂಕೆ: ಆರೋಪಿಗಳು ಪರಾರಿ • ಥಳಿತಕ್ಕೊಳಗಾದ ಸ್ನೇಹಿತ ಆಸ್ಪತ್ರೆಗೆ ದಾಖಲು

ರಸ್ತೆಯಲ್ಲಿ ಅಡ್ಡಗಟ್ಟಿ ರೌಡಿ ಹೈದರ್ ಅಲಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕನಗರದ ಗರುಡಾ ಮಾಲ್ ಬಳಿ ಬೈಕ್‌ನಲ್ಲಿ ತೆರಳುತ್ತಿದ್ದ ರೌಡಿಯನ್ನು ಶನಿವಾರ ಮಧ್ಯರಾತ್ರಿ ಅಡ್ಡಗಟ್ಟಿ ಕೊಲೆ ಮಾಡಲಾಗಿದೆ. ಕೃತ್ಯ ಎಸಗಿದ ಬಳಿಕ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ.

ಹೈದರ್ ಅಲಿ

ಆನೆಪಾಳ್ಯದ ನಿವಾಸಿ ಹೈದರ್ ಅಲಿ(38) ಕೊಲೆಯಾದ ರೌಡಿ.

ಅಶೋಕನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪಬ್‌ವೊಂದರಲ್ಲಿ ಜಿಮ್ ಮಾಲೀಕನೂ ಆಗಿರುವ ಸ್ನೇಹಿತನ ಜತೆಗೆ ಪಾರ್ಟಿ ನಡೆಸಿದ್ದ ಹೈದರ್ ಅಲಿ, ಬೈಕ್‌ನಲ್ಲಿ ಆನೆಪಾಳ್ಯದ ಮನೆಗೆ ತೆರಳುತ್ತಿದ್ದ. ಫುಟ್‌ಬಾಲ್ ಮೈದಾನದ ಬಳಿಯ ತಿರುವಿನಲ್ಲಿ ಬೈಕ್ ಅನ್ನು ಅಡ್ಡಗಟ್ಟಿದ ಆರೋಪಿಗಳು, ಕೆಳಕ್ಕೆ ಇಳಿದು ದೂರಕ್ಕೆ ಹೋಗುವಂತೆ ಜೊತೆಗಿದ್ದ ಹೈದರ್ ಸ್ನೇಹಿತನಿಗೆ ಸೂಚಿಸಿದ್ದರು. ನಂತರ, ಮಾರಕಾಸ್ತ್ರಗಳಿಂದ ಹೈದರ್ ಅಲಿ ಮೇಲೆ ಮನಬಂದಂತೆ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಳಿಕ ಸ್ನೇಹಿತನಿಗೂ ದುಷ್ಕರ್ಮಿಗಳು ಥಳಿಸಿ ಹೋಗಿದ್ದಾರೆ. ಸ್ನೇಹಿತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಸ್ನೇಹಿತನ ಜತೆಗೆ ಹೈದರ್ ಅಲಿ ಪಬ್‌ಗೆ ತೆರಳುತ್ತಿರುವುದನ್ನು ಗಮನಿಸಿದ್ದ ಆರೋಪಿಗಳು ಹೊರಕ್ಕೆ ಬರುವುದನ್ನೇ ಕಾದಿದ್ದರು. ತಕ್ಷಣ ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದ ದುಷ್ಕರ್ಮಿಗಳು ಕೃತ್ಯ ಎಸಗಿದ್ದಾರೆ. ಇನ್ನೂ ಕೆಲವು ಆರೋಪಿಗಳು ಹಲ್ಲೆ ನಡೆಸುವ ಉದ್ದೇಶದಿಂದ ಕಾರಿನಲ್ಲಿ ಬಂದು ಮೈದಾನದ ಬಳಿ ಕಾದಿದ್ದರು' ಎಂದು ಪೊಲೀಸರು ಹೇಳಿದರು.

ಮಾಹಿತಿ ತಿಳಿದ ಕೂಡಲೇ ಸ್ಥಳಕ್ಕೆ ತೆರಳಿದ ಪೊಲೀಸರು, ರಕ್ತದ ಮಡುವಿನಲ್ಲಿ ಬಿದ್ದಿದ್ದ ರೌಡಿಯನ್ನು ಬೌರಿಂಗ್ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯದಲ="ಲ್ಲಿ ಮೃತಪಟ್ಟಿದ್ದಾನೆ ಎಂದು ಗೊತ್ತಾಗಿದೆ.

ಮೃತದೇಹದ ಮರಣೋತ್ತರ ಪರೀಕ್ಷೆಯನ್ನು ನಡೆಸಿ ವಾರಸುದಾರರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

'ರೀಲ್ಸ್' ಮಾಡಿದ್ದ ಹೈದರ್: ಕೊಲೆಯಾಗುವ ಐದು ತಾಸು ಮೊದಲು 'ರೀಲ್ಸ್' ಮಾಡಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದ. 'ರೀಲ್ಸ್'ಗೆ ಟಗರು ಸಿನಿಮಾದ ಹಾಡನ್ನು ಸೇರಿಸಿದ್ದ. ಆನೆಪಾಳ್ಯ ಹಾಗೂ ನೀಲಸಂದ್ರ ಭಾಗದಲ್ಲಿ ಹೈದರ್ ಅಲಿ ರೌಡಿ ಚಟುವಟಿಕೆ ನಡೆಸುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ಶಾಂತಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಜತೆಗೆ ಹೈದರ್ ಅಲಿ ಗುರುತಿಸಿಕೊಂಡಿದ್ದ. ಚುನಾವಣೆ ಸಂದರ್ಭದಲ್ಲಿ ಹ್ಯಾರಿಸ್ ಪರ ಪ್ರಚಾರ ಮಾಡಿದ್ದ ಎಂದು ಮೂಲಗಳು ತಿಳಿಸಿವೆ.

ಹೈದರ್ ಅಲಿ ವಿರುದ್ಧ 11 ಪ್ರಕರಣ

'ಹಳೇ ದ್ವೇಷದ ಕಾರಣಕ್ಕೆ ಹೈದರ್ ಅಲಿಯನ್ನು ಕೊಲೆ ಮಾಡಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದಿದೆ. ಆರೋಪಿಗಳು ಪತ್ತೆಯಾದ ಬಳಿಕ ಸ್ಪಷ್ಟ ಕಾರಣ ತಿಳಿಯಲಿದೆ. ಆರೋಪಿಗಳ ಪತ್ತೆಗೆ ಮೂರು ತಂಡ ರಚಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೈದರ್ ಅಲಿ ಆನೆಪಾಳ್ಯದ ಮನೆಗೆ ಹೋಗುವಾಗ ಮಧ್ಯರಾತ್ರಿ 1.30ರ ಸುಮಾರಿಗೆ ಅಡ್ಡಗಟ್ಟಿ ಕೊಲೆ ಮಾಡಿದ್ದಾರೆ. ಆತ ರಾಜಕೀಯ ಪಕ್ಷದ ಮುಖಂಡನಲ್ಲ
ಎಚ್.ಟಿ.ಶೇಖರ್, ಡಿಸಿಪಿ, ಕೇಂದ್ರ ವಿಭಾಗ

ಹೈದರ್ ವಿರುದ್ಧ ಈ ಹಿಂದೆ ಅಶೋಕನಗರ ಠಾಣೆಯಲ್ಲಿ ರೌಡಿಪಟ್ಟಿ ತೆರೆಯಲಾಗಿತ್ತು. ಆತನ ವಿರುದ್ಧ ವಿವಿಧ ಠಾಣೆಗಳಲ್ಲಿ 11 ಪ್ರಕರಣಗಳು ದಾಖಲಾಗಿದ್ದವು. 2014ರಿಂದ ಹೈದರ್ ಅಲಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. 2022ರಿಂದ ರೌಡಿ ಚಟುವಟಿಕೆಯಲ್ಲಿ ಸಕ್ರಿಯ ಆಗಿರಲಿಲ್ಲ ಎಂದು ಮೂಲಗಳು ಹೇಳಿವೆ.

ಉದ್ವಿಗ್ನ ಸ್ಥಿತಿ ನಿರ್ಮಾಣ

ಹೈದರ್ ಅಲಿ ಕೊಲೆಯಾದ ಸುದ್ದಿ ತಿಳಿದು, ಭಾನುವಾರ ಮುಂಜಾನೆ ಆನೆಪಾಳ್ಯ, ಶಾಂತಿನಗರ ಸೇರಿದಂತೆ ವಿವಿಧೆಡೆಯಿಂದ ಅಪಾರ ಬೆಂಬಲಿಗರು ಬೌರಿಂಗ್ ಆಸ್ಪತ್ರೆ ಆವರಣಕ್ಕೆ ಬಂದಿದ್ದರು. ಆಸ್ಪತ್ರೆ ಎದುರು ಜಮಾಯಿಸಿ ಗೇಟ್ ತಳ್ಳಲು ಮುಂದಾದರು. ಹೀಗಾಗಿ ಆಸ್ಪತ್ರೆ ಬಳಿ ಕೆಲವು ಸಮಯ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿತ್ತು. ಹೆಚ್ಚುವರಿ ಪೊಲೀಸರನ್ನು ಕರೆಸಿಕೊಂಡು ಪರಿಸ್ಥಿತಿಯನ್ನು ನಿಯಂತ್ರಿಸಲಾಯಿತು.

ಪ್ರಕರಣ ದಾಖಲು: ಕಾರು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಲೆನ್ಸರ್‌ನ ಮಫ್ಲರ್ ತೆಗೆದು ಬೆಂಕಿ ಉಗುಳುವಂತೆ ಮಾರ್ಪಾಡು ಮಾಡಿದ್ದ ಕಾರನ್ನು ಕಬ್ಬನ್‌ಪಾರ್ಕ್ ಸಂಚಾರ ಠಾಣೆಯ ಪೊಲೀಸರು ಪತ್ತೆ ಮಾಡಿದ್ದಾರೆ. ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಕಾರು ವಶಕ್ಕೆ ಪಡೆದುಕೊಂಡಿದ್ದಾರೆ.

ಶನಿವಾರ ಸಂಜೆ ಕಾರನ್ನು ಚರ್ಚ್‌ಸ್ಟ್ರೀಟ್‌ನಲ್ಲಿ ನಿಲ್ಲಿಸಿಕೊಂಡು, ಕರ್ಕಶ ಶಬ್ದ ಮಾಡುತ್ತಿದ್ದ ದೃಶ್ಯ ಕಂಡುಬಂದಿತ್ತು. ಈ ಮಾರ

ಶಿಕ್ಷಣ

ಓದುವಾಗ ಸಹಪಾಠಿಗಳು ಜೊತೆಗಿದ್ದು ಚರ್ಚಿಸಿದರೆ ತಾವು ಓದಿದ್ದೂ ನೆನಪಿನಲ್ಲಿಡಬಹುದು. ಕ್ಲಿಷ್ಟಕರವೆನಿಸುವ ವಿಷಯಗಳೂ ಸರಳವಾಗಿ ಅರ್ಥ ಆಗುತ್ತವೆ

ಪರೀಕ್ಷೆಗೆ ಬೇಕು ಸಹವರ್ತಿಗಳ ಸಾಥ್

ಆರ್.ಬಿ.ಗುರುಬಸವರಾಜ್

ಮಾರ್ಚ್ ಬರುತ್ತಿದ್ದಂತೆ ಪರೀಕ್ಷಾ ಕಾಲ ಶುರುವಾಯಿತು ಎಂದೇ ಅರ್ಥ. ಪರೀಕ್ಷೆ ಸಿದ್ಧಗೊಂಡವರ ಪಾಲಿಗೆ ವರವಾದರೆ, ಸಿದ್ಧತೆ ನಡೆಸದೇ ಉಳಿದವರ ಪಾಲಿಗೆ ಶಾಪವಿದ್ದಂತೆ.

ಪರೀಕ್ಷೆಯಲ್ಲಿ ಅಂಕ ಗಳಿಸಲು ಸಾಧ್ಯವಾಗದೇ ಇರುವುದು ದಡ್ಡತನವಲ್ಲ. ಅದಕ್ಕೆ ಹಲವು ಕಾರಣಗಳಿರುತ್ತವೆ. ಪರಿಸ್ಥಿತಿಗಳು ಕಲಿಕೆಯಲ್ಲಿ ಹಿಂದುಳಿಯುವಂತೆ ಮಾಡುತ್ತವೆ. ಅಂಥವರಿಗೆ ಒಂದಿಷ್ಟು ಪ್ರೇರಣೆ, ಸ್ಫೂರ್ತಿ ಒದಗಿಸಬಲ್ಲವರು ಸ್ನೇಹಿತರು ಮತ್ತು ಸಹವರ್ತಿಗಳು.

ಕಲಿಕೆಯಲ್ಲಿ ಹಿಂದುಳಿದವರು ಇದ್ದರೆ ಅವರಿಗೆ ಸಹಾಯ ನೀಡಲು ಮುಂದಾಗಬೇಕು. ಕೆಲವು ಸೂತ್ರಗಳು ಇಲ್ಲಿವೆ.

ಯಾಕೆ ಬೇಕು ಸಹಾಯ?

ಶಿಸ್ತುಬದ್ಧ ಅಧ್ಯಯನ: ಪರೀಕ್ಷೆಯು ಯಾವುದೇ ಇರಲಿ ಅದಕ್ಕೆ ಶಿಸ್ತುಬದ್ಧ ತಯಾರಿ ಅಗತ್ಯ. ಕಲಿಕಾರ್ಥಿಗಳು ಪರೀಕ್ಷಾ ತಯಾರಿಯಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿರುತ್ತಾರೆ. ತೀವ್ರ ಸ್ಪರ್ಧೆ, ಉತ್ತಮ ಪ್ರದರ್ಶನ ನೀಡುವ ಒತ್ತಡ, ದೀರ್ಘಾವಧಿಯ ಅಧ್ಯಯನದ ಕೊರತೆ, ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳದಿರುವಿಕೆ, ಓದಿದ್ದು ನೆನಪಿನಲ್ಲಿ ಉಳಿಯದಿರುವಿಕೆ, ಏಕಾಗ್ರತೆಯ ಕೊರತೆ, ಯಾವುದನ್ನು ಎಷ್ಟು ಓದಬೇಕು? ಹೇಗೆ ಓದಬೇಕು? ಎಂಬ ಮಾರ್ಗದರ್ಶನದ ಕೊರತೆ, ಕೌಟುಂಬಿಕ ಸಮಸ್ಯೆಗಳು, ಭವಿಷ್ಯದ ಉದಾಸೀನತೆ ಹೀಗೆ ಹಲವು ಕಾರಣಗಳಿಂದ ಕಲಿಕೆಯು ಕುಂಠಿತವಾಗಿರುತ್ತದೆ. ಇಂತಹ ಕಲಿಕಾರ್ಥಿಗಳಿಗೆ ಮಾನಸಿಕ ಮತ್ತು ಭಾವನಾತ್ಮಕ ಬೆಂಬಲದ ಅಗತ್ಯವಿರುತ್ತದೆ. ಇಂತಹ ಸಮಯದಲ್ಲಿ ಮಾನಸಿಕ ಮತ್ತು ಭಾವನಾತ್ಮಕ ಬೆಂಬಲ ನೀಡುವ ಆಪ್ತರು ಎಂದರೆ ಸ್ನೇಹಿತರು ಮತ್ತು ಸಹವರ್ತಿಗಳು ಮಾತ್ರ. ಎಲ್ಲರಂತೆ ಅವರೂ ಸಹ ಮುಖ್ಯವಾಹಿನಿಗೆ ಬಂದು ಉನ್ನತ ಶಿಕ್ಷಣದವರೆಗೂ ಕಲಿಕೆಯನ್ನು ಮುಂದುವರಿಸಲು ಸ್ನೇಹಿತರು ಮತ್ತು ಸಹವರ್ತಿಗಳ ಸಹಕಾರದ ಅಗತ್ಯವಿದೆ.

ಭಯ ಮುಕ್ತ ಕಲಿಕೆ : ಕಲಿಕೆಯಲ್ಲಿ ಹಿಂದುಳಿದ ಹೆಚ್ಚಿನ ಕಲಿಕಾರ್ಥಿಗಳಲ್ಲಿ ಪರೀಕ್ಷೆಯ ಬಗ್ಗೆ ಭಯ ಇರುತ್ತದೆ. ಕೆಲವರು ಶಿಕ್ಷಕರು ಅಥವಾ ತಮ್ಮ ಪೋಷಕರ ಬಳಿ ಮುಕ್ತವಾಗಿ ಮಾತನಾಡುವ ಮೂಲಕ ಭಯ ನಿವಾರಿಸಿಕೊಳ್ಳುತ್ತಾರೆ. ಆದರೆ ಕೆಲವರು ಪರೀಕ್ಷೆಯ ಕುರಿತಾದ ಭಯವನ್ನು ಸ್ನೇಹಿತರು ಮತ್ತು ಸಹವರ್ತಿಗಳ ಬಳಿ ಬಿಟ್ಟರೆ ಬೇರೆ ಯಾರ ಬಳಿಯೂ ಹಂಚಿಕೊಳ್ಳಲಾರರು. ಸಹವರ್ತಿಗಳು ಮಾತ್ರ ಪರೀಕ್ಷೆಯ ಕುರಿತ ಭಯವನ್ನು ನಿವಾರಿಸಲು ಸಾಧ್ಯ.

ಪ್ರೋತ್ಸಾಹ ಮತ್ತು ಪ್ರೇರಣೆ: ಸಣ್ಣ ಸಣ್ಣ ಗೆಲುವುಗಳು ಕಲಿಕಾರ್ಥಿಗಳಲ್ಲಿ ಉತ್ಸಾಹವನ್ನು ಇಮ್ಮಡಿಸುತ್ತದೆ. ಪರೀಕ್ಷಾ ತಯಾರಿಯ ಸಮಸ್ಯೆಯನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಸಹವರ್ತಿಗಳ ಪ್ರೋತ್ಸಾಹದ ಮಾತುಗಳು ಅದ್ಭುತವಾದ ಪ್ರೇರಣೆಯನ್ನು ನೀಡುತ್ತವೆ. ಇಂತಹ ಸಮಯದಲ್ಲಿ ಸ್ನೇಹಿತರು ಮತ್ತು ಕುಟುಂಬದವರು ಸಕ್ರಿಯವಾಗಿ ಸಕಾರಾತ್ಮಕ ಬಲವರ್ಧನೆಯನ್ನು ಒದಗಿಸಬೇಕು. ಅಧ್ಯಯನಕ್ಕೆ ನೀಡಬೇಕಾದ ಕಠಿಣ ಪರಿಶ್ರಮ ಮತ್ತು ಸಮರ್ಪಣೆಯ ಬಗ್ಗೆ ತಿಳಿವಳಿಕೆ ಮೂಡಿಸಬೇಕು.

ಒತ್ತಡ ನಿವಾರಣೆ : ಪರೀಕ್ಷಾ ಸಮಯದಲ್ಲಿ ಸಹವರ್ತಿಗಳು ನೀಡುವ ಬೆಂಬಲ, ರಚನಾತ್ಮಕ ಸಲಹೆಗಳು ಕಲಿಕೆಯ ಸವಾಲುಗಳನ್ನು ಎದುರಿಸಲು ಸಹಾಯ ಮಾಡುತ್ತವೆ. ಕಲಿಕೆಯ ಅಡೆತಡೆಗಳನ್ನು ನಿವಾರಿಸಲು ಅಗತ್ಯವಾದ ಭಾವನಾತ್ಮಕ ಬೆಂಬಲ ಹೆಚ್ಚು ಸಮರ್ಪಕವಾದುದು. ❖

ಏನು ಮಾಡಬಹುದು?

- ಕಲಿಕಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳನ್ನು ನಿವಾರಿಸಲು ಸಹಾಯ ಮಾಡಿ.
- ಅವರ ಓದಿನ ಸಮಯ ತಿಳಿದುಕೊಂಡು ಅಗತ್ಯ ಮಾರ್ಗದರ್ಶನ ಮಾಡುವುದು.
- ಕಲಿಕೆಯಲ್ಲಿ ಹಿಂದಿರುವ ಕ್ಷೇತ್ರಗಳನ್ನು ತಿಳಿದುಕೊಂಡು ಸರಳವಾದ ಉಪಕ್ರಮಗಳ ಮೂಲಕ ಪರಿಹಾರ ಸೂಚಿಸುವುದು.
- ಭಾವನಾತ್ಮಕ ಬೆಂಬಲ ನೀಡುವ ಮೂಲಕ ಕಲಿಕೆಯಲ್ಲಿ ಭರವಸೆ ತುಂಬಿ.
- ಪರೀಕ್ಷಾ ಕೇಂದ್ರದವರೆಗೂ ಹೋಗಿ ಅವರ ಭಯ ನಿವಾರಿಸುವುದು.
- ನಿಮ್ಮ ಕಲಿಕೆಯ ಅನುಭವಗಳನ್ನು ಅವರೊಂದಿಗೆ ಹಂಚಿಕೊಳ್ಳುವುದು.
- ಕಲಿಕೆಯ ವೇಳೆ ಜೊತೆಗಿದ್ದು ಅವರಿಗೆ ಧೈರ್ಯ ಮತ್ತು ಸ್ಫೂರ್ತಿ ತುಂಬುವುದು.
- ನಿತ್ಯವೂ ಅವರಿಗೆ ಸಣ್ಣ ಸಣ್ಣ ಟಾರ್ಗೆಟ್ ನೀಡಿ ಅದನ್ನು ಪೂರೈಸಲು ಸಹಾಯ ಮಾಡುವುದು.
- ಕಲಿಕೆಯು ಕೇವಲ ಪರೀಕ್ಷೆಗಾಗಿ ಅಲ್ಲ, ಉತ್ತಮ ಬದುಕಿಗಾಗಿಯೂ ಕಲಿಕೆಯು ಮಹತ್ವದ್ದು ಎಂಬುದನ್ನು ಅವರಿಗೆ ಅರ್ಥ ಮಾಡಿಸಿ.
- ಫಲಿತಾಂಶವೇ ಕಲಿಕೆಯ ಅಂತಿಮ ಮೈಲಿಗಲ್ಲು ಅಲ್ಲ, ಅದರಾಚೆಯೂ ಅದ್ಭುತವಾದ ಜೀವನವಿದೆ ಎಂಬುದನ್ನು ಸ್ಪಷ್ಟಪಡಿಸಿ.

ವಿದ್ಯಾರ್ಥಿ ವೇತನ ಕೈಪಿಡಿ

ಎಸ್‌ಬಿಐಎಫ್ ನ ಆಶಾ ಸ್ಕಾಲರ್‌ಷಿಪ್

ಭಾರತದ ದೊಡ್ಡ ಸ್ಕಾಲರ್‌ಷಿಪ್‌ಗಳಲ್ಲಿ ಎಸ್‌ಬಿಐಎಫ್ ಆಶಾ ಸ್ಕಾಲರ್‌ಷಿಪ್ ಒಂದಾಗಿದ್ದು, ಎಸ್‌ಬಿಐ ಫೌಂಡೇಷನ್‌ನ ಎಜುಕೇಷನ್ ವರ್ಟಿಕಲ್-ಇಂಟಗ್ರೇಟೆಡ್ ಲರ್ನಿಂಗ್ ಮಿಶನ್ (ಐಎಲ್‌ಎಂ) ನ ಅಡಿಯಲ್ಲಿ ಬರುವ ಒಂದು ಉಪಕ್ರಮವಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೆರವು ನೀಡುತ್ತದೆ.

ಅರ್ಹತೆ: ವಿದೇಶದಲ್ಲಿ ಸ್ನಾತಕೋತ್ತರ ಅಥವಾ ಅದಕ್ಕಿಂತ ಹೆಚ್ಚಿನ ಕೋರ್ಸ್‌ಗೆ ಸೇರಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಭಾರತೀಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 75 ಅಥವಾ ಹೆಚ್ಚಿನ ಅಂಕಗಳನ್ನು ಗಳಿಸಿರಬೇಕು ಮತ್ತು ಅವರ ಕುಟುಂಬದ ವಾರ್ಷಿಕ ಆದಾಯವು ₹ 6,00,000ದವರೆಗೆ ಇರಬೇಕು.

ಆರ್ಥಿಕ ಸಹಾಯ:₹ 20,00,000ದವರೆಗೆ ಅಥವಾ ಕೋರ್ಸ್-ಸಂಬಂಧಿತ ಖರ್ಚುಗಳ ಶೇ 50 (ಯಾವುದು ಕಡಿಮೆಯೋ ಅದು).

ಅರ್ಜಿ ಸಲ್ಲಿಸಲು ಕೊನೆ ದಿನ: 31-03-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/SBIFS12

ದ ಡೂನ್ ಸ್ಕೂಲ್ ಪ್ರವೇಶಕ್ಕೆ...

ದ ಡೂನ್ ಸ್ಕೂಲ್ ಸ್ಕಾಲರ್‌ಷಿಪ್ ಎಕ್ಸಾಮಿನೇಷನ್ (ಡಿಎಸ್‌ಎಸ್‌ಇ), ಇದು ಡೂನ್ ಸ್ಕೂಲ್, ಡೆಹ್ರಾಡೂನ್, ಉತ್ತರಾಖಂಡ ನಡೆಸುವ ವಾರ್ಷಿಕ ಪ್ರವೇಶ ಪರೀಕ್ಷೆಯಾಗಿದೆ. ಶಾಲಾ ಶುಲ್ಕವನ್ನು ಪಾವತಿಸಲು ಅಸಮರ್ಥರಾದಂತಹ ಕುಟುಂಬಗಳ, 7 ಅಥವಾ 8ನೇ ತರಗತಿಗೆ ದಾಖಲಾಗುವಂಥ ಬಾಲಕರಿಗೆ ಈ ವಿದ್ಯಾರ್ಥಿವೇತನ ಪರೀಕ್ಷೆಯು ಲಭ್ಯವಿರುತ್ತದೆ.

ಅರ್ಹತೆ: ಭಾರತೀಯ ವಿದ್ಯಾರ್ಥಿಗಳಾಗಿರಬೇಕು. ಅಭ್ಯರ್ಥಿಗಳು 2025ರ ಸೆಪ್ಟೆಂಬರ್ 30ಕ್ಕೆ 11ರಿಂದ 13 ವರ್ಷ ವಯಸ್ಸಿನವರಾಗಿರಬೇಕು. ವಿದ್ಯಾರ್ಥಿಗಳು ಮುಂಬರುವ ಶೈಕ್ಷಣಿಕ ವರ್ಷಕ್ಕೆ 7 ಅಥವಾ 8ನೇ ತರಗತಿಗೆ ದಾಖಲಾತಿಯನ್ನು ಪಡೆದಿರಬೇಕು.

ಆರ್ಥಿಕ ಸಹಾಯ: ವಿದ್ಯಾರ್ಥಿವೇತನದ ರೂಪದಲ್ಲಿ ಆರ್ಥಿಕ ಬೆಂಬಲದ ಸಹಿತ ಡೂನ್ ಸ್ಕೂಲ್‌ನಲ್ಲಿ ವಿದ್ಯಾಭ್ಯಾಸವನ್ನು ಮುಂದುವರಿಸುವ ಅವಕಾಶ.

ಅರ್ಜಿ ಸಲ್ಲಿಸಲು ಕೊನೆ ದಿನ: 15-04-2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್ ಮತ್ತು ಆಫ್‌ಲೈನ್ ಇ-ಮೇಲ್ ಮೂಲಕ: admissions@doonschool.com

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/DSSE2

ವಿದೇಶದಲ್ಲಿ ಓದಲು ಜೆ.ಎನ್.ಟಾಟಾ ಎಂಡೋಮೆಂಟ್ ಲೋನ್

ವಿದೇಶದಲ್ಲಿ ಕಲಿಯಲು ಇಚ್ಛಿಸುವ ಭಾರತೀಯ ವಿದ್ಯಾರ್ಥಿಗಳಿಗೆ ಜೆ.ಎನ್.ಟಾಟಾ ಎಂಡೋಮೆಂಟ್ 'ಲೋನ್ ಸ್ಕಾಲರ್‌ಷಿಪ್ ನೀಡುತ್ತಿದೆ.

ಅರ್ಹತೆ: ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ಕಾಲೇಜು/ಸಂಸ್ಥೆಯಲ್ಲಿ ಪದವಿಯ ಕೊನೆಯ ವರ್ಷ ಕಲಿಯುತ್ತಿರಬೇಕು. ಅಭ್ಯರ್ಥಿಗಳು ವಿದೇಶದಲ್ಲಿ ಸ್ನಾತಕೋತ್ತರ/ಡಾಕ್ಟರಲ್/ಪೋಸ್ಟ್ ಡಾಕ್ಟರಲ್ ಅಧ್ಯಯನ ಮುಂದುವರಿಸಲು ಯೋಜನೆ ಹಾಕಿರಬೇಕು.

ಈ ಮೊದಲು ಈ ಸ್ಕಾಲರ್‌ಷಿಪ್ ಪಡೆದವರೂ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಅಭ್ಯರ್ಥಿಗಳು ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ 60ರಷ್ಟು ಅಂಕ ಗಳಿಸಿರಬೇಕು. ಅಭ್ಯರ್ಥಿಗಳ ಗರಿಷ್ಠ ವಯೋಮಿತಿ 45.

ಆರ್ಥಿಕ ಸಹಾಯ: ₹ 10 ಲಕ್ಷದವರೆಗೆ ಲೋನ್ ಸ್ಕಾಲರ್‌ಷಿಪ್

ಅರ್ಜಿ ಸಲ್ಲಿಸಲು ಕೊನೆ ದಿನ: 07-03-2025

ಅರ್ಜಿ ಸಲ್ಲಿಸುವ ವಿಧಾನ:ಆನ್‌ಲೈನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url:www.b4s.in/praja/JNT9 ❖

ಏಕಾಗ್ರತೆ ಇಲ್ಲದಂತಾಗಿದೆ

ನಾನು16 ವರ್ಷದ ಹುಡುಗಿ. ಓದುವಾಗ ಬಹಳ ಕಷ್ಟವಾಗುತ್ತದೆ. ಒಂದು ಪುಟವನ್ನು ಓದಿ ಮುಗಿಸುವಷ್ಟರಲ್ಲಿ ಮೊದಲ ಪ್ಯಾರಾದಲ್ಲಿ ಓದಿದ್ದು ಮರೆತುಹೋಗುತ್ತದೆ. ಏನೇನೋ ನೆನಪುಗಳು ಹಾಗೂ ಯಾವ್ಯಾವುದೋ ಸನ್ನಿವೇಶಗಳು ಮನಸ್ಸಿನ ತುಂಬಾ ಓಡುತ್ತವೆ. ಏಕಾಗ್ರತೆಯಿಂದ ಓದಲಿಕ್ಕೆ ಸಾಧ್ಯವಾಗುತ್ತಿಲ್ಲ. ಫೇಲಾಗುತ್ತೇನೆ ಅಂತ ಆತಂಕವಾಗುತ್ತದೆ. ಯಾರೋ ನನ್ನನ್ನು ಗಮನಿಸುತ್ತಿರುವಂತೆ, ಜೋರಾಗಿ ಬೈಯ್ದಂತೆ ಅನ್ನಿಸುತ್ತದೆ. ಬಹಳ ಭಯವಾಗುತ್ತದೆ. ಇದರಿಂದ ಪಾರಾಗುವ ಬಗೆ ಹೇಗೆ?

ನಿಜಕ್ಕೂ ಇದೊಂದು ಗಂಭೀರವಾದ ಸಮಸ್ಯೆ. ಯಾರಲ್ಲಾದರೂ ಇದರ ಬಗ್ಗೆ ಹೇಳಿಕೊಂಡರೆ, ಹುಚ್ಚು ಹುಚ್ಚಾಗಿ ಏನೇನೋ ಆಲೋಚನೆ ಮಾಡುವುದನ್ನು ನಿಲ್ಲಿಸಿ ಮತ್ತೆ ಮತ್ತೆ ಓದು. ಎಲ್ಲಾ ನೆನಪಿರುತ್ತದೆ ಎನ್ನುತ್ತಾರೆ. ಬಹಳ ವಿಚಲಿತಗೊಂಡ ಮನಸ್ಸು ಅಷ್ಟು ಸುಲಭದಲ್ಲಿ ಸರಿಯಾಗುವುದಿಲ್ಲ. ಮನಸ್ಸು ಚಂಚಲ. ಎಲ್ಲರ ಮನಸ್ಸೂ ಅಷ್ಟೇ. ನಿಮ್ಮ ವಯಸ್ಸಿನಲ್ಲಿ ಅದು ಸ್ವಲ್ಪ ಹೆಚ್ಚು.

ಸಮಾಧಾನ

ಡಾ.ಡಿ.ಎ0. ಹೆಗಡೆ
ಸಮಾಲೋಚಕರು

ಈಗ ನಿಮ್ಮ ಮನಸ್ಸಿನ ಚಂಚಲತೆಗೆ ಕಾರಣಗಳನ್ನು ಹುಡುಕಬೇಕು. ಹಾರ್ಮೋನಿಗಳಿಂದಾಗಿ ದೈಹಿಕ ಹಾಗೂ ಮಾನಸಿಕವಾಗಿ ಏರು ಪೇರಾಗುತ್ತಿದೆಯೆ ಎನ್ನುವುದನ್ನು ಗಮನಿಸಿ. ದೈಹಿಕವಾಗಿ ತೊಂದರೆ ಇರುವಾಗ ಮನಸ್ಸು ಸಮಾಧಾನದಿಂದ ಇರಲಾರದು. ಮಾನಸಿಕವಾಗಿ ಆತಂಕವಾದಾಗಲೂ ದೈಹಿಕವಾಗಿ ಆರೋಗ್ಯದಿಂದ ಇರಲಿಕ್ಕಾಗದು. ವ್ಯಕ್ತಿಯ ಯಶಸ್ಸಿ ಬದುಕಿಗೆ ದೈಹಿಕ ಹಾಗೂ ಮಾನಸಿಕ ಆರೋಗ್ಯ ಬಹಳ ಮುಖ್ಯ.

ನೀವು ಮೊದಲಿನಿಂದ ಓದುವ ಅಭ್ಯಾಸವನ್ನು ಹೇಗೆ ರೂಢಿಸಿಕೊಂಡಿದ್ದೀರಿ? ಅವತ್ತಿನ ಕೆಲಸ ಅವತ್ತೇ ಮಾಡಿ ಮುಗಿಸುವುದಾಗಿದ್ದರೆ ಚೆನ್ನಾಗಿತ್ತು. ನಾಳೆ ಮಾಡಿದರಾಯಿತು ಎನ್ನುವ ಮನಸ್ಥಿತಿಯಿಂದ ಸುಳ್ಳು ಹೇಳುವುದು ರೂಢಿಯಾಗಿರುತ್ತದೆ. ಓದುವ ವಿಷಯದಲ್ಲಿ (ಬೇರೆ ವಿಷಯದಲ್ಲಿಯೂ ಸಹ) ನಿಮಗೆ ನೀವೇ ಸುಳ್ಳು ಹೇಳಿಕೊಂಡು ಸಮಾಧಾನಿಸುವುದು ರೂಢಿಯಾಗಿರುತ್ತದೆ. ನಿದ್ದೆ ಕಡಿಮೆಯಾಗಿರುತ್ತದೆ. ಅದರಿಂದಾಗಿ ನಿರಾಸಕ್ತಿ, ಅಶಕ್ತತೆ, ಉದಾಸೀನತೆ ಮುಂತಾದ ಎಲ್ಲವೂ ಒಂದೊಂದಾಗಿ ನಿಮ್ಮನ್ನು ಆವರಿಸಿಕೊಂಡಿರುತ್ತವೆ. ಸರಿಯಾದ ಸಮಯಕ್ಕೆ, ಸಮತೋಲನದ ಆಹಾರವನ್ನು ಸೇವಿಸುವುದು ಅಗತ್ಯ.

ಮೊದಲಿನಿಂದಲೂ ಸರಿಯಾಗಿ, ಶಿಸ್ತಿನಿಂದ ಓದಲಿಲ್ಲ, ಪರೀಕ್ಷೆ ಸಮೀಪಿಸುತ್ತಿದ್ದಂತೆಯೇ ಓದಲಿಕ್ಕೆ ಶುರುಮಾಡಿದ್ದರಿಂದ ಆತಂಕ ಹೆಚ್ಚಾಗುತ್ತಿದೆ.

ಪರೀಕ್ಷೆಯ ಮಹತ್ವವನ್ನು, ಓದಬೇಕಾದ ಅಗತ್ಯವನ್ನು ನಿಮಗೆ ನೀವೇ ಪದೇ ಪದೇ ಹೇಳಿಕೊಳ್ಳಿ. ನೀವು ಸೋಲಕೂಡದು ಎನ್ನುವುದನ್ನು ನಿರ್ಧರಿಸಿಕೊಳ್ಳಿ. ಓದುವಾಗ ಮತ್ತೆ ಏನೇನು ನೆನಪಾಗುತ್ತದೆ ಎನ್ನುವುದನ್ನು ಗಮನಿಸಿ. ಬರೆದು ಪಟ್ಟಿ ಮಾಡಿ.

ನಿಮಗೆ ಯಾರು, ಹೇಗೆ, ಏನಂತ ಬೈಯ್ದಂತೆ ಕೇಳಿಸುತ್ತದೆ ಎನ್ನುವುದನ್ನು ಗಮನಿಸಿ. ಯಾವಾಗಿನಿಂದ ನಿಮಗೆ ಆ ಧ್ವನಿ ತೊಂದರೆ ಕೊಡುತ್ತದೆ ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಬಹಷ್ಟು ಸಂದರ್ಭಗಳಲ್ಲಿ ಆ ಧ್ವನಿ ನಿಮಗೆ ಪರಿಚಯದ್ದೇ ಆಗಿರುತ್ತದೆ. ಅದು ಯಾರದ್ದು ಎನ್ನುವುದನ್ನು ಗುರುತಿಸಿ. ಗುರುತಿಸಿಕೊಂಡ ನಂತರ ಆ ವ್ಯಕ್ತಿಯ ಬಗೆಗೆ ನಿಮ್ಮ ಮನಸ್ಸಿನೊಳಗಿನ ಕೆಟ್ಟ ಭಾವನೆಯನ್ನು, ಕೆಟ್ಟ ನೆನಪುಗಳನ್ನು ಹೊರಗೆ ಕಳಿಸಿ. ರಿಲಾಕ್ಸ್ ಮಾಡಿ. ಒಂದು ದಿನಚರಿಯನ್ನು ತಯಾರಿಸಿಕೊಳ್ಳಿ. ಪ್ರತಿದಿನ ಬೆಳಿಗ್ಗೆ ಮತ್ತು ಸಾಯಂಕಾಲ ಕನಿಷ್ಠ ಎರಡು ಸಲ ಕಣ್ಣು ಮುಚ್ಚಿಕೊಂಡು ಕುಳಿತುಕೊಳ್ಳಿ. ಉಸಿರಾಟದ ಮೇಲೆ ಗಮನ ಕೇಂದ್ರೀಕರಿಸಿ. ಮನಸ್ಸು ನಿರಾಳವಾಗುವ ತನಕ (ಹತ್ತರಿಂದ ಹದಿನೈದು ನಿಮಿಷಗಳು) ಉಸಿರಾಟದ ಮೇಲೆ ಗಮನವಿರಿಸಿ. ಹಗಲು ಮಲಗಬೇಡಿ. ರಾತ್ರಿ ಬೇಗ ಮಲಗಿ. ಬೇಗ ಏಳುವುದನ್ನು ರೂಢಿಸಿಕೊಳ್ಳಿ. ಒಳ್ಳೆಯ ನಿದ್ರೆಯಿಂದ ಮನಸ್ಸಿಗೆ ಹೆಚ್ಚು ಸಮಾಧಾನ ಸಿಗುತ್ತದೆ. ಓದುವ ಗೆಳೆಯರ ಬಳಿ ವಿಷಯಗಳ ಬಗ್ಗೆ ಚರ್ಚಿಸಿ. ಯಾವುದಕ್ಕೂ ಗಾಬರಿಯಾಗಬೇಡಿ. ಮನಸ್ಸಿನಲ್ಲಿ ಸಮಾಧಾನ ಹೆಚ್ಚಿದಷ್ಟೂ, ಏಕಾಗ್ರತೆ ಹೆಚ್ಚುತ್ತದೆ. ಆತಂಕ ಕಡಿಮೆಯಾಗುತ್ತದೆ. ನೆನಪಿನ ಶಕ್ತಿ ಹೆಚ್ಚುತ್ತದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ವರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

31) ಹಸಿರು ಕ್ರಾಂತಿ ಎಂದರೇನು?

ಉತ್ತರ:– 1967–70ರ ಅವಧಿಯಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಆದಂತಹ ಶೀಘ್ರ ಪ್ರಗತಿಯನ್ನು 'ಹಸಿರು ಕ್ರಾಂತಿ' ಎಂದು ಗುರುತಿಸಲಾಗುತ್ತಿದೆ. 1967ರಲ್ಲಿ 74 ದಶಲಕ್ಷ ಟನ್ನುಗಳಷ್ಟಿದ್ದ ಆಹಾರ ಧಾನ್ಯಗಳ ಉತ್ಪಾದನೆಯು 1970ರ ವೇಳೆಗೆ 108ದಶಲಕ್ಷ ಟನ್‌ಗಳಿಗೆ ಹೆಚ್ಚಿತ್ತು. ಕೇವಲ 3 ವರ್ಷಗಳ ಅವಧಿಯಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು ಅನಾಧ ಪ್ರಮಾಣದಲ್ಲಿ ಹೆಚ್ಚಳವಾಯಿತು. ಇದು ಹಸಿರು ಬೆಳೆಗಳಲ್ಲಾದ ಪ್ರಗತಿಯಾದುದರಿಂದ ಇದಕ್ಕೆ ಹಸಿರು ಕ್ರಾಂತಿ ಎಂದು ಹೆಸರಿಸಲಾಯಿತು.

32) ಮಣ್ಣಿನ ಸವೆತದ ಕೆಟ್ಟ ಪರಿಣಾಮಗಳು ಯಾವುವು?

ಉತ್ತರ:– ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಅವುಗಳಲ್ಲಿ ಮುಖ್ಯವಾದವುಗಳೆಂದರೆ,

1) ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.

2) ನದಿಗಳಲ್ಲಿ ಹೂಳು ತುಂಬುವುದರಿಂದ ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.

3) ಜಲಾಶಯ ಮತ್ತು ಕೆರೆಗಳಲ್ಲಿ ಹೂಳು ತುಂಬುವುದರಿಂದ ಅವುಗಳಲ್ಲಿ ನೀರು ಸಂಗ್ರಹಿಸುವ ಸಾಮರ್ಥ್ಯ ಕಡಿಮೆಯಾಗುತ್ತದೆ.

4) ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು. ಇದರಿಂದ ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

ಭಾರತವು ವ್ಯವಸಾಯ ಪ್ರಧಾನವಾದ ರಾಷ್ಟ್ರ. ಇದರಿಂದ ಭೂ ಸವೆತ ವ್ಯವಸಾಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುವುದು. ಆದುದರಿಂದ ಫಲವತ್ತತೆ ಹಾಗೂ ಉತ್ಪಾದನೆಯನ್ನು ಕಾಪಾಡಲು ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ.

**33) ಭಾರತೀಯ ರಾಜ್ಯಗಳನ್ನು ನಿಯಂತ್ರಿಸಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯು ಹ

ಕರ್ನಾಟಕ–ಮಹಾರಾಷ್ಟ್ರ ಮಧ್ಯೆ ಆರಂಭವಾಗದ ಬಸ್ ಸಂಚಾರ: ಬಂಧಿತರ ಸಂಖ್ಯೆ 5ಕ್ಕೆ

ಹಲ್ಲೆ ಪ್ರಕರಣ: ಮತ್ತೊಬ್ಬನ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಸಣ್ಣ ಬಾಳೇಕುಂದ್ರಿ ಗ್ರಾಮದಲ್ಲಿ ಶುಕ್ರವಾರ ವಾಯವ್ಯ ಸಾರಿಗೆ ಸಂಸ್ಥೆಯ ಬಸ್ ನಿರ್ವಾಹಕ ಮತ್ತು ಚಾಲಕ ಮೇಲಿನ ಹಲ್ಲೆ ಪ್ರಕರಣದ ಸಂಬಂಧ ಮತ್ತೊಬ್ಬ ಆರೋಪಿ ಬಾಳೇಕುಂದ್ರಿಯ ಮೋಹನ ಹಂಚಿನಾಳ ಅವರನ್ನು ಮಾರಿಹಾಳ ಠಾಣೆ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಕಾನೂನು ಸಂಘರ್ಷಕ್ಕೆ ಒಳಪಟ್ಟ ಬಾಲಕ ಹಾಗೂ ಮೂವರು ಆರೋಪಿಗಳು ಸೇರಿ ನಾಲ್ವರನ್ನು ಈಗಾಗಲೇ ಬಂಧಿಸಲಾಗಿದೆ.

ಕರ್ನಾಟಕ-ಮಹಾರಾಷ್ಟ್ರ ಮಧ್ಯೆ ಭಾನುವಾರವೂ ಬಸ್ ಸಂಚಾರ ಸ್ಥಗಿತಗೊಂಡಿದ್ದು, ಪ್ರಯಾಣಿಕರು ಪರದಾಡಿದರು. ಬೆಳಗಾವಿಯಿಂದ ಕೊಲ್ಹಾಪುರ, ಪುಣೆ, ಸಾತಾರಾ, ಮುಂಬೈ ಮತ್ತಿತರ ಕಡೆ ತೆರಳುವವರು ಬಸ್ ಸಿಗದೆ ಹೈರಾಣಾದರು. ಎರಡೂ ರಾಜ್ಯಗಳ ಸಾರಿಗೆ ಸಂಸ್ಥೆಗಳ ಬಸ್‌ಗಳು ತಮ್ಮ ಗಡಿಯವರೆಗಷ್ಟೇ ಕಾರ್ಯಾಚರಣೆ ನಡೆಸಿದವು. ಚಿಕ್ಕೋಡಿಯ ಕೆಲವು ಬಸ್ ಮಾತ್ರ ಮಹಾರಾಷ್ಟ್ರದ ಮೀರಜ್‌ಗೆ ತೆರಳಿದವು.

ಕರ್ನಾಟಕ ಬಸ್‌ಗೆ ಮಸಿ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವೋಲ್ವೊ ಬಸ್‌ಗೆ ಮಹಾರಾಷ್ಟ್ರದ ನಾಸಿಕ್‌ನಲ್ಲಿ ಕಪ್ಪು ಮಸಿ ಬಳಿಯಲಾಗಿದೆ. ಬೆಳಗಾವಿಯಿಂದ ನಾಸಿಕ್‌ಗೆ ಹೋಗಿದ್ದ ಬಸ್‌ಗೆ ಮಸಿ ಬಳಿದು, 'ಮನಸೇ ಮರಾಠಿ' ಹಾಗೂ 'ಜೈ ಮಹಾರಾಷ್ಟ್ರ' ಎಂದು ಬರೆಯಲಾಗಿದೆ.

'ಬಸ್ ನಿರ್ವಾಹಕನ ಮೇಲೆ ಹಲ್ಲೆ ಮಾಡಿದವರ ವಿರುದ್ಧ ಕಠಿಣ ಕ್ರಮ ಜರುಗಿಸುವ ಜತೆಗೆ, ನಿರ್ವಾಹಕನ ವಿರುದ್ಧ ದಾಖಲಿಸಿದ ಪೋಕ್ಸೊ ಪ್ರಕರಣ ಹಿಂದಕ್ಕೆ ಪಡೆಯುವವರೆಗೆ ಹೋರಾಡುತ್ತೇವೆ. ನಮ್ಮ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಟಿ.ಎ.ನಾರಾಯಣಗೌಡ

ಮಹಾರಾಷ್ಟ್ರದ ವಿವಿಧ ನಗರಗಳಿಗೆ ತೆರಳುವವರು ಬೆಳಗಾವಿ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಭಾನುವಾರ ಬಸ್‌ಗಾಗಿ ಕಾದರು

ಪ್ರಜಾವಾಣಿ ಚಿತ್ರ: ಏಕನಾಥ ಆಗಸಿಮನಿ

ಮಹಾರಾಷ್ಟ್ರದ ನಾಸಿಕ್‌ನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವೋಲ್ವೊ ಬಸ್‌ಗೆ ಕಪ್ಪು ಮಸಿ ಬಳಿಯಲಾಗಿದೆ

ನೇತೃತ್ವದಲ್ಲಿ ಫೆ.25ರಂದು ನಗರ ಪೊಲೀಸ್ ಆಯುಕ್ತರ ಕಚೇರಿಗೆ ಮುತ್ತಿಗೆ ಹಾಕುತ್ತೇವೆ. ಅಲ್ಲಿಂದ ಸಣ್ಣ ಬಾಳೇಕುಂದ್ರಿಯವರೆಗೆ ಮೆರವಣಿಗೆ ಮಾಡಿ ಪ್ರತಿಭಟಿಸುತ್ತೇವೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ಅಧ್ಯಕ್ಷ ದೀಪಕ ಗುಡಗನಟ್ಟಿ ತಿಳಿಸಿದ್ದಾರೆ.

ಸಾರಿಗೆ ಸಚಿವರ ಭೇಟಿ ಇಂದು: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸೋಮವಾರ ಬೆಳಗಾವಿಗೆ ಬರಲಿದ್ದು, ಬೆಳಿಗ್ಗೆ 9.30ಕ್ಕೆ ಪ್ರಾದೇಶಿಕ ಸಾರಿಗೆ ಕಚೇರಿಗೆ ಭೇಟಿ ನೀಡಿ ಕಾಮಗಾರಿಗಳನ್ನು ಪರಿಶೀಲಿಸಲಿದ್ದಾರೆ.

ಒಳ್ಳೆ ಬೆಳವಣಿಗೆಯಲ್ಲ–ಪಾಟೀಲ

ಹುಬ್ಬಳ್ಳಿ: 'ವಾಯವ್ಯ ಸಾರಿಗೆ ಸಂಸ್ಥೆಯ ಬಸ್ ನಿರ್ವಾಹಕ ಮತ್ತು ಚಾಲಕ ಮೇಲಿನ ಹಲ್ಲೆ ಪ್ರಕರಣ ಬೇರೆಬೇರೆ ಸ್ವರೂಪ ಪಡೆಯುತ್ತಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಬಿಕ್ಕಟ್ಟು ಸೃಷ್ಟಿಯಾಗಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ' ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

ಭಾನುವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಕನ್ನಡಿಗರು ಮತ್ತು ಮರಾಠಿಗರು ಎನ್ನುವ ಭೇದ ಸರಿಯಲ್ಲ. ಬೆಳಗಾವಿಯಲ್ಲಿ ಎಲ್ಲರೂ ನೆಮ್ಮದಿಯಾಗಿದ್ದಾರೆ. ಹೀಗಿದ್ದಾಗ ಅನವಶ್ಯಕ ವಿಚಾರಗಳು ಮುನ್ನಲೆಗೆ ಬರಬಾರದು. ನಿರ್ವಾಹಕರ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿದ್ದರಿಂದ ಸೃಷ್ಟಿಯಾಗಿರುವ ಗೊಂದಲ ಶೀಘ್ರ ಪರಿಹರಿಸಲಾಗುವುದು' ಎಂದರು.

'ಸಂಪುಟ ಪುನರ್ ರಚನೆ, ಏಳು ಸಚಿವರ ಬದಲಾವಣೆ, ಮುಖ್ಯಮಂತ್ರಿ ಬದಲಾವಣೆ ಎಲ್ಲವೂ ಕಪೋಲಕಲ್ಪಿತ, ಅನವಶ್ಯಕ ಚರ್ಚೆ. ಗೃಹ ಸಚಿವ ಜಿ. ಪರಮೇಶ್ವರ ಅವರು ರಾಜೀನಾಮೆ ನೀಡುವ ವಿಚಾರ ನನಗೆ ಗೊತ್ತಿಲ್ಲ' ಎಂದು ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದರು.

'ಪ್ರಸ್ತುತ ಮಾರ್ಚ್‌ನಲ್ಲಿ ಮಂಡನೆಯಾಗುವ ರಾಜ್ಯ ಬಜೆಟ್ ವಿಚಾರದಲ್ಲಿ ಸಾಕಷ್ಟು ಕಠಿಣ ಪರಿಸ್ಥಿತಿ ಎದುರಿಸುತ್ತಿದ್ದೇವೆ. ನಮಗೆ ಕೊಡಬೇಕಾದ ಪಾಲನ್ನು ಕೇಂದ್ರ ಸರ್ಕಾರ ಕೊಡುತ್ತಿಲ್ಲ. ಆದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಣಾಕ್ಷತನದಿಂದ ಬಜೆಟ್ ಮಂಡಿಸಲಿದ್ದಾರೆ' ಎಂದರು.

'ಸಿ.ಎಂ ಸ್ಥಾನ ಇರುವುದೇ ರೆಕಾರ್ಡ್ ಮುರಿಯಲು'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ನಾಯಕತ್ವ ಬದಲಾವಣೆ ಯಾಗುವ ವಿಚಾರ ಇಲ್ಲವೇ ಇಲ್ಲ. ಮುಖ್ಯಮಂತ್ರಿ ಸ್ಥಾನ ಇರುವುದೇ ರೆಕಾರ್ಡ್ ಮುರಿಯುವುದಕ್ಕೆ. ಅವಕಾಶ ಸಿಕ್ಕಾಗ ರಾಜ್ಯದ ಅಭಿವೃದ್ಧಿ ಮಾಡಬೇಕು, ಜನರ ಹಿತಕಾಪಾಡಿ ಶೋಷಿತರನ್ನು ರಕ್ಷಣೆ ಮಾಡಬೇಕು' ಎನ್ನುವ ಮೂಲಕ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಮುಖ್ಯಮಂತ್ರಿ ಬದಲಾವಣೆಯ ಊಹಾಪೋಹಗಳನ್ನು ತಳ್ಳಿ ಹಾಕಿದರು.

ಡಾ.ಎಚ್.ಸಿ. ಮಹದೇವಪ್ಪ

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಸಿ.ಎಂ ಬದಲಾವಣೆ ತೀರ್ಮಾನವನ್ನು ಹೈಕಮಾಂಡ್ ತೆಗೆದುಕೊಳ್ಳುತ್ತದೆ. ನಾನು, ಇನ್ಯಾರೋ ಮಾತನಾಡಿ ನಿರ್ಧಾರ ಮಾಡುವುದಕ್ಕೆ ಆಗಲ್ಲ. ಈಗಾಗಲೇ ಹೈಕಮಾಂಡ್ ನಿರ್ಧರಿಸಿದ್ದು, ಏನೇ ಮಾಡಬೇಕಾದರೂ ಅವರ ವ್ಯಾಪ್ತಿಗೆ ಬರುತ್ತದೆ' ಎಂದರು.

ದಲಿತ ಸಿ.ಎಂ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ದಲಿತರು ಇಡೀ ದೇಶದಲ್ಲಿ ಗಣನೀಯ ಪ್ರಮಾಣದಲ್ಲಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಸಹ ಅಧಿಕಾರ ನಿರ್ಣಯ ಸ್ತರದಲ್ಲಿ ದಲಿತರು ಇರಬೇಕೆಂದು ಬಯಸಿದ್ದರು. ವರಿಷ್ಠರು-ಯಾವಾಗ ಸೂಕ್ತ ಸಮಯದಲ್ಲಿ ನಿರ್ಧಾರ ಮಾಡುತ್ತಾರೋ, ಜನರ ಆಶೀರ್ವಾದ ಸಿಗುತ್ತದೆಯೋ ಆ ಸಮಯದಲ್ಲಿ ಆಗುತ್ತದೆ' ಎಂದು ಹೇಳಿದರು.

'ದಲಿತ ಸಮಾವೇಶ ಮಾಡಲು ಯಾರ ಅಪಸ್ವರವೂ ಇಲ್ಲ. ರಾಜಕೀಯ ಪಕ್ಷಗಳು, ಸಂಘಟನೆಗಳು, ಸಮಾಜದ ಸಮಾವೇಶಗಳು ನಡೆಯುತ್ತಲೇ ಇರುತ್ತವೆ. ದಲಿತರ ಸಮಸ್ಯೆಗಳು ಇರುವ ತನಕ ಅವು ನಿರಂತರವಾಗಿ ನಡೆಯುತ್ತವೆ. ಅದು ಅಂಬೇಡ್ಕರ್ ಕೊಟ್ಟಿರುವ ಮಂತ್ರ. ಅದನ್ನು ಯಾರೂ ಬೇಡ ಎನ್ನಲು ಆಗಲ್ಲ. ಪಕ್ಷದ ವೇದಿಕೆಯಲ್ಲಿ ಮಾಡುವಾಗ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವಂತೆ ಹೇಳಿದ್ದಾರೆ. ಯಾವುದಾದರೂ ವಿಷಯ ಮಾತಾಡುವಾಗ ಪಕ್ಷಕ್ಕೆ ಮುಜುಗರ ಆಗದಂತೆ ನೋಡಿಕೊಳ್ಳಲು ಸೂಚಿಸಿದ್ದಾರೆ' ಎಂದು ತಿಳಿಸಿದರು.

ವಿಜಯೇಂದ್ರ ಮುಂದುವರಿಕೆ ಅನುಮಾನವಿಲ್ಲ: ರೇಣುಕಾಚಾರ್ಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬಿ.ವೈ.ವಿಜಯೇಂದ್ರ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ಮುಂದುವರಿಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ವಿಧಾನಸಭಾ ಚುನಾವಣೆ ಕೂಡ ಅವರ ನೇತೃತ್ವದಲ್ಲಿಯೇ ನಡೆಯಲಿದೆ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಭಾನುವಾರ ಇಲ್ಲಿ ತಿಳಿಸಿದರು.

ರೇಣುಕಾಚಾರ್ಯ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಷ್ಟ್ರೀಯ ನಾಯಕರಿಗೆ ವಿಜಯೇಂದ್ರ ಅವರ ಮೇಲೆ ವಿಶ್ವಾಸವಿದೆ. ಅವರ ನಾಯಕತ್ವದ ಬಗ್ಗೆ ಆಕ್ಷೇಪ ಹೊಂದಿರುವ ಭಿನ್ನಮತಿಯರು ಹೈಕಮಾಂಡ್ ಸಂಪರ್ಕಿಸುವುದು ಒಳಿತು' ಎಂದರು.

'ಬಸನಗೌಡ ಪಾಟೀಲ ಯತ್ನಾಳ ಒಬ್ಬ ಭ್ರಷ್ಟ ರಾಜಕಾರಣಿ. ರಾಜಕಾರಣಕ್ಕೆ ಬರುವುದಕ್ಕೂ ಮುನ್ನ ಅವರ ಆಸ್ತಿ ಎಷ್ಟಿತ್ತು ಎಂಬುದು ಗೊತ್ತಿದೆ. ಕಾಂಗ್ರೆಸ್‌ನ ಪ್ರಭಾವಿ ನಾಯಕರೊಂದಿಗೆ ಅವರು ಹೊಂದಾಣಿಕೆ ಮಾಡಿಕೊಂಡಿಲ್ಲವೇ' ಎಂದು ಪ್ರಶ್ನಿಸಿದರು.

'ಮಾಜಿ ಸಚಿವ ಕುಮಾರ ಬಂಗಾರಪ್ಪ ಕಾಂಗ್ರೆಸ್‌ನಲ್ಲಿ ಅನಾಥ ಶಿಶುವಾಗಿದ್ದರು. ಚುನಾವಣೆಯಲ್ಲಿ ಸೋಲು ಕಂಡಿದ್ದ ಅವರಿಗೆ ರಾಜಕೀಯ ಪುನರ್ಜನ್ಮ ನೀಡಿದ್ದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ' ಎಂದು ಹೇಳಿದರು.

'ಚಿಂಕಾರ: ಗಣಿಗಾರಿಕೆಗೆ ಅವಕಾಶ ಬೇಡ'

ಬೆಂಗಳೂರು: ತುಮಕೂರು ಜಿಲ್ಲೆ ಚಿಂಕಾರ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

'ಪ್ರಜಾವಾಣಿ' ವರದಿಯನ್ನು ಉಲ್ಲೇಖಿಸಿ 'ಎಕ್ಸ್' ಮಾಡಿರುವ ಅವರು, ಸಚಿವರ ಗಮನಕ್ಕೂ ಬಾರದಂತೆ ಅಧಿಕಾರಿಗಳು 120 ಎಕರೆಯಲ್ಲಿ ಗಣಿಗಾರಿಕೆಗೆ ಶಿಫಾರಸು ಮಾಡಿರುವುದು ಪರಿಸರ ಪ್ರೇಮಿಗಳಿಗೆ ದಿಗಿಲು ಹುಟ್ಟಿಸಿದೆ ಎಂದು ಹೇಳಿದ್ದಾರೆ.

ಗಣಿಗಾರಿಕೆಗೆ ಗುರುತಿಸಿರುವ ಈ ಪ್ರದೇಶದಲ್ಲಿ 17,200 ಮರಗಳು ಹನನವಾಗುತ್ತವೆ ಎಂದರೆ ಈ ಸರ್ಕಾರದ ಅವಧಿಯಲ್ಲಿ ಅರಣ್ಯ ನಾಶಕ್ಕೆ ಅಧಿಕಾರಿಗಳು ಟೊಂಕಕಟ್ಟಿ ನಿಂತಂತಿದೆ ಎಂದು ಅವರು ಹರಿಹಾಯ್ದಿದ್ದಾರೆ.

'ರಾಜ್ಯದ ವಿರುದ್ಧ ಪಿತೂರಿ ಸಹಿಸಲ್ಲ'

ಬೆಂಗಳೂರು: 'ಈ ನೆಲದ ನೀರು, ಅನ್ನ, ಗಾಳಿ ಸೇವಿಸಿ ಕನ್ನಡದ ವಿರುದ್ಧ ಮಾತನಾಡುವುದು, ರಾಜ್ಯದ ವಿರುದ್ಧ ಪಿತೂರಿ ನಡೆಸುವುದನ್ನು ಸಹಿಸಲು ಸಾಧ್ಯವಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಬೆಳಗಾವಿ ಗಡಿಭಾಗದಲ್ಲಿ ರಾಜ್ಯ ಸಾರಿಗೆ ಸಂಸ್ಥೆ ಬಸ್‌ನ ಕಂಡಕ್ಟರ್ ಮೇಲೆ ನಡೆಸಿದ ಹಲ್ಲೆಯ ಕುರಿತು ಸುದ್ದಿಗಾರರ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿದರು.

'ನಮ್ಮ ನೆಲದಲ್ಲೇ ಇದ್ದುಕೊಂಡು ಕನ್ನಡಿಗರ ತೇಜೋವಧೆ ಮಾಡುವುದು ಅಕ್ಷಮ್ಯ. ಅನೇಕ ಕನ್ನಡಪರ ಹೋರಾಟಗಾರರ ಹೇಳಿಕೆಗಳನ್ನು ಗಮನಿಸಿದ್ದೇನೆ. ಇದರ ವಿರುದ್ಧ ಕನ್ನಡಿಗರು ಧ್ವನಿ ಎತ್ತಬೇಕು. ಷಡ್ಯಂತ್ರ, ಪಿತೂರಿ ಮಾಡುವವರನ್ನು ಸರ್ಕಾರ ಹತ್ತಿಕ್ಕಬೇಕು' ಎಂದು ಅವರು ಒತ್ತಾಯಿಸಿದರು.

ಬಿ.ವೈ. ವಿಜಯೇಂದ್ರ

'ಬೆಂಗಳೂರಿನಲ್ಲಿ ರೌಡಿಗಳ ಹಾವಳಿ ಹೆಚ್ಚಾಗಿದೆ. ಕೊಲೆ, ದರೋಡೆಗಳು ನಡೆಯುತ್ತಿವೆ. ಬೆಂಗಳೂರು ಸುರಕ್ಷಿತವಾಗಿಲ್ಲ. ಇದಕ್ಕೆ ರಾಜ್ಯ ಸರ್ಕಾರವೇ ಹೊಣೆ ಹೊರಬೇಕು. ಆದರೆ, ಗೃಹ ಸಚಿವರು ರಾಜೀನಾಮೆ ಕೊಡಬೇಕೇ... ಕೊಡುತ್ತೇನೆ ಎಂಬ ಧಾಟಿಯಲ್ಲಿ ಮಾತನಾಡಿದ್ದಾರೆ. ಇದು ಅವಿವೇಕದ ಪರಮಾವಧಿ. ಕಾನೂನು- ಸುವ್ಯವಸ್ಥೆ ಕಾಪಾಡಬೇಕು ಎಂದು ಜನ ಇವರಿಗೆ ಮತ ಕೊಟ್ಟಿದ್ದಾರೆ. ಆ ಕೆಲಸ ಮಾಡದೇ, ಅಸಂಬದ್ಧ ಹೇಳಿಕೆಗಳನ್ನು ನೀಡಿದರೆ ದೇಶದ್ರೋಹಿಗಳು ಮತ್ತು ಕೊಲೆಗಡುಕರಿಗೆ ಅನೆ ಬಲ ಬಂದಂತಾಗುತ್ತದೆ' ಎಂದು ಅವರು ಹೇಳಿದರು.

'ಕಾಂಗ್ರೆಸ್ 20 ಸೀಟೂ ಗೆಲ್ಲದ ಪರಿಸ್ಥಿತಿ ಇದೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಸುಳ್ಳು ಹೇಳಿ ಮತ ಪಡೆದು ಅಧಿಕಾರಕ್ಕೇರಿದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈಗ ಜನರಿಗೆ ಮೋಸ ಮಾಡುತ್ತಿದೆ. ನಾಡಿನ ಅಭಿವೃದ್ಧಿ ಬಗ್ಗೆ ಅದಕ್ಕೆ ಎಳ್ಳಷ್ಟೂ ಕಾಳಜಿ ಇಲ್ಲ. ರಾಜ್ಯದಲ್ಲಿ ಒಂದುವೇಳೆ ಇಂದೇ ವಿಧಾನಸಭೆ ಚುನಾವಣೆ ನಡೆದರೆ, ಕಾಂಗ್ರೆಸ್ 20 ಸೀಟುಗಳನ್ನೂ ಗೆಲ್ಲದ ಪರಿಸ್ಥಿತಿ ಇದೆ' ಎಂದು ಸಂಸದ ಗೋವಿಂದ ಕಾರಜೋಳ ಭಾನುವಾರ ವ್ಯಂಗ್ಯವಾಡಿದರು.

ಬಿಜೆಪಿಯಲ್ಲಿನ ಗೊಂದಲ ಎಲ್ಲವೂ ಸರಿಯಾಗುತ್ತದೆ. ಕಾಂಗ್ರೆಸ್‌ಎದುರಿಸಲು ನಾವೆಲ್ಲರೂ ಒಂದಾಗುತ್ತೇವೆ
ಗೋವಿಂದ ಕಾರಜೋಳ, ಸಂಸದ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಯಾವ 'ಗ್ಯಾರಂಟಿ'ಗಳ ಲಾಭವೂ ಜನರಿಗೆ ಸಿಗುತ್ತಿಲ್ಲ. ಗೃಹಲಕ್ಷ್ಮಿ ಯೋಜನೆ ಹಣ ಮೂರು ತಿಂಗಳಿಂದ ಜಮೆಯಾಗಿಲ್ಲ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ, ಭ್ರಷ್ಟಾಚಾರ ಮಿತಿಮೀರಿದೆ, ಅಕ್ರಮಗಳಿಗೆ ಕಡಿವಾಣ ಹಾಕುವಲ್ಲಿ ಸರ್ಕಾರದ ಹಿಡಿತ ತಪ್ಪಿಹೋಗಿದೆ' ಎಂದು ಆರೋಪಿಸಿದರು.

'ಗುತ್ತಿಗೆದಾರರ ₹64 ಸಾವಿರ ಕೋಟಿ ಬಿಲ್ ಬಾಕಿ ಇದೆ. ನಮ್ಮ ಅಧಿಕಾರವಧಿ ಯಲ್ಲಿ ಆರಂಭಗೊಂಡಿದ್ದ ನೀರಾವರಿ ಯೋಜನೆಗಳು ಸ್ಥಗಿತಗೊಂಡಿವೆ. ಈ ಸರ್ಕಾರ ಮುಂದುವರಿಯುವ ಪ್ರಶ್ನೆಯೇ ಇಲ್ಲ. ಸಿದ್ದರಾಮಯ್ಯ ಅವರು ಗೌರವದಿಂದ ರಾಜೀನಾಮೆ ಕೊಟ್ಟು, ಮತ್ತೊಮ್ಮೆ ವಿಧಾನಸಭೆ ಚುನಾವಣೆ ಎದುರಿಸಬೇಕು' ಎಂದು ಒತ್ತಾಯಿಸಿದರು.

ರಣಹದ್ದುಗಳಂತೆ ಕಚ್ಚಾಟ: 'ಕೆಪಿಸಿಸಿ ಅಧ್ಯಕ್ಷರಿಗೆ ಕಿರೀಟ ಇದೆಯಾ? ಎಂದು ಸಚಿವ ಕೆ.ರಾಜಣ್ಣ ಕೇಳುತ್ತಿದ್ದಾರೆ. ಅಧಿಕಾರಕ್ಕಾಗಿ ಕಾಂಗ್ರೆಸ್‌ನಲ್ಲಿ ನಾಲ್ಕು ಗುಂಪುಗಳಾಗಿವೆ. ಸತ್ತ ಪ್ರಾಣಿಗಳನ್ನು ತಿನ್ನಲು ರಣಹದ್ದುಗಳು ಕಚ್ಚಾಡುವಂತೆ, ಕಾಂಗ್ರೆಸ್‌ನ ನಾಯಕರು ಅಧಿಕಾರಕ್ಕಾಗಿ ಕಿತ್ತಾಡುತ್ತಿದ್ದಾರೆ' ಎಂದು ಲೇವಡಿ ಮಾಡಿದರು.

'ಕಾಂಗ್ರೆಸ್‌ನಲ್ಲಿ ದಲಿತ ಮುಖ್ಯಮಂತ್ರಿ ವಿಷಯ ಹುಟ್ಟುಹಾಕಲಾಗಿದ್ದು, ಅಲ್ಲಿ ದಲಿತ ಮುಖ್ಯಮಂತ್ರಿ ಮಾಡಲು ಅವಕಾಶ ಇದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ದಲಿತ ಮುಖ್ಯಮಂತ್ರಿ ಮಾಡುತ್ತೇವೆ' ಎಂದು ಘೋಷಿಸಬೇಕು. ಜಿ.ಪರಮೇಶ್ವರ, ಕೆ.ಎಚ್.ಮುನಿಯಪ್ಪ ಅವರನ್ನಾದರೂ ಮಾಡಲಿ ಅಥವಾ ತಾವೇ ಸಿ.ಎಂ ಆಗಲಿ' ಎಂದು ಅಭಿಪ್ರಾಯಪಟ್ಟರು.

'ಬ್ಯಾಕ್‌ಲಾಗ್': ಮುಖ್ಯಸ್ಥರೇ ಹೊಣೆ

ಒಂದನೇ ಪುಟದಿಂದ...

ಹೈಕೋರ್ಟ್‌ನಲ್ಲಿರುವ ಈ ಅರ್ಜಿಯನ್ನು ಬ್ಯಾಕ್‌ಲಾಗ್ ಹುದ್ದೆಗಳ ಉಸ್ತುವಾರಿಗಾಗಿ ರಚಿಸಲಾದ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅಧ್ಯಕ್ಷತೆಯ ಸಚಿವ ಸಂಪುಟ ಉಪ ಸಮಿತಿ ಗಂಭೀರವಾಗಿ ಪರಿಗಣಿಸಿದೆ. ಈ ಮಧ್ಯೆ, ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡಿದ್ದ ನಿರ್ಣಯದಂತೆ, ಒಳ ಮೀಸಲಾತಿ ಜಾರಿಯಾಗುವವರೆಗೆ ಹೊಸತಾಗಿ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಬಾರದೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) 2024ರ ನ. 25ರಂದು ಸುತ್ತೋಲೆ ಹೊರಡಿಸಿದೆ.

ಡಿಪಿಎಆರ್ ಸುತ್ತೋಲೆ ಹೊರಡಿಸುವುದಕ್ಕೂ ಮೊದಲು, ಬ್ಯಾಕ್‌ಲಾಗ್ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿರುವ ಇಲಾಖೆಗಳು ಯಾವುದೇ ವಿಳಂಬ ಮಾಡದೆ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಬೇಕು. ತಪ್ಪಿದರೆ ಇಲಾಖೆಗಳ ಮುಖ್ಯಸ್ಥರೇ ಹೊಣೆ. ಇಲಾಖೆಗಳ ಮುಖ್ಯಸ್ಥರ ಮಾಹಿತಿಯನ್ನು ನ್ಯಾಯಾಂಗ ನಿಂದನಾ ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ಸಮಿತಿ ಎಚ್ಚರಿಕೆ ನೀಡಿದೆ.

ತಕ್ಷಣ ಕ್ರಮ ವಹಿಸಬೇಕು: ಉನ್ನತ ಶಿಕ್ಷಣ ಇಲಾಖೆಯಡಿ ಅನುದಾನಿತ ಕಾಲೇಜುಗಳಲ್ಲಿ ಗ್ರೂಪ್ 'ಬಿ' 146 ಹುದ್ದೆಗಳು ಸೇರಿ 332 ಬ್ಯಾಕ್‌ಲಾಗ್ ಹುದ್ದೆಗಳು ಖಾಲಿ ಇವೆ.

ಅನುದಾನದ ಕೊರತೆ: ಆರ್ಥಿಕ ನೆರವು ನೀಡದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಾಂಸ್ಕೃತಿಕ ಸಂಸ್ಥೆಗಳಿಗಿಲ್ಲ 'ಧನಸಹಾಯ'

• ವರುಣ ಹೆಗಡೆ

ಬೆಂಗಳೂರು: ಅನುದಾನದ ಕೊರತೆಯಿಂದಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 'ಧನಸಹಾಯ' ಯೋಜನೆಯಡಿ 2024-25ನೇ ಸಾಲಿಗೆ ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಗೆ ಆರ್ಥಿಕ ನೆರವು ಒದಗಿಸಿಲ್ಲ. ಇದರಿಂದಾಗಿ ಕಲಾವಿದರು ಹಾಗೂ ಸಂಘ-ಸಂಸ್ಥೆಗಳ ಮುಖ್ಯಸ್ಥರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾಂಸ್ಕೃತಿಕ ವಾತಾವರಣ ರೂಪಿಸಲು ಶ್ರಮಿಸುತ್ತಿರುವ ಸಂಘ-ಸಂಸ್ಥೆಗಳಲ್ಲಿ ಹೆಚ್ಚಿನವು ಇಲಾಖೆಯ ಧನಸಹಾಯವನ್ನೇ ನಂಬಿಕೊಂಡು, ವರ್ಷಪೂರ್ತಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ. 2024-25ನೇ ಆರ್ಥಿಕ ವರ್ಷದ ಧನಸಹಾಯ ಪ್ರಕ್ರಿಯೆಯನ್ನು ಇಲಾಖೆ ನಡೆಸದ ಕಾರಣ ಕಲಾವಿದರು ಹಾಗೂ ಸಂಘ-ಸಂಸ್ಥೆಗಳ ಪ್ರಮುಖರು ಕನ್ನಡ ಭವನಕ್ಕೆ ಅಲೆದಾಟ ನಡೆಸಲಾರಂಭಿಸಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷ ಕೊನೆಗೊಳ್ಳಲು ಕೆಲವೇ ದಿನಗಳು ಮಾತ್ರ ಇರುವುದರಿಂದ ಈ ಸಾಲಿನ ಧನಸಹಾಯ ಮರೀಚಿಕೆಯಾಗಿದೆ.

ಅನುದಾನದ ಕೊರತೆಯಿಂದ ಇಲಾಖೆಯೂ ಈ ಸಾಲಿಗೆ ಧನಸಹಾಯ ನೀಡದಿರಲು ನಿರ್ಧರಿಸಿದೆ. ಇದರಿಂದಾಗಿ ಯೋಜನೆ ಮುಂದುವರಿಯುವ ಬಗ್ಗೆ ಸಾಂಸ್ಕೃತಿಕ ವಲಯದಲ್ಲಿ ಗೊಂದಲ ಉಂಟಾಗಿದೆ.

ಕನ್ನಡ ಭವನ

2024-25ನೇ ಸಾಲಿನ ಧನಸಹಾಯ ನೀಡುತ್ತಿಲ್ಲ. ವ್ಯವಸ್ಥೆಯಲ್ಲಿ ಬದಲಾವಣೆ ಮಾಡಬೇಕಿದೆ. ಬಾಕಿ ಇದ್ದ ಕಳೆದ ಸಾಲಿನ ಧನಸಹಾಯವನ್ನು ಈ ವರ್ಷ ಪೂರ್ಣ ಪ್ರಮಾಣದಲ್ಲಿ ನೀಡಿದ್ದೇವೆ
ಶಿವರಾಜ್ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಸಚಿವ

ರಾಜ್ಯದಲ್ಲಿ ಏಳು ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ-ಸಂಸ್ಥೆಗಳಿವೆ. ಅರ್ಜಿ ಅಲ್ಲಿಸುವ ನಾಲ್ಕು ಸಾವಿರಕ್ಕೂ ಹೆಚ್ಚು ಸಂಘ-ಸಂಸ್ಥೆಗಳಲ್ಲಿ ಒಂದು ಸಾವಿರದಿಂದ 1,500 ಸಂಘ-ಸಂಸ್ಥೆಗಳಿಗೆ ವಾರ್ಷಿಕ ಧನಸಹಾಯ ಒದಗಿಸಲಾಗುತ್ತಿದೆ. ಈ ಹಿಂದೆ ಧನಸಹಾಯಕ್ಕೆ ಸರ್ಕಾರವು ವಾರ್ಷಿಕ ₹15 ಕೋಟಿಯಿಂದ ₹20 ಕೋಟಿ ಅನುದಾನ ಒದಗಿಸುತ್ತಿತ್ತು. 2024-25ನೇ ಸಾಲಿನ ಧನಸಹಾಯಕ್ಕೆ ಇಲಾಖೆ ಬಳಿ ಅನುದಾನ ಇಲ್ಲದೆ, ಹೆಚ್ಚುವರಿ ಅನುದಾನಕ್ಕೆ ಆರ್ಥಿಕ ಇಲಾಖೆ ಅನುಮೋದನೆ ನೀಡದಿದ್ದರಿಂದ ಇಲಾಖೆಯೂ ಈ ಸಾಲಿನ ಧನಸಹಾಯ ಪ್ರಕ್ರಿಯೆಯನ್ನೇ ಕೈಬಿಟ್ಟಿದೆ.

ಹತಾಶರಾದ ಕಲಾವಿದರು: ಅನುದಾನದ ಕೊರತೆಯಿಂದ ಇಲಾಖೆಯು 2023-24ನೇ ಸಾಲಿನ ಧನಸಹಾಯವನ್ನು ಕಂತು ರೂಪದಲ್ಲಿ ನೀಡಿತ್ತು. 2024-25ನೇ ಸಾಲಿನ ಧನಸಹಾಯವನ್ನು ಈ ಹಿಂದಿನಂತೆ ನೀಡಲಾಗುತ್ತದೆ ಎಂಬ ಭರವಸೆಯಲ್ಲಿ ಸಂಘ-ಸಂಸ್ಥೆಗಳು ಕಾರ್ಯಕ್ರಮಗಳನ್ನು ನಡೆಸಿವೆ. ಧನಸಹಾಯ ಯೋಜನೆ ಮಾರ್ಗಸೂಚಿ ಪ್ರಕಾರ, ಪ್ರತಿ ವರ್ಷ ಜೂನ್ ತಿಂಗಳಲ್ಲೇ ಅರ್ಜಿ ಆಹ್ವಾನಿಸಿ ಸಂಘ-ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಜಿಲ್ಲಾ ಹಂತದಲ್ಲಿ ಪರಿಶೀಲಿಸಬೇಕು. ಆದರೆ, ಈ ಪ್ರಕ್ರಿಯೆ ನಡೆಯದಿದ್ದರಿಂದ ಕಲಾವಿದರು ಹಾಗೂ ಸಂಘ-ಸಂಸ್ಥೆಗಳ ಮುಖ್ಯಸ್ಥರು ಹತಾಶರಾಗಿದ್ದಾರೆ. ಇಲಾಖೆಯ ನಡೆಯಿಂದ ಬೇಸತ್ತು ಹೋರಾಟ ನಡೆಸಲು ಮುಂದಾಗಿದ್ದಾರೆ.

'ಧನಸಹಾಯವನ್ನೇ ನಂಬಿಕೊಂಡು, ಸ್ವಂತ ಹಣದಲ್ಲಿ ಕಾರ್ಯಕ್ರಮ ಮಾಡಿದ ಸಂಘ-ಸಂಸ್ಥೆಗಳು ಇಲಾಖೆಯ ನಡೆಯಿಂದ ಸಂಕಷ್ಟಕ್ಕೆ ಸಿಲುಕಿವೆ. ಕಲೆ ಹಾಗೂ ಕಲಾವಿದರನ್ನು ಕಡೆಗಣಿಸಲಾಗುತ್ತಿದೆ. ಉತ್ಸವಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡುವ ಇಲಾಖೆಗೆ, ಧನಸಹಾಯಕ್ಕೆ ಅನುದಾನ ಇರದಿರುವುದು ವಿಪರ್ಯಾಸ. ವಿವಿಧ ಅಕಾಡೆಮಿಗಳಲ್ಲಿ ಇರುವ ಅನುದಾನವನ್ನು ಹೊಂದಾಣಿಕೆ ಮಾಡಿ, ಧನಸಹಾಯ ನೀಡಬೇಕು. ಇಲ್ಲವಾದಲ್ಲಿ ಹೋರಾಟದ ಹಾದಿ ಹಿಡಿಯಲಾಗುವುದು' ಎಂದು ಕಲಾವಿದ ಜಯಸಿಂಹ ಎಸ್. ಹೇಳಿದರು.

ನಾಲ್ಕು ಕಂತುಗಳಲ್ಲಿ ಹಣ ಬಿಡುಗಡೆ: ಕಲಾವಿದರ ಆಕ್ರೋಶ

2023-24ನೇ ಸಾಲಿಗೆ ಸಾಮಾನ್ಯ ವರ್ಗದಲ್ಲಿ 831, ಪರಿಶಿಷ್ಟ ಜಾತಿ ಉಪ ಯೋಜನೆಯಡಿ 519 ಹಾಗೂ ಪರಿಶಿಷ್ಟ ಪಂಗಡ ಉಪ ಯೋಜನೆಯಡಿ 97 ಸಂಘ-ಸಂಸ್ಥೆಗಳು ಧನಸಹಾಯ ಪಡೆದಿವೆ. 2024ರ ಮಾರ್ಚ್‌ನಲ್ಲಿ ಮೊದಲ ಕಂತು ಬಿಡುಗಡೆಯಾದರೆ, ನಾಲ್ಕನೇ ಕಂತು ಈ ವರ್ಷ ಕೈಸೇರಿದೆ. ಇದು ಕಲಾವಿದರು ಹಾಗೂ ಸಂಘ-ಸಂಸ್ಥೆಗಳ ಪ್ರತಿನಿಧಿಗಳ ಆಕ್ರೋಶಕ್ಕೆ ಕಾರಣವಾಗಿದೆ.

ಅನುದಾನದ ಕೊರತೆ ನಡುವೆಯೂ ಫೆಬ್ರುವರಿ 1ರಿಂದ 8ರವರೆಗೆ ಬೆಂಗಳೂರಿನ ಕಲಾಗ್ರಾಮದಲ್ಲಿ ₹ 1.32 ಕೋಟಿ ವೆಚ್ಚದಲ್ಲಿ ರಂಗ ಪರಿಷೆ ಕಾರ್ಯಕ್ರಮ ನಡೆಸಿ, ಇದಕ್ಕೆ ರಂಗಾಯಣಗಳ ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಖಾತೆಗಳಲ್ಲಿ ಇರಿಸಲಾಗಿದ್ದ ಅನುದಾನವನ್ನು ಬಳಸಿಕೊಳ್ಳಲಾಗಿದೆ. ಇದು ಕೂಡ ಸಾಂಸ್ಕೃತಿಕ ವಲಯದ ಅಸಮಾಧಾನಕ್ಕೆ ಕಾರಣವಾಗಿದೆ.

'2024-25ನೇ ಆರ್ಥಿಕ ವರ್ಷದ ಕಡೆಯ ಹಂತದಲ್ಲಿದ್ದು, ಧನಸಹಾಯಕ್ಕೆ ಸಂಬಂಧಿಸಿ ಸಾಂಸ್ಕೃತಿಕ ಸಂಘ-ಸಂಸ್ಥೆಗಳಿಂದ ಈವರೆಗೂ ಅರ್ಜಿಗಳನ್ನು ಆಹ್ವಾನಿಸಿಲ್ಲ. ಇದರಿಂದ ಸಂಘ-ಸಂಸ್ಥೆಗಳು ಸಂಕಷ್ಟಕ್ಕೆ ಸಿಲುಕಿವೆ. ಕೂಡಲೇ ಸರ್ಕಾರ ಧನಸಹಾಯ ಪ್ರಕ್ರಿಯೆಯನ್ನು ಕೈಗೊಳ್ಳಬೇಕು. ಇಲ್ಲದಿದ್ದರೆ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ರಾಜ್ಯ ಸಾಹಿತಿ, ಕಲಾವಿದರ, ಸಾಂಸ್ಕೃತಿಕ ಚಿಂತಕರ ಸಂಘ ಸಂಸ್ಥೆಗಳ ಒಕ್ಕೂಟದ ಕುಮಾರ್ ಕೆ.ಎಚ್. ತಿಳಿಸಿದರು.

ಮೈಸೂರಿನಲ್ಲಿ ನಿಷೇಧಾಜ್ಞೆ ಜಾರಿ

ಪೊಲೀಸ್ ಠಾಣೆಗೆ ಕಲ್ಲೆಸೆತ ಖಂಡಿಸಿ ಪ್ರತಿಭಟನೆಗೆ ಕರೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಉದಯಗಿರಿ ಠಾಣೆ ಹಾಗೂ ಪೊಲೀಸರಿಗೆ ಕಲ್ಲೆಸೆತ ಪ್ರಕರಣ ಸಂಬಂಧ ವಿವಿಧ ಸಂಘಟನೆಗಳು ಸೋಮವಾರ (ಫೆಬ್ರುವರಿ 24) ಪ್ರತ್ಯೇಕವಾಗಿ ಮೆರವಣಿಗೆ ನಡೆಸಲು ಅನುಮತಿ ನಿರಾಕರಿಸಿರುವ ನಗರ ಪೊಲೀಸ್ ಆಯುಕ್ತರು, ನಗರದಾದ್ಯಂತ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಭಾನುವಾರ ಮಧ್ಯರಾತ್ರಿಯಿಂದ ಸೋಮವಾರ ಮಧ್ಯರಾತ್ರಿವರೆಗೆ ನಗರದಾದ್ಯಂತ ನಿಷೇಧಾಜ್ಞೆ ವಿಧಿಸಿ ಆದೇಶ ಹೊರಡಿಸಿದ್ದಾರೆ.

'ಉದಯಗಿರಿ ಪೊಲೀಸ್ ಠಾಣೆಯ ಸುತ್ತಮುತ್ತ ಫೆ.10ರಂದು ನಡೆದ ಕಲ್ಲೆಸೆತ ಖಂಡಿಸಿ 'ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ'ಯು 'ಮೈಸೂರು ಚಲೋ' ಹಾಗೂ 'ಬೃಹತ್ ಜನಾಂದೋಲನ ಜಾಗೃತಿ ಸಭೆ'ಯನ್ನು ಸೋಮವಾರ ಬೆಳಿಗ್ಗೆ 11ಕ್ಕೆ ಹಮ್ಮಿಕೊಂಡಿದೆ. ಇದೇ ವೇಳೆ, 'ಪ್ರಕರಣದಲ್ಲಿ ಮುಸ್ಲಿಂ ಸಮುದಾಯದವರನ್ನು ಖಳನಾಯಕರಂತೆ ಬಿಂಬಿಸಲಾಗುತ್ತಿದೆ' ಎಂದು ಆರೋಪಿಸಿ ದಲಿತ ಮಹಾಸಭಾ ಹಾಗೂ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯು 'ಮೌನ ಮೆರವಣಿಗೆ' ನಡೆಸಲು ಯೋಜಿಸಿ, ಅನುಮತಿ ಕೋರಲಾಗಿತ್ತು. ಅವರಿಗೆ ಅನುಮತಿ ನೀಡಿಲ್ಲ' ಎಂದು ತಿಳಿಸಿದ್ದಾರೆ.

'ಸ್ಥಳೀಯ ಠಾಣೆಗಳ ಇನ್‌ಸ್ಪೆಕ್ಟರ್‌ಗಳು ಈಗಾಗಲೇ ಅನುಮತಿ ನಿರಾಕರಿಸಿ ಸಂಬಂಧಪಟ್ಟವರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಹೀಗಿದ್ದರೂ ಮೆರವಣಿಗೆ ಹಾಗೂ ಸಮಾವೇಶ ನಡೆಸುವುದಾಗಿ ಸಂಘಟನೆಗಳು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿವೆ. ಆದ್ದರಿಂದ, ಕಾನೂನು ಸುವ್ಯವಸ್ಥೆ ಕಾಪಾಡಲು ಹಾಗೂ ಅಹಿತಕರ ಘಟನೆ ತಪ್ಪಿಸಲು ಮುಂಜಾಗ್ರತಾ ಕ್ರಮವಾಗಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಆದೇಶ ಉಲ್ಲಂಘಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಎಚ್ಚರಿಕೆ ನೀಡಿದ್ದಾರೆ.

'ರಾಷ್ಟ್ರ ಸುರಕ್ಷಾ ಜನಾಂದೋಲನ ಸಮಿತಿ'ಯು ಜೆಎಸ್‌ಎಸ್ ಮಹಾವಿದ್ಯಾಪೀಠದ ಬಳಿಯಿಂದ ಹಮ್ಮಿಕೊಂಡಿರುವ 'ಮೈಸೂರು ಚಲೋ'ಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಚಾಲನೆ ನೀಡಲಿದ್ದಾರೆ' ಎಂದು ಸಂಘಟಕರು ತಿಳಿಸಿದ್ದಾರೆ.

'ಮೈಸೂರು ಚಲೋ'

ವಿಜಯೇಂದ್ರ

'ಮೈಸೂರಿನ ಉದಯಗಿರಿ ಪ್ರಕರಣ ಸಂಬಂಧ ಸೋಮವಾರ ಮೈಸೂರು ಚಲೋ ನಡೆಸಲಿದ್ದೇವೆ. ರಾಜ್ಯ ಸರ್ಕಾರವು ಕಾನೂನು-ಸುವ್ಯವಸ್ಥೆ ಕಾಪಾಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಉದಯಗಿರಿಯಲ್ಲಿ ಪೊಲೀಸ್ ಠಾಣೆಗೆ ನುಗ್ಗಿ ದಾಂದಲೆ ಮಾಡಿದ ಪುಂಡರನ್ನು ರಕ್ಷಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ' ಎಂದು ವಿಜಯೇಂದ್ರ ಟೀಕಿಸಿದರು.

ಸಂಕ್ಷಿಪ್ತ ಸುದ್ದಿ

ಗಣಪತಿ ಭಟ್ ಹಾಸಣಗಿಗೆ 'ಪುಟ್ಟರಾಜ ಸಮ್ಮಾನ್'

ಧಾರವಾಡ: ಡಾ.ಪುಟ್ಟರಾಜ ಗವಾಯಿ ಪ್ರತಿಷ್ಠಾನ ನೀಡುವ 'ಪುಟ್ಟರಾಜ ಸಮ್ಮಾನ್' ರಾಷ್ಟ್ರೀಯ ಪ್ರಶಸ್ತಿಗೆ ಗಾಯಕ ಪಂ.ಗಣಪತಿ ಭಟ್ ಹಾಸಣಗಿ ಆಯ್ಕೆಯಾಗಿದ್ದಾರೆ.

ಪುರಸ್ಕಾರವು ₹1 ಲಕ್ಷ ನಗದು, ಫಲಕ ಒಳಗೊಂಡಿದೆ. ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಮಾರ್ಚ್ 3ರಂದು ಜರುಗುವ ಪಂ. ಪುಟ್ಟರಾಜ ಗವಾಯಿಯವರ 111ನೇ ಜನ್ಮದಿನೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕುಲಪತಿಗಳ ಸಮ್ಮೇಳನ ಇಂದು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದ ಸತ್ಯಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯವು ಫೆ.24ರಂದು ಅಖಿಲ ಭಾರತ ಕುಲಪತಿಗಳ ಸಮ್ಮೇಳನ ಹಮ್ಮಿಕೊಂಡಿದೆ.

'ಭಾರತೀಯ ಮೌಲ್ಯಾಧಾರಿತ ಶಿಕ್ಷಣ ಪದ್ಧತಿ' ಎಂಬ ಪರಿಕಲ್ಪನೆಯ ಅಡಿಯಲ್ಲಿ ಸಮಾವೇಶ ನಡೆಯುತ್ತಿದ್ದು 15 ರಾಜ್ಯಗಳ 50 ಕುಲಪತಿಗಳು ಭಾಗವಹಿಸಲಿದ್ದಾರೆ. ಧರ್ಮ, ವಿದ್ಯೆ ಮತ್ತು ಸಮಾಜ ಸೇವೆ-ಈ ಮೂರು ಪ್ರಮುಖ ವಿಚಾರಗಳ ಕುರಿತು ಶಿಕ್ಷಣ ತಜ್ಞರ ಜೊತೆ ಸಂವಾದ ನಡೆಯಲಿದೆ.

ಉತ್ತರ ಕನ್ನಡ: ವಿವಿಧೆಡೆ ಮಳೆ

ಶಿರಸಿ (ಉತ್ತರ ಕನ್ನಡ): ಜಿಲ್ಲೆಯ ವಿವಿಧ ಕಡೆಗಳಲ್ಲಿ ಭಾನುವಾರ ಗುಡುಗು ಸಹಿತ ಅರ್ಧ ಗಂಟೆಗೂ ಹೆಚ್ಚು ಅವಧಿ ಮಳೆ ಸುರಿದಿದೆ.

ಜಿಲ್ಲೆಯ ಕುಮಟಾ, ಗೋಕರ್ಣ, ಬರಗದ್ದೆ, ಮುರೂರು, ಯಾಣ, ಅಂಕೋಲಾ ಹಾಗೂ ಹೊನ್ನಾವರದ ಕೆಲ ಪ್ರದೇಶ, ಶಿರಸಿಯ ಮತ್ತಿಘಟ್ಟ ಭಾಗದಲ್ಲಿ ಮಧ್ಯಾಹ್ನದ ನಂತರ ಮಳೆಯಾಗಿದೆ. ಕೆಲವೆಡೆ ತುಂತುರು ಮಳೆಯಾದರೆ ಇನ್ನೂ ಕೆಲವೆಡೆ ಜೋರಾಗಿ ಸುರಿಯಿತು. ಕುಮಟಾ ತಾಲ್ಲೂಕಿನ ಕೆಲವೆಡೆ ಸುರಿದ ಬಿರುಗಾಳಿ ಮಳೆಗೆ ಅಡಿಕೆ, ತೆಂಗಿನ ಮರಗಳು ಕಿತ್ತು ಬಿದ್ದು ಹಾನಿಯಾಗಿವೆ. ಬಿಸಿಲಿಗೆ ಒಣ ಹಾಕಿದ ಚಾಲಿ ಅಡಿಕೆ ಅಕಾಲಿಕವಾಗಿ ಸುರಿದ ಮಳೆಯಿಂದ ನೆನೆದಿದ್ದು, ಬೆಳೆಗಾರರು ಪರಿತಪಿಸುವಂತಾಗಿದೆ.

ಇಂದು ಕೊಪ್ಪಳ ಬಂದ್

ಕೊಪ್ಪಳ: ಜಿಲ್ಲಾ ಕೇಂದ್ರದ ಸಮೀಪದಲ್ಲಿಯೇ ಬಲ್ಡೋಟಾ ಸ್ಟೀಲ್ ಮತ್ತು ಪವರ್ ಲಿಮಿಟೆಡ್ (ಬಿಎಸ್‌ಪಿಎಲ್) ಕಂಪನಿಯು 1.50 ಕೋಟಿ ಟನ್ ಉತ್ಪಾದನಾ ಸಾಮರ್ಥ್ಯದ ಇಂಟಗ್ರೇಟೆಡ್ ಉಕ್ಕಿನ ಕಾರ್ಖಾನೆ ಸ್ಥಾಪನೆ ಮಾಡಲು ಮುಂದಾಗಿರುವುದನ್ನು ಖಂಡಿಸಿ ಸೋಮವಾರ ಕೊಪ್ಪಳ ಹಾಗೂ ಭಾಗ್ಯನಗರ ಬಂದ್‌ಗೆ ಕರೆ ನೀಡಲಾಗಿದೆ.

ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಸೇರಿದಂತೆ ಎಲ್ಲ ಧರ್ಮಗಳ ಗುರುಗಳು, ಎಲ್ಲ ಪಕ್ಷಗಳ ಜನಪ್ರತಿನಿಧಿಗಳು ಬಂದ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಕೊಪ್ಪಳದ ಪರಿಸರಕ್ಕೆ ಮಾರಕವಾಗುವ ಕಾರ್ಖಾನೆ ವಿಸ್ತರಣೆ ವಿರುದ್ಧ ಹೋರಾಡಬೇಕು ಎಂದು ಈಗಾಗಲೇ ಎಲ್ಲ ಪಕ್ಷಗಳ ಜನಪ್ರತಿನಿಧಿಗಳು ಖುದ್ದು ಸಾರ್ವಜನಿಕ ಸ್ಥಳಗಳಲ್ಲಿ ಪ್ರಚಾರ ಮಾಡಿದ್ದಾರೆ. ಕೊಪ್ಪಳ ತಾಲ್ಲೂಕು ಪರಿಸರ ಹಿತರಕ್ಷಣಾ ವೇದಿಕೆ ಈ ಬಂದ್‌ಗೆ ಕರೆ ನೀಡಿದೆ.

ಕಾರ್ಖಾನೆ ವಿಸ್ತರಣೆಗೆ ವ್ಯಕ್ತವಾಗುತ್ತಿರುವ ವಿರೋಧ ಕುರಿತು ಭಾನುವಾರ ನಗರದಲ್ಲಿ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ 'ಈ ಹೋರಾಟದಲ್ಲಿ ಜನರ ಧ್ವನಿಗೆ ಸರ್ಕಾರ ಬೆಲೆ ನೀಡಲಿದೆ. ಕಾರ್ಖಾನೆ ವಿಸ್ತರಣೆಗಿಂತ ಜನರ ಆರೋಗ್ಯ ಹಾಗೂ ಕೃಷಿಕರ ಬದುಕು ಮುಖ್ಯ' ಎಂದರು.

'ನ್ಯಾಯಾಂಗ ಇಲಾಖೆಗೆ ಅಲ್ಪ ಅನುದಾನ'

ಬೆಂಗಳೂರು: 'ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ದಂಡ, ನ್ಯಾಯಾಲಯ ಶುಲ್ಕ, ವಿವಿಧ ಹುದ್ದೆಗಳ ಪರೀಕ್ಷಾ ಶುಲ್ಕದ ರೂಪದಲ್ಲಿ ನ್ಯಾಯಾಂಗ ಇಲಾಖೆಯಿಂದ ₹1,044 ಕೋಟಿ ಸಂಗ್ರಹಿಸಿದೆ. ಆದರೆ ನ್ಯಾಯಾಂಗ ಇಲಾಖೆ ಯ ಮೂಲಸೌಕರ್ಯ ಅಭಿವೃದ್ಧಿಗೆ ಎಷ್ಟು ಅನುದಾನ ಒದಗಿಸಿದೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್ ಪ್ರಶ್ನಿಸಿದರು.

ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖಾ ನೌಕರರ ಸಂಘ ಭಾನುವಾರ ಆಯೋಜಿಸಿದ್ದ ಸಂಘದ ಸುವರ್ಣ ಮಹೋತ್ಸವ, ಎಂಟನೇ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ನ್ಯಾಯಾಂಗ ಇಲಾಖೆಗೆ ಹೆಚ್ಚು ಅನುದಾನ ನೀಡಲಾಗುತ್ತದೆ ಎಂಬುದು ಸುಳ್ಳು. ಸರ್ಕಾರ ನ್ಯಾಯಾಂಗ ಇಲಾಖೆಯಿಂದ 2022-23ನೇ ಸಾಲಿನಲ್ಲಿ ₹364.40 ಕೋಟಿ, 2023-24ನೇ ಸಾಲಿನಲ್ಲಿ ₹ 376.80 ಕೋಟಿ ಹಾಗೂ 2024-25ನೇ ಸಾಲಿನಲ್ಲಿ ₹302.80 ಕೋಟಿ ಸಂಗ್ರಹಿಸಿದೆ. ಈ ಬಗ್ಗೆ ಜಿಲ್ಲಾವಾರು ಅಂಕಿ-ಅಂಶಗಳಿವೆ. ನ್ಯಾಯಾಂಗ ಇಲಾಖೆಯ ಕಟ್ಟಡ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ಇದರ ಅರ್ಧದಷ್ಟು ಅನುದಾನವನ್ನೂ ಒದಗಿಸಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಆರವಿಂದ ಕುಮಾರ್, ಹೈಕೋರ್ಟ್ ನ್ಯಾಯಮೂರ್ತಿಗಳಾದ ವಿ. ಕಾಮೇಶ್ವರ್ ರಾವ್, ಕೆ. ಎಸ್. ಮುದುಗಲ್ ಅವರಿಗೆ ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖಾ ನೌಕರರ ಸಂಘದ ಅಧ್ಯಕ್ಷ ಎಚ್.ಎ. ನಾಗೇಶ್ ಮತ್ತು ಸದಸ್ಯರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಪತ್ರವನ್ನು ಸಲ್ಲಿಸಿದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ. ಎಸ್. ಷಡಾಕ್ಷರಿ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

'ಜಿಲ್ಲಾ ಮಟ್ಟದ ನ್ಯಾಯಾಧೀಶರು ಮತ್ತು ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ನೌಕರರ ಮೇಲೆ ಯಜಮಾನಿಕೆಯ ಪ್ರವೃತ್ತಿ ತೋರಿಸದೆ ಅವರೊಂದಿಗೆ ಸೌಹಾರ್ದದಿಂದ ನಡೆದು ಕೊಳ್ಳಬೇಕು. ಜಿಲ್ಲಾ ಮತ್ತು ಅಧೀನ ನ್ಯಾಯಾಲಯಗಳ ನ್ಯಾಯಾಧೀಶರು ವರ್ಷಕ್ಕೆ ಎರಡು ಬಾರಿ ಪದೋನ್ನತಿಗೆ ಸಂಬಂಧಿಸಿದ ಸಭೆ ನಡೆಸಬೇಕು. ಅರ್ಹತೆ ಆಧಾರದಲ್ಲಿ ನೌಕರರಿಗೆ ಬಡ್ತಿ ನೀಡಬೇಕು. ಈ ಬಗ್ಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಸೂಚನೆ ನೀಡಬೇಕು' ಎಂದರು.

ಇದೇ ಸಂದರ್ಭದಲ್ಲಿ, ನ್ಯಾಯಾಂಗ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು ಸೇರಿ 21 ಬೇಡಿಕೆಗಳನ್ನು ಈಡೇರಿಸುವಂತೆ ನ್ಯಾಯಮೂರ್ತಿ ಅರವಿಂದ್ ಕುಮಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಎ.ಎಸ್. ಮಕಾನದಾರ್ ಅವರು ಸಂಪಾದಿಸಿದ 'ಉಸಿರು ಗಂಧ ಸೋಕಿ', 'ಬಂಧನದಿಂದ ಬಯಲಿಗೆ' ಎ.ಎಸ್. ಮಕಾನದಾರ್ ಮತ್ತು ಎಸ್.ಟಿ. ಸೋಮಶೇಖರ್ ಸಂಪಾದಿಸಿದ 'ಕಣ್ಣ ಹಿಗ್ಗಿನ ತ್ವಾಟ' ಪ

ವೆಚ್ಚ ₹123 ಕೋಟಿ, ಆದಾಯ ₹1.6 ಕೋಟಿ • ಆದಾಯ ಸಂಗ್ರಹ ನಿರ್ಲಕ್ಷ್ಯ – ಸಿಎಜಿ ವರದಿ

ಪುರಾತತ್ವ ಇಲಾಖೆ: ಆರ್ಥಿಕ ಅಶಿಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದಿಂದ ಘೋಷಣೆ ಆದ ಅನುದಾನ ₹146.81 ಕೋಟಿ, ಬಳಕೆಯಾದ ಅನುದಾನ ₹123.65 ಕೋಟಿ. ಆದರೆ ಸ್ವಂತ ಮೂಲದಿಂದ ಗಳಿಸಿದ ಆದಾಯ ಕೇವಲ ₹1.68 ಕೋಟಿ. ಗಳಿಕೆಗೆ ಹಲವು ಮೂಲಗಳು ಇದ್ದರೂ ನಿರ್ಲಕ್ಷ್ಯದ ಕಾರಣದಿಂದ ಆದಾಯ ಅತ್ಯಂತ ಕಡಿಮೆ ಮಟ್ಟದಲ್ಲೇ ಇದೆ. ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಹಣಕಾಸಿನ ಸ್ಥಿತಿಗತಿ ಇದು.

ಮಹಾಲೇಖಪಾಲರು (ಸಿಎಜಿ) ಈಚೆಗೆ ಸಲ್ಲಿಸಿರುವ 'ಕರ್ನಾಟಕ ರಾಜ್ಯದ ಸಂರಕ್ಷಿತ ಐತಿಹಾಸಿಕ ಸ್ಮಾರಕಗಳ ರಕ್ಷಣೆ ಮತ್ತು ನಿರ್ವಹಣೆ' ವರದಿಯಲ್ಲಿ ಈ ಮಾಹಿತಿ ಇದೆ. 2017-18ನೇ ಸಾಲಿನಿಂದ 2021-22ನೇ ಸಾಲಿನಲ್ಲಿ ಇಲಾಖೆಯ ಕಾರ್ಯವೈಖರಿಯನ್ನು ಪರಿಶೋಧನೆಗೆ ಒಳಪಡಿಸಿರುವ ಸಿಎಜಿ, ಇಲಾಖೆಯ ಕಾರ್ಯವೈಖರಿ ಮತ್ತು ಹಣಕಾಸು ನಿರ್ವಹಣೆ ಬಗೆಯನ್ನು ತರಾಟೆಗೆ ತೆಗೆದುಕೊಂಡಿದೆ.

'ಸಂರಕ್ಷಿತ ಸ್ಮಾರಕಗಳು, ವಸ್ತು ಸಂಗ್ರಹಾಲಯಗಳ ಪ್ರವೇಶಕ್ಕೆ ಶುಲ್ಕ ಮತ್ತು ಪಾರ್ಕಿಂಗ್ ಶುಲ್ಕ ವಿಧಿಸಲು ಅವಕಾಶವಿದೆ. ಬೆಂಗಳೂರಿನ ವಸ್ತು ಸಂಗ್ರಹಾಲಯದಲ್ಲಿ ಮಾತ್ರ ಪ್ರವೇಶಕ್ಕೆ, ಮಂಗಳೂರಿನ ವಸ್ತು ಸಂಗ್ರಹಾಲಯದಲ್ಲಿ ಪಾರ್ಕಿಂಗ್‌ಗೆ ಶುಲ್ಕ ವಿಧಿಸುವುದು ಹೊರತುಪಡಿಸಿ, ಬೇರೆಲ್ಲೂ ಶುಲ್ಕ ವ್ಯವಸ್ಥೆ ಜಾರಿಗೆ ತಂದಿಲ್ಲ. ಪರಿಣಾಮವಾಗಿ ಅಪಾರ ಪ್ರಮಾಣದ ಆದಾಯ ನಷ್ಟವಾಗಿದೆ' ಎಂದು ಸಿಎಜಿ ವಿವರಿಸಿದೆ.

'ವಸ್ತು ಸಂಗ್ರಹಾಲಯಗಳಲ್ಲಿ ಪ್ರವೇಶ ಮತ್ತು ಪಾರ್ಕಿಂಗ್ ಶುಲ್ಕ ವಿಧಿಸಿ ಎಂದು ಇಲಾಖೆ ಸುತ್ತೋಲೆ ಹೊರಡಿಸಿದ್ದರೂ ಅದು ಜಾರಿಯಾಗಿಲ್ಲ. ಹೀಗಾಗಿ ಎಲ್ಲ ವೆಚ್ಚಕ್ಕೂ ಸರ್ಕಾರದ ಅನುದಾನವನ್ನೇ ಅವಲಂಬಿಸಬೇಕಾಗಿದೆ. ಪ್ರವಾಸೋದ್ಯಮ ಇಲಾಖೆ ರೀತಿಯಲ್ಲಿ, ಅಗತ್ಯವಿದ್ದೆಡೆ ಪ್ರವೇಶ ಶುಲ್ಕ ವಿಧಿಸಿ ಆದಾಯ ಹೆಚ್ಚಿಸಿಕೊಳ್ಳಬಹುದು. ಇದಕ್ಕೆ ಒಂದು ಸ್ಪಷ್ಟ ನೀತಿ ರೂಪಿಸಬೇಕು' ಎಂದು ಶಿಫಾರಸು ಮಾಡಿದೆ.

ಆರ್ಥಿಕ ಅಶಿಸ್ತಿಗೆ ಅಸಮಾಧಾನ: 'ಪುರಾತತ್ವ ಮೌಲ್ಯ ಹೊಂದಿರುವ ತಾಣಗಳ ಪತ್ತೆ, ಸಂರಕ್ಷಣೆ ಮತ್ತು ನಿರ್ವಹಣೆ ಇಲಾಖೆಯ ಪ್ರಧಾನ ಹೊಣೆಗಾರಿಕೆ. ಒಟ್ಟು ಅನುದಾನದಲ್ಲಿ ಶೇ 50.8ರಷ್ಟನ್ನು ಉತ್ಖನನ ಮತ್ತು ಸಂರಕ್ಷಣೆಗೆ ಬಳಸುತ್ತಿದೆ. ಶೇ 28.17ರಷ್ಟು ಅನುದಾನವನ್ನು ಆಡಳಿತ ವೆಚ್ಚಕ್ಕೆಂದೇ ಬಳಸುತ್ತಿದೆ. ಪರಿಣಾಮವಾಗಿ ಸಂರಕ್ಷಿತ ತಾಣಗಳ ನಿರ್ವಹಣೆಗೆ ಅಗತ್ಯ ಹಣ ಇಲ್ಲದಂತಾಗಿದ್ದು, ಅವುಗಳ ಸ್ಥಿತಿ ಶೋಚನೀಯವಾಗಿದೆ' ಎಂದು ಸಿಎಜಿ ಹೇಳಿದೆ. 'ಲೆಕ್ಕಪರಿಶೋಧನೆಗೆ ಆಯ್ಕೆ ಮಾಡಿಕೊಳ್ಳಲಾದ ಐದು ವರ್ಷಗಳಲ್ಲಿ ಸಂರಕ್ಷಿತ ಪುರಾತತ್ವ ಸ್ಮಾರಕಗಳು ಮತ್ತು ವಸ್ತು ಸಂಗ್ರಹಾಲಯಗಳ ನಿರ್ವಹಣೆಗೆ ಇಲಾಖೆ ನಿಗದಿ ಮಾಡಿದ್ದು ₹39 ಲಕ್ಷ ಮಾತ್ರ. ಪುರಾತತ್ವ ಸ್ಮಾರಕಗಳ ರಕ್ಷಣೆ ಸಂಬಂಧ ರಾಜ್ಯದಲ್ಲಿ ಒಂದು ಸ್ಪಷ್ಟ ನೀತಿ ಇಲ್ಲದೇ ಇರುವುದು ಇದಕ್ಕೆ ಕಾರಣ' ಎಂದಿದೆ.

'ಇಲಾಖೆಯಲ್ಲಿ ಬಳಕೆಯಾಗದೆ ಉಳಿದ ಅನುದಾನವನ್ನು ವಾಪಸ್ ಮಾಡದೆ, ಹಾಗೇ ಉಳಿಸಿಕೊಳ್ಳಲಾಗಿದೆ. ಇದು ನಿಯಮ ಬಾಹಿರ. 2012ರಲ್ಲಿ ಉಳಿದಿದ್ದ ಅನುದಾನವು 2018ರ ವೇಳೆಗೂ ಬಳಕೆಯಾಗಿಲ್ಲ ಎಂಬುದು ಪತ್ತೆಯಾಗಿದೆ. ಇದನ್ನು ಸರಿಪಡಿಸಿ, ಆರ್ಥಿಕ ಶಿಸ್ತು ತರುವ ಅಗತ್ಯವಿದೆ' ಎಂದಿದೆ.





ಸ್ಮಾರಕ, ತಾಣಗಳ ನಿರ್ಲಕ್ಷ್ಯ

- ಸಂರಕ್ಷಿತ ಸ್ಮಾರಕಗಳ ಸಂಖ್ಯೆಗೆ ಸಂಬಂಧಿಸಿ ಇಲಾಖೆಯ ಬಳಿ ಇರುವ ದತ್ತಾಂಶಗಳು ಮತ್ತು ಜಿಲ್ಲಾ ಮಟ್ಟದಲ್ಲಿನ ದತ್ತಾಂಶಗಳು ಪರಸ್ಪರ ತಾಳೆಯಾಗುವುದಿಲ್ಲ
- ರಾಜ್ಯದಾದ್ಯಂತ ಒಟ್ಟು 844 ಸ್ಮಾರಕಗಳನ್ನು ಗುರುತಿಸಿರುವುದಾಗಿ ಇಲಾಖೆ ಹೇಳಿದರೆ, ಜಿಲ್ಲಾ ಮಟ್ಟದ ದತ್ತಾಂಶಗಳು 848 ಸ್ಮಾರಕಗಳನ್ನು ತೋರಿಸುತ್ತವೆ
- 561 ಸ್ಮಾರಕಗಳ ರಕ್ಷಣೆಗೆ ಹೊರಡಿಸಿದ ಅಧಿಸೂಚನೆ ಸಂಬಂಧ ದಾಖಲೆಗಳೇ ಲಭ್ಯವಿಲ್ಲ
- ಸಂರಕ್ಷಣೆ ಯೋಜನೆ ಅಡಿಯಲ್ಲಿ 9,552 ಸ್ಮಾರಕಗಳನ್ನು ಗುರುತಿಸಿದ್ದು, ಹಲವು ವರ್ಷ ಕಳೆದರೂ ಸಂರಕ್ಷಣೆಗೆ ಅಧಿಸೂಚನೆ ಹೊರಡಿಸಿಲ್ಲ
- ಕಲಬುರಗಿ, ಹಾವೇರಿ, ರಾಯಚೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಪ್ರಾಗೈತಿಹಾಸಿಕ ತಾಣಗಳೆಂದು ಅಧಿಸೂಚನೆ ಹೊರಡಿಸಿದ 6 ಮತ್ತು 13 ಐತಿಹಾಸಿಕ ತಾಣಗಳು ಎಲ್ಲಿವೆ ಎಂದು ಇಲಾಖೆಯ ಅಧಿಕಾರಿಗಳಿಗೇ ಗೊತ್ತಿಲ್ಲ. ಅವುಗಳು ಪತ್ತೆಯಾಗಿಲ್ಲ

ಪ್ರಶಸ್ತಿ ಪ್ರದಾನ

ತ್ರಿವೇಣಿ ಶೆಲ್ಲಿಕೇರಿ ಪ್ರತಿಷ್ಠಾನದ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಬಾಗಲಕೋಟೆಯಲ್ಲಿ ಭಾನುವಾರ ನಡೆಯಿತು. ಕಾದಂಬರಿ ವಿಭಾಗದಲ್ಲಿ ಗುರುಪ್ರಸಾದ ಕಂಟಲಗೆರೆ, ಕವನ ಸಂಕಲನ ವಿಭಾಗದಲ್ಲಿ ಶಶಿ ತರೀಕೆರೆ, ಕಥಾ ಸಂಕಲನ ವಿಭಾಗದಲ್ಲಿ ಲಕ್ಷ್ಮಣ ಶರೆಗಾರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಾಹಿತಿ ಕೇಶವ ಮಳಗಿ, ಕಾದಂಬರಿಕಾರ ಶ್ರೀಧರ ಬಳಗಾರ, ಪ್ರತಿಷ್ಠಾನದ ಗೌರವಾಧ್ಯಕ್ಷ ಎಚ್.ಪಿ.ಶೆಲ್ಲಿಕೇರಿ, ತೋಟಗಾರಿಕಾ ವಿಜ್ಞಾನಗಳ ವಿವಿ ಕುಲಪತಿ ವಿಷ್ಣುವರ್ಧನ, ವಿಮರ್ಶಕ ಎಸ್.ಆರ್.ವಿಜಯಶಂಕರ, ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಶೆಲ್ಲಿಕೇರಿ, ಕಾರ್ಯದರ್ಶಿ ಶಿವಾನಂದ ಶೆಲ್ಲಿಕೇರಿ ಉಪಸ್ಥಿತರಿದ್ದರು

ನಾಡ ಬಾಂಬ್ ಸ್ಫೋಟ: ವಿದ್ಯಾರ್ಥಿಗಳಿಗೆ ಗಾಯ

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಕಂಬದಹಳ್ಳಿಯ ಆಂಜನೇಯ ಬೆಟ್ಟದ ತಪ್ಪಲಿನಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿದ್ದಾಗ ಕಸದ ರಾಶಿಯಲ್ಲಿದ್ದ ನಾಡ ಬಾಂಬ್ ಸ್ಫೋಟಗೊಂಡು ಮಾದಿಹಳ್ಳಿಯ ಜೈನ ಮಠಕ್ಕೆ ಸೇರಿದ ಪ್ರೌಢಶಾಲೆಯ 10ನೇ ತರಗತಿ ವಿದ್ಯಾರ್ಥಿಗಳಾದ ಹರಿಹಂತ್ ಪಾಟೀಲ ಮತ್ತು ಪಾರ್ಥ ಗಾಯಗೊಂಡಿದ್ದಾರೆ.

ಜೈನ ಮಠದ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಪ್ರತಿ ಭಾನುವಾರ ಬೆಟ್ಟದ ಆವರಣದಲ್ಲಿ ಸ್ವಚ್ಛತಾ ಕಾರ್ಯ ಮಾಡುತ್ತಿದ್ದರು. ಭಾನುವಾರ ಬೆಳಿಗ್ಗೆ 7.30ರ ಸುಮಾರಿಗೆ ಶ್ರಮದಾನದಲ್ಲಿ ತೊಡಗಿದ್ದಾಗ ಕಸದ ರಾಶಿಯಲ್ಲಿದ್ದ ನಾಡ ಬಾಂಬ್ ಸ್ಫೋಟಗೊಂಡಿದೆ. ಹರಿಹಂತ್ ಪಾಟೀಲಗೆ ಬಲಗೈ ತೀವ್ರವಾಗಿ ಗಾಯವಾಗಿದ್ದು, ಪಾರ್ಥನ ಮುಖಕ್ಕೆ ಗಾಯವಾಗಿದೆ. ಅವರನ್ನು ತಾಲ್ಲೂಕಿನ ಬಿ.ಜಿ.ನಗರದ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವಿದ್ಯಾರ್ಥಿ

ಸ್ಥಳಕ್ಕೆ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿವೈಎಸ್‌ಪಿ ಚಲುವರಾಜು, ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ದವರು ಭೇಟಿ ನೀಡಿ ಪರಿಶೀಲಿಸಿದರು.

ನಾಡಬಾಂಬ್ ಸ್ಫೋಟದಿಂದ ಭಕ್ತರು, ಪ್ರವಾಸಿಗರು ಹಾಗೂ ಸ್ಥಳೀಯರು ಆತಂಕಗೊಂಡಿದ್ದಾರೆ. ಕಾಡುಹಂದಿ ಬೇಟೆಗಾಗಿ ಬಾಂಬ್ ಇಟ್ಟಿರುವ ಶಂಕೆ ವ್ಯಕ್ತವಾಗಿದೆ. ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿಕೆಶಿ ದೆಹಲಿ ಪ್ರವಾಸ ನಾಳೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ (ಫೆ. 25) ದೆಹಲಿ ಪ್ರವಾಸ ಕೈಗೊಳ್ಳಲಿದ್ದು, ಈ ಸಂದರ್ಭದಲ್ಲಿ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರನ್ನೂ ಭೇಟಿ ಮಾಡಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ ಅವರನ್ನು ದೆಹಲಿಯಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಭೇಟಿ ಮಾಡಲಿರುವ ಡಿ.ಕೆ. ಶಿವಕುಮಾರ್, ರಾಜ್ಯದ ನೀರಾವರಿ ಯೋಜನೆಗಳ ಕುರಿತು ಚರ್ಚೆ ನಡೆಸಲಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದಿಂದ ನೆರವು, ಮಹದಾಯಿ, ಮೇಕೆದಾಟು, ಕೃಷ್ಣಾ ಮೇಲ್ದಂಡೆ ಯೋಜನೆಗಳ ಬಗ್ಗೆ ಶಿವಕುಮಾರ್ ಪ್ರಸ್ತಾಪಿಸಲಿದ್ದಾರೆ ಎಂದು ಗೊತ್ತಾಗಿದೆ.

ನಂತರ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲಿರುವ ಶಿವಕುಮಾರ್, ರಾಜ್ಯದ ವಿವಿಧೆಡೆ ನಿರ್ಮಿಸಲು ಉದ್ದೇಶಿಸಿರುವ ಪಕ್ಷದ ಕಚೇರಿಗಳಿಗೆ ಶಂಕುಸ್ಥಾಪನೆಗೆ ದಿನ ನಿಗದಿಪಡಿಸುವ ಕುರಿತು ಚರ್ಚೆ ನಡೆಸಲಿದ್ದಾರೆ. ಅಲ್ಲದೆ, ಆ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಿದ್ದಾರೆ. ಕಚೇರಿ ಕಟ್ಟಡ ನಿರ್ಮಾಣ ಮಾಡುವ ಜಾಗ ಕಾಂಗ್ರೆಸ್ ಪಕ್ಷದ ಹೆಸರಿನಲ್ಲಿ ನೋಂದಣಿ ಆಗಿದ್ದರೆ ಅಲ್ಲಿ ಮಾರ್ಚ್ 10ರಂದು ಶಂಕುಸ್ಥಾಪನೆ ನೆರವೇರಿಸಲು ಶಿವಕುಮಾರ್ ಮುಂದಾಗಿದ್ದಾರೆ. ಪಕ್ಷದ ವರಿಷ್ಠರೊಂದಿಗೆ ಚರ್ಚಿಸುವ ಸಾಧ್ಯತೆ ಇದೆ ಎಂದೂ ಮೂಲಗಳು ಹೇಳಿವೆ.

ಜೆಮ್ಸ್ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ವಿರುದ್ಧ ಪೋಷಕರ ಆಕ್ರೋಶ

ಮಹಿಳೆಯ ಹೊಟ್ಟೆಯಲ್ಲಿ ಹತ್ತಿ ಬಟ್ಟೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಜಿಮ್ಸ್) ಆವರಣದ ಜಿಲ್ಲಾ ಆಸ್ಪತ್ರೆಯ ತಾಯಿ ಮತ್ತು ಮಕ್ಕಳ ಚಿಕಿತ್ಸಾ ವಿಭಾಗದಲ್ಲಿ ಸಿಸೇರಿಯನ್ (ಶಸ್ತ್ರಚಿಕಿತ್ಸೆ) ಹೆರಿಗೆ ನಂತರ ಹೊಲಿಗೆಯೊಂದಿಗೆ ಹತ್ತಿಯ ಬಟ್ಟೆ ಇರಿಸಿದ್ದು, ಬಾಣಂತಿಯು ತೀವ್ರ ತೊಂದರೆ ಅನುಭವಿಸಿದ್ದಾರೆ.

ಅಫಜಲಪುರ ತಾಲ್ಲೂಕಿನ ಬಡದಳ ನಿವಾಸಿ, 22 ವರ್ಷದ ಬಾಣಂತಿ ಭಾಗ್ಯಶ್ರೀ ಖಾಜಪ್ಪ ಅವರ ಹೊಟ್ಟೆಯಲ್ಲಿ ಹೊಲಿಗೆಯೊಂದಿಗೆ ಹತ್ತಿ ಬಟ್ಟೆ ಇರಿಸಲಾಗಿತ್ತು. ಜಿಮ್ಸ್ ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿಯ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಬಾಣಂತಿಯ ಪೋಷಕರು ಆರೋಪಿಸಿದ್ದಾರೆ.

'ಹೆರಿಗೆ ನೋವಿನಿಂದ ಬಳಲುತ್ತಿದ್ದ ಭಾಗ್ಯಶ್ರೀಯನ್ನು ಫೆ. 5ರಂದು ಜಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದು, ಅದೇ ದಿನ ಬೆಳಿಗ್ಗೆ 6.15ಕ್ಕೆ ಸಿಸೇರಿಯನ್ ಹೆರಿಗೆ ಮಾಡಿ ಮರುದಿನವೇ ಡಿಸ್‌ಚಾರ್ಜ್ ಮಾಡಿದ್ದರು. ಸಿಸೇರಿಯನ್ ಮಾಡಿದ್ದ ಭಾಗದಲ್ಲಿ ತೀವ್ರವಾದ ನೋವು ಉಲ್ಬಣಿಸಿತ್ತು. ಸೋಲಾಪುರ, ಅಕ್ಕಲಕೋಟೆ ಯಲ್ಲಿ ಚಿಕಿತ್ಸೆ ಕೊಡಿಸಿದ್ದರೂ ನೋವು ಉಪಶಮನ ವಾಗಲಿಲ್ಲ. ಕೊನೆಗೆ ಎಕ್ಸ್-ರೇ ಮಾಡಿದಾಗ ಸಿಸೇರಿಯನ್ ಮಾಡಿದ ಜಾಗದಲ್ಲಿ ಹತ್ತಿಯ ಬಟ್ಟೆ ಇರುವುದಾಗಿ ವರದಿ ಬಂತು' ಎಂದು ಬಾಣಂತಿ ಸಹೋದರ ಜಗದೀಶ್ ಮಾಶಾಳ 'ಪ್ರಜಾವಾಣಿ'ಗೆ ತಿಳಿದರು.

ಬಾಣಂತಿಯ ದೇಹದ ಹೊಲಿಗೆಯಿಂದ ಹೊರ ತೆಗೆಯಲಾದ ಹತ್ತಿಯ ಬಟ್ಟೆ

'ಸಮೀಪದ ಕರಜಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ದಾಖಲಿಸಿ, ಹೊಲಿಗೆಯೊಂದಿಗೆ ಸೇರಿದ್ದ ಬಟ್ಟೆಯನ್ನು ತೆಗೆಸಲಾಯಿತು. ಎಕ್ಸ್-ರೇ, ಪ್ರಾಥಮಿಕ ಆರೋಗ್ಯ ಕೇಂದ್ರದ ಚಿಕಿತ್ಸಾ ವರದಿಯನ್ನು ಜಿಮ್ಸ್‌ನ ತಾಯಿ ಮತ್ತು ಮಕ್ಕಳ ಚಿಕಿತ್ಸಾ ವಿಭಾಗದವರ ಮುಂದಿಟ್ಟಾಗ, ಅಲ್ಲಿನ ವೈದ್ಯರು ಹಾಗೂ ಸಿಬ್ಬಂದಿ ತಾವು ಮಾಡಿಲ್ಲ ಎಂದು ಜಾರಿಕೊಂಡರು. ಹೊಲಿಗೆಯೊಂದಿಗೆ ಹತ್ತಿಯ ಬಟ್ಟೆ ಇರಿಸಿದ್ದವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಂಡಿಲ್ಲ' ಎಂದು ದೂರಿದರು.

'ದೇಹದ ಹೊಲಿಗೆಯೊಂದಿಗೆ ಸೇರಿದ ಹತ್ತಿ ಬಟ್ಟೆಯನ್ನು ತೆಗೆದು ಬಾಣಂತಿಯನ್ನು ಪ್ರಾಣಾಪಾಯದಿಂದ ಪಾರು ಮಾಡಿದ್ದ ಕರಜಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯನ್ನು ಡಿಎಚ್‌ಒ ಏಕಾಏಕಿ ಬಡದಾಳ ಆರೋಗ್ಯ ಕೇಂದ್ರಕ್ಕೆ ವರ್ಗಾಯಿಸಿದ್ದಾರೆ. ತಪ್ಪು ಮಾಡಿದ ಜಿಮ್ಸ್ ವೈದ್ಯರ ವಿರುದ್ಧ ಕ್ರಮ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದಾರೆ. ಹೆರಿಗೆ ನಂತರದ ವೈದ್ಯಕೀಯ ವರದಿಗಳನ್ನು ನಮ್ಮಿಂದ ಪಡೆದು ವಾಪಸ್ ಕೊಡಲು ನಿರಾಕರಿಸುತ್ತಿದ್ದಾರೆ' ಎಂದರು.

ಪ್ರಾಥಮಿಕ ಆರೋಗ್ಯ ಅಧಿಕಾರಿ ನೀಡಿದ ಚಿಕಿತ್ಸಾ ವರದಿ ಪತ್ರದಲ್ಲಿ ಬಟ್ಟೆಯ ಸಣ್ಣ ತುಂಡನ್ನು ಹೊರತೆಗೆಯಲಾಗಿದೆ ಎಂದು ಉಲ್ಲೇಖಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯೆಗೆ ಜಿಲ್ಲಾ ಸರ್ಜನ್, ಡಿಎಚ್‌ಒ, ವೈದ್ಯಕೀಯ ಅಧಿಕಾರಿ ಲಭ್ಯವಾಗಲಿಲ್ಲ.

ಅಮೆರಿಕದಿಂದ ಗಡೀಪಾರು 12 ಭಾರತೀಯರು ವಾಪಸ್

ನವದೆಹಲಿ(ಪಿಟಿಐ): ಅಕ್ರಮವಾಗಿ ನೆಲಸಿದ್ದಾರೆ ಎಂಬ ಕಾರಣಕ್ಕೆ ಅಮೆರಿಕದಿಂದ ಗಡೀಪಾರು ಮಾಡಲಾಗಿರುವ 12 ಮಂದಿ ಭಾರತೀಯರು ಭಾನುವಾರ ಇಲ್ಲಿ ಬಂದಿಳಿದರು.

12 ಜನರನ್ನು ಅಮೆರಿಕ, ಪನಾಮಾಕ್ಕೆ ಗಡೀಪಾರು ಮಾಡಿತ್ತು. ಅಲ್ಲಿಂದ ಇವರನ್ನು ಭಾರತಕ್ಕೆ ಕಳುಹಿಸಲಾಗಿದ್ದು, ಇವರನ್ನು ಹೊತ್ತ ವಿಮಾನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಬಂದಿಳಿಯಿತು. ಇವರಲ್ಲಿ ನಾಲ್ವರು ಪಂಜಾಬ್‌ನವರು.

ಇದು, ಅಮೆರಿಕ ಗಡೀಪಾರು ಮಾಡಿದ ಮೇಲೆ, ಪನಾಮಾದಿಂದ ವಾಪಸಾದ ಭಾರತೀಯರ ಮೊದಲ ತಂಡವಾಗಿದೆ.

ಅಕ್ರಮವಾಗಿ ನೆಲಸಿದ್ದ ಕಾರಣಕ್ಕಾಗಿ, ಈ 12 ಜನರನ್ನು ಸೇರಿ ಅಮೆರಿಕ ಈ ವರೆಗೆ 300ಕ್ಕೂ ಹೆಚ್ಚು ಮಂದಿಯನ್ನು ಭಾರತಕ್ಕೆ ವಾಪಸ್ ಕಳುಹಿಸಿದಂತಾಗಿದೆ.

ದೆಹಲಿಗೆ ಹೊರಟಿದ್ದ ವಿಮಾನ ರೋಮ್‌ಗೆ

ನ್ಯೂಯಾರ್ಕ್(ಪಿಟಿಐ): ನ್ಯೂಯಾರ್ಕ್‌ನಿಂದ ದೆಹಲಿಗೆ ಹೊರಟಿದ್ದ ಅಮೆರಿಕನ್ ಏರ್‌ಲೈನ್ಸ್‌ನ ವಿಮಾನದ ಮಾರ್ಗ ಬದಲಿಸಿ ಇಟಲಿಯ ರೋಮ್‌ಗೆ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಬಾಂಬ್ ಬೆದರಿಕೆ ಕರೆ ಬಂದಿರುವುದೇ ವಿಮಾನದ ಮಾರ್ಗ ಬದಲಿಸಲು ಕಾರಣ ಎನ್ನಲಾಗಿದೆ. ವಿಮಾನವು (ಎಎ292) ಫೆ.22ರಂದು ನ್ಯೂಯಾರ್ಕ್‌ನ ಜೆಎಫ್‌ಕೆ ಅಂತರರಾಷ್ಟ್ರೀಯ ವಿಮಾನನಿಲ್ದಾಣದಿಂದ ಹೊರಟಿತ್ತು. ಈಗ, ಅದರ ಮಾರ್ಗ ಬದಲಿಸಿದ್ದು, ರೋಮ್‌ಗೆ ತೆರಳಿದೆ ಎಂದು ವಿಮಾನಗಳ ಹಾರಾಟದ ಮೇಲೆ ಕಣ್ಣಾಗವಲಿಡುವ ಜಾಲತಾಣ 'ಫ್ಲೈಟ್‌ರೇಡಾರ್24.ಕಾಂ' ಹೇಳಿದೆ.

ಬೀಜದಿಂದ ಮಾರುಕಟ್ಟೆಯವರೆಗೆ ಪ್ರಧಾನಿ ಮೋದಿಯವರು ರೈತರೊಂದಿಗೆ ನಿಂತಿದ್ದಾರೆ.

- ಕಳೆದ 10 ವರ್ಷಗಳಲ್ಲಿ ಗೋಧಿ, ಭತ್ತ, ಹತ್ತಿ, ದ್ವಿದಳ ಧಾನ್ಯ ಮತ್ತು ಎಣ್ಣೆ ಬೀಜಗಳನ್ನು ಖರೀದಿಸಲು ಕನಿಷ್ಠ ಬೆಂಬಲ ಬೆಲೆಯಲ್ಲಿ ರೂ. 20 ಲಕ್ಷ ಕೋಟಿಗೂ ಹೆಚ್ಚು ಖರ್ಚು ಮಾಡಲಾಗಿದೆ.
- ರೂ. 12 ಲಕ್ಷ ಕೋಟಿ ರಸಗೊಬ್ಬರ ಸಬ್

ಸುಭಾಷಿತ

ಆದರ್ಶಗಳು ಪ್ರತಿದಿನ ಪಠಣ ಮಾಡಬೇಕಾದ ಗೊಡ್ಡು ಮಂತ್ರಗಳಲ್ಲ, ಅವು ನಮ್ಮ ಜೀವನದ ಉಸಿರು.

-ಕುವೆಂಪು

ಮುಡಾ ಪ್ರಕರಣದಲ್ಲಿ 'ಬಿ' ವರದಿ ಸಿದ್ದರಾಮಯ್ಯ ಸದ್ಯಕ್ಕೆ ನಿರಾಳ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ನಡೆದಿದೆ ಎನ್ನಲಾದ ಹಗರಣದ ತನಿಖೆ ನಡೆಸಿದ ಲೋಕಾಯುಕ್ತ ಪೊಲೀಸರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದೋಷಮುಕ್ತಗೊಳಿಸಿದ್ದಾರೆ. ಇದು ಬಹಳ ಮಹತ್ವದ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರಿಗೆ ಬಲ ತುಂಬುವ ರೀತಿಯಲ್ಲಿ ಒದಗಿಬಂದಿದೆ. ಸಿದ್ದರಾಮಯ್ಯ, ಅವರ ಪತ್ನಿ ಬಿ.ಎಂ. ಪಾರ್ವತಿ ಮತ್ತು ಪಾರ್ವತಿ ಅವರ ಸಹೋದರ ಬಿ.ಎಂ. ಮಲ್ಲಿಕಾರ್ಜುನ ಸ್ವಾಮಿ ಅವರು ಭ್ರಷ್ಟಾಚಾರ ಎಸಗಿದ್ದಾರೆ, ಅಕ್ರಮ ನಡೆಸಿದ್ದಾರೆ ಎಂಬ ಆರೋಪಗಳನ್ನು ಲೋಕಾಯುಕ್ತ ಪೊಲೀಸ್ ವರದಿಯು ಸಾಕ್ಷ್ಯಾಧಾರಗಳ ಕೊರತೆಯ ಕಾರಣದಿಂದಾಗಿ ತಳ್ಳಿಹಾಕಿದೆ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಯಲ್ಲಿ ಮುಂದುವರಿಯುತ್ತಾರೋ ಇಲ್ಲವೋ ಎಂಬುದರ ಕುರಿತಾದ ಊಹಾಪೋಹಗಳು, ಡಿ.ಕೆ. ಶಿವಕುಮಾರ್ ಜೊತೆ ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ನಡೆದಿದೆ ಎನ್ನಲಾದ ಮಾತುಕತೆ ಕುರಿತ ಚರ್ಚೆಗಳು ಬಿರುಸು ಪಡೆದುಕೊಂಡಿರುವ ಸಂದರ್ಭದಲ್ಲಿಯೇ ಲೋಕಾಯುಕ್ತ ಪೊಲೀಸರು ಈ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ. ವರದಿ ಸಲ್ಲಿಕೆಯಾಗಿರುವ ಸಂದರ್ಭವು ಸಿದ್ದರಾಮಯ್ಯ ಅವರ ಪಾಲಿಗೆ ಬಹಳ ಅನುಕೂಲಕರವಾಗಿರುವಂತೆ ಕಾಣುತ್ತಿದೆ. 2023ರಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರ ರಚನೆಯಾದಾಗಿನಿಂದಲೂ ಮೊದಲ ಎರಡೂವರೆ ವರ್ಷಗಳ ಅವಧಿಗೆ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿರುತ್ತಾರೆ, ನಂತರದ ಎರಡೂವರೆ ವರ್ಷಗಳ ಅವಧಿಗೆ ಶಿವಕುಮಾರ್ ಮುಖ್ಯಮಂತ್ರಿ ಆಗುತ್ತಾರೆ ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಮತ್ತೆ ಮತ್ತೆ ಕೇಳಿಸಿವೆ. ಇದು, ರಾಜ್ಯ ರಾಜಕಾರಣದಲ್ಲಿ ಒಂದಿಷ್ಟು ಮುಸುಕಿನ ಗುದ್ದಾಟಗಳಿಗೂ ತೆರೆಮರೆಯ ಕಸರತ್ತುಗಳಿಗೂ ಕಾರಣವಾಗಿದೆ. ಬೇರೆ ಬೇರೆ ಸಮುದಾಯಗಳಿಗೆ ಸೇರಿದ ಶಾಸಕರು ತಮ್ಮ ರಾಜಕೀಯ ಲೆಕ್ಕಾಚಾರಗಳಿಗೆ ಅನುಗುಣವಾಗಿ ಬೇರೆ ಬೇರೆ ಗುಂಪುಗಳ ಜೊತೆ ಗುರುತಿಸಿಕೊಳ್ಳುವ ಯತ್ನ ನಡೆಸಿದ್ದಿದೆ. ಲೋಕಾಯುಕ್ತ ಪೊಲೀಸರ ವರದಿಯು ಸಿದ್ದರಾಮಯ್ಯ ಅವರಿಗೆ ಪೂರಕವಾಗಿ ಇಲ್ಲದೇ ಇದ್ದಿದ್ದರೆ, ಆಡಳಿತಾರೂಢ ಪಕ್ಷದಲ್ಲಿನ ಬೆಳವಣಿಗೆಗಳ ಮೇಲೆ ಅದು ಪರಿಣಾಮ ಬೀರುವ ಸಾಧ್ಯತೆ ಇತ್ತು ಎಂಬುದು ಈ ಎಲ್ಲ ಬೆಳವಣಿಗೆಗಳನ್ನು ಗಮನದಲ್ಲಿ ಇರಿಸಿಕೊಂಡು ಸಂದರ್ಭವನ್ನು ಗ್ರಹಿಸಿದರೆ ಅರ್ಥವಾಗುತ್ತದೆ.

ಮುಂದೆ ಅಕ್ರಮಗಳು ನಡೆಯಬಾರದು ಎಂದಾದರೆ, ಈಗ ಆಗಿರುವ ತಪ್ಪುಗಳಿಗೆ ಯಾರು ಕಾರಣ ಎಂಬುದು ಗೊತ್ತಾಗಬೇಕು

ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ ಪೊಲೀಸರ ವರದಿಯು ನೀಡಿರುವುದು ತಾತ್ಕಾಲಿಕವಾದ ಸಮಾಧಾನವನ್ನು ಮಾತ್ರ. ಏಕೆಂದರೆ, ಸಿದ್ದರಾಮಯ್ಯ ಅವರಿಗೆ ಎದುರಾಗಿರುವ ಸಮಸ್ಯೆಗಳು ಈ ವರದಿಯ ಕಾರಣದಿಂದಾಗಿ ಕೊನೆಗೊಳ್ಳುವ ಸಾಧ್ಯತೆ ಕಡಿಮೆ. ಮುಂದಿನ ದಿನಗಳಲ್ಲಿ ಅವರು ಮುಡಾ ವಿಚಾರವಾಗಿಯೇ ಹಲವು ಸವಾಲುಗಳನ್ನು ಎದುರಿಸಬೇಕಾಗಬಹುದು. ಈ ಪ್ರಕರಣದಲ್ಲಿ ಹಣದ ಅಕ್ರಮ ವರ್ಗಾವಣೆ ಆಗಿದೆಯೇ ಎಂಬ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸುತ್ತಿದೆ. ಅಂದರೆ ಸಿದ್ದರಾಮಯ್ಯ ಅವರ ಮೇಲೆ ಕಾನೂನಿನ ತೂಗುಗತ್ತಿ ಇನ್ನೂ ಇದೆ. ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ವರದಿಯು 'ನಿರೀಕ್ಷಿತ' ಹಾಗೂ 'ಪಕ್ಷಪಾತಿ' ಎಂದು ಬಿಜೆಪಿ ಹೇಳಿದೆ. ಸಿದ್ದರಾಮಯ್ಯ ವಿರುದ್ಧದ ತನ್ನ ಹೋರಾಟವನ್ನು ಮುಂದುವರಿಸುವುದಾಗಿ ಅದು ಸ್ಪಷ್ಟಪಡಿಸಿದೆ. ವಿಚಾರಣಾ ನ್ಯಾಯಾಲಯವು ಲೋಕಾಯುಕ್ತ ಪೊಲೀಸರು ಸಲ್ಲಿಸಿರುವ ವರದಿಯನ್ನು ತಿರಸ್ಕರಿಸಿ, ಹೊಸದಾಗಿ ತನಿಖೆ ನಡೆಸುವಂತೆ ಸೂಚಿಸಬಹುದಾದ ಸಾಧ್ಯತೆಯನ್ನೂ ಅಲ್ಲಗಳೆಯಲು ಆಗದು. ವರದಿಗೆ ಆಕ್ಷೇಪ ಸಲ್ಲಿಸುವುದಾಗಿ ದೂರುದಾರ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ. ಆ ಮೂಲಕ ಅವರು ಕಾನೂನು ಸಮರ ಕೊನೆಗೊಂಡಿಲ್ಲ ಎಂಬುದನ್ನು ಸ್ಪಷ್ಟಪಡಿಸಿದಂತಿದೆ. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂಬ ಅರ್ಜಿಯೊಂದನ್ನು ಹೈಕೋರ್ಟ್ ಈಚೆಗೆ ವಜಾಗೊಳಿಸಿದ್ದು ಇಲ್ಲಿ ಉಲ್ಲೇಖನೀಯ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಹಲವು ವರ್ಷಗಳಿಂದಲೂ ವಿವಾದಗಳಿಗೆ ಆಹಾರವಾಗಿದೆ. ಅಲ್ಲಿ ನಿವೇಶನಗಳ ಹಂಚಿಕೆಯಲ್ಲಿ ಕಾಣದ ಕೈಗಳ ಪ್ರಭಾವ ಇದೆ ಎಂಬ ಆರೋಪಗಳು ಇವೆ. ಭ್ರಷ್ಟಾಚಾರದ ವಿಸ್ತೃತ ಆಯಾಮದ ಕುರಿತಾಗಿ ತನಿಖೆ ಮುಂದುವರಿಯಲಿದೆ ಎಂದು ಲೋಕಾಯುಕ್ತ ಪೊಲೀಸರ ವರದಿಯು ಸ್ಪಷ್ಟಪಡಿಸಿದೆ. ತಪ್ಪು ಮಾಡಿದವರು ಯಾವುದೇ ಪಕ್ಷದಲ್ಲಿ ಇರಲಿ, ಅವರನ್ನು ಗುರುತಿಸಿ, ಉತ್ತರದಾಯಿ ಆಗಿಸಿದಾಗ ಮಾತ್ರವೇ ಲೋಕಾಯುಕ್ತ ಸಂಸ್ಥೆಯು ಸಾರ್ವಜನಿಕರ ವಿಶ್ವಾಸವನ್ನು ಗಳಿಸಬಹುದು. ಅಲ್ಲದೆ, ಮುಂದೆ ಇಂತಹ ಅಕ್ರಮಗಳು ನಡೆಯಬಾರದು ಎಂದಾದರೆ, ಈಗ ಆಗಿರುವ ತಪ್ಪುಗಳಿಗೆ ಯಾರು ಕಾರಣ ಎಂಬುದು ಗೊತ್ತಾಗಬೇಕು. ಸಿದ್ದರಾಮಯ್ಯ ಅವರು ಈಗ 'ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾವಿರ ವರ್ಷ ಆಯಸ್ಸು' ಎಂದು ಸಮಾಧಾನಪಟ್ಟುಕೊಳ್ಳಬಹುದು. ಆದರೆ, ಈ ಸಮಾಧಾನವು ತಾತ್ಕಾಲಿಕವೋ ಶಾಶ್ವತವೋ ಎನ್ನುವುದನ್ನು ಈಗಲೇ ಹೇಳಲಾಗದು.

ದಿನದ ಟ್ವೀಟ್

ಪುಂಡಾಟಿಕೆಗೆ ಪುಂಡಾಟಿಕೆಯೇ ಉತ್ತರವಲ್ಲ

ಸಾರ್ವಜನಿಕ ಅಥವಾ ಖಾಸಗಿ ಆಸ್ತಿಗಳನ್ನು ಕ್ಷುಲ್ಲಕ ಕಾರಣಕ್ಕೆ ಯಾಕೆ ಹಾಳು ಮಾಡಬೇಕು? ರಾಜ್ಯ, ಭಾಷೆ ಬೇರೆ, ಆದರೆ ನಮ್ಮದೇ ದೇಶದ ಸ್ವತ್ತಲ್ಲವೇ? ನಮ್ಮದೇ ತೆರಿಗೆ ಹಣ ಅಲ್ಲವೇ? ಪರರಾಜ್ಯಕ್ಕೂ ನಮ್ಮ ಅಣ್ಣ-ತಮ್ಮ, ಅಕ್ಕ-ತಂಗಿ, ಬಂಧು-ಬಾಂಧವರು ಅನ್ನಕ್ಕಾಗಿ ಹೋಗಿಲ್ಲವೇ?

(ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ಬಸ್ ಚಾಲಕನಿಗೆ ಕನ್ನಡಪರ ಹೋರಾಟಗಾರರು ಮಸಿ ಬಳಿದಿರುವುದಕ್ಕೆ ಪ್ರತಿಕ್ರಿಯೆ)

ಮುರಳಿ ಮೋಹನ್, ಎಂಜಿನಿಯರ್

ಕಿಡಿನುಡಿ

ಬೆಂಗಳೂರಿನಲ್ಲಿ ಶಬ್ದಮಾಲಿನ್ಯ ಮಿತಿಮೀರಿದೆ. ಇಂತಹವರಿಗೆ ದಂಡ ವಿಧಿಸಿ ಸೂಕ್ತ ಕಾನೂನು ಕ್ರಮ ಜರುಗಿಸಿ.

(ಬೆಂಗಳೂರಿನ ಬರ್ಜ್ ಸ್ಟ್ರೀಟ್‌ನಲ್ಲಿ ಕರ್ಕಶ ಶಬ್ದದೊಂದಿಗೆ ಬೆಂಕಿ ಉಗುಳುವಂತೆ ಮಾರ್ಪಡಿಸಲಾಗಿದ್ದ ಕಾರನ್ನು ಸಂಚಾರ ಪೊಲೀಸರು ವಶಕ್ಕೆ ಪಡೆದು ಪ್ರಕರಣ ದಾಖಲಿಸಿರುವುದಕ್ಕೆ ಪ್ರತಿಕ್ರಿಯೆ)

ಮೋಹನ್, ಪರಿಸರವಾದಿ

25 ವರ್ಷಗಳ ಹಿಂದೆ

ಗುರುವಾರ, 24.2.2000

- **ಸಂವಿಧಾನ ಪರಾಮರ್ಶೆ ಸಮಿತಿ ರಚನೆ ರಾಷ್ಟ್ರಪತಿ ಸಮರ್ಥನೆ**

ನವದೆಹಲಿ, ಫೆ. 23- ಸಂವಿಧಾನ ಪರಾಮರ್ಶೆಗೆ ಕೆಲವು ದಿನಗಳ ಹಿಂದೆಯಷ್ಟೇ ವೈಯಕ್ತಿಕವಾಗಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ರಾಷ್ಟ್ರಪತಿ ಕೆ.ಆರ್. ನಾರಾಯಣನ್, ಸಂವಿಧಾನ ಪರಾಮರ್ಶೆ ಸಮಿತಿ ನೇಮಕದ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

ಬಜೆಟ್ ಅಧಿವೇಶನದ ಆರಂಭದ ಅಂಗವಾಗಿ ಸಂಸತ್‌ನ ಜಂಟಿ ಅಧಿವೇಶನ ವನ್ನು ಉದ್ದೇಶಿಸಿ ಅವರು ಮಾತನಾಡಿದರು.

ಸಂವಿಧಾನದ ಮೂಲಭೂತ ತತ್ವಗಳ ಉಲ್ಲಂಘನೆ ಮಾಡದಂತೆ, ಕಳೆದ 50 ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ಸಂವಿಧಾನವನ್ನು ಪರಾಮರ್ಶೆ ಮಾಡಲಾಗು ವುದು. ಇದಕ್ಕಾಗಿ ಆಯೋಗವೊಂದನ್ನು ರಚಿಸಲಾಗಿದ್ದು, ಅದು ನೀಡುವ ವರದಿಯನ್ನು ಸಂಸತ್ತಿನ ಒಪ್ಪಿಗೆಗಾಗಿ ಮಂಡಿಸುವುದಾಗಿ ಸರ್ಕಾರದ ನೀತಿಯನ್ನು ಸಮರ್ಥಿಸಿಕೊಂಡರು.

- **ಸರ್ಕಾರಿ ವೈದ್ಯರ ಖಾಸಗಿ ಪ್ರ್ಯಾಕ್ಟಿಸ್ ರದ್ದು ಸಂಭವ**

ಹಾಸನ, ಫೆ. 23- ಸರ್ಕಾರಿ ವೈದ್ಯರು ಖಾಸಗಿಯಾಗಿ ವೈದ್ಯ ವೃತ್ತಿ ನಡೆಸಲು ಹಿಂದೆ ನೀಡಿದ್ದ ಅನುಮತಿಯನ್ನು ಹಿಂತೆಗೆದು ಕೊಳ್ಳುವ ಬಗ್ಗೆ ಆಲೋಚನೆ ನಡೆದಿದೆ ಎಂದು ಆರೋಗ್ಯ ಸಚಿವ ಡಾ. ಎ.ಬಿ. ಮಾಲಕ ರೆಡ್ಡಿ ಇಂದು ಇಲ್ಲಿ ಪ್ರಕಟಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಿ, ಮನೆಗಳಿಗೆ ತೆರಳಿದ ನಂತರವೂ ತುರ್ತು ಪ್ರಕರಣಗಳಲ್ಲಿ ಸಾರ್ವಜನಿಕರಿಗೆ ತಜ್ಞರು ಹಾಗೂ ಅನುಭವಿ ವೈದ್ಯರ ಸೇವೆ ಲಭ್ಯವಾಗಬೇಕು ಎಂಬ ಉದ್ದೇಶದಿಂದ ಖಾಸಗಿಯಾಗಿ ಪ್ರ್ಯಾಕ್ಟಿಸ್ ಮಾಡಲು ಅವಕಾಶ ನೀಡಲಾಗಿತ್ತು. ಇಂದು ಎಲ್ಲೆಡೆ ಖಾಸಗಿ ಆಸ್ಪತ್ರೆಗಳಲ್ಲಿ ತಜ್ಞರು, ಪರಿಣತರು ಇರುವುದರಿಂದ ಈಗ ಸರ್ಕಾರಿ ವೈದ್ಯರು ಖಾಸಗಿಯಾಗಿ ಪ್ರ್ಯಾಕ್ಟಿಸ್ ಮಾಡುವ ಅಗತ್ಯ ಕಂಡುಬರುತ್ತಿಲ್ಲ ಎಂದರು.

50 ವರ್ಷಗಳ ಹಿಂದೆ

ಸೋಮವಾರ, 24.2.1975

- **ಹಂಪಿಯಲ್ಲಿ 'ವಿಜಯನಗರ ಉತ್ಸವ'**

ಬೆಂಗಳೂರು, ಫೆ. 23- ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿ ಕಾರ್ಪೊರೇಷನ್ ಮಾರ್ಚ್ ತಿಂಗಳ ಮೂರನೆಯ ವಾರದಲ್ಲಿ ಹಂಪಿಯಲ್ಲಿ 'ವಿಜಯನಗರ ಉತ್ಸವ' ಎಂಬ ಆಕರ್ಷಕ ಕಾರ್ಯಕ್ರಮ ಏರ್ಪಡಿಸಿದೆ.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಹಂಪಿಯತ್ತ ಪ್ರವಾಸಿಗರನ್ನು ಆಕರ್ಷಿಸುವುದೇ ಈ ಕಾರ್ಯಕ್ರಮದ ಉದ್ದೇಶ ಎಂದು ಕಾರ್ಪೊರೇಷನ್ನಿನ ಅಧ್ಯಕ್ಷ ಅಜೀಜ್ ಸೇಠ್ ಅವರು ಇಂದು ಸುದ್ದಿಗಾರರಿಗೆ ತಿಳಿಸಿದರು.

ಈ ಉತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ರಾಜ್ಯದ ಪ್ರಮುಖ ಭಾಗಗಳಿಂದ ಹಂಪಿ, ಬಳ್ಳಾರಿ, ಹೊಸಪೇಟೆ ಯಲ್ಲಿ ವಸತಿ ಸೌಲಭ್ಯ ಏರ್ಪಡಿಸಲಾಗುವುದು.

ಮಾ.16ರಿಂದ 23ರವರೆಗೆ ಪ್ರತಿದಿನ ನೃತ್ಯ, ಸಂಗೀತ, ನಾಟಕ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮ, ಕವಿ ಸಮ್ಮೇಳನ, 'ಮರೆತ ಸಾಮ್ರಾಜ್ಯ' ಎಂಬ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗುವುದು ಎಂದು ತಿಳಿಸಿದ ಅಜೀಜ್ ಸೇಠ್, ಕಲಾವಿದರು ಮತ್ತು ಸಾಹಿತಿಗಳಾದ ಎಂ.ಎಸ್. ಸತ್ಯು, ಗಿರೀಶ ಕಾರ್ನಾಡ, ಪಿ. ಲಂಕೇಶ್, ಬಿ.ವಿ. ಕಾರಂತ, ಚಂದ್ರಶೇಖರ ಕಂಬಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರ ಪಡೆಯಲಾಗುವುದು ಎಂದರು.

ದೀಪೋತ್ಸವ: ಹಂಪಿಯಲ್ಲಿ ಮಹತ್ವದ ಸ್ಮಾರಕಗಳಲ್ಲಿ ದೀಪೋತ್ಸವ ನಡೆಸುವುದು ಈ ಕಾರ್ಯಕ್ರಮದ ಇನ್ನೊಂದು ವೈಶಿಷ್ಟ್ಯ.

ಅರಣ್ಯ ಸಂಪತ್ತಿಗೆ ಬೆಂಕಿ ಹಚ್ಚುವುದು ವಿಷವರ್ತುಲದ ಬಾಗಿಲು ತೆರೆದಂತೆ

ಕಾಳ್ಗಿಚ್ಚು: ಸಂಕಟ ನೂರೆಂಟು

ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಶಿವಮೊಗ್ಗ ಜಿಲ್ಲೆಯ ಶರಾವತಿ ಸಿಂಗಳೀಕ ಅಭಯಾರಣ್ಯದ ಅಂಬಾರಗುಡ್ಡದಲ್ಲಿ ಇದೇ ತಿಂಗಳ ಮೊದಲ ವಾರದಲ್ಲೇ ಬೆಂಕಿ ಬಿತ್ತು, ಸುಮಾರು 8 ಎಕರೆ ಕಾಡು ಸುಟ್ಟಿತು. ಎರಡನೇ ವಾರದಲ್ಲಿ ಶ್ರೀರಂಗಪಟ್ಟಣದ ಕರಿಗುಡ್ಡಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದರಿಂದ, ನೂರಾರು ಎಕರೆ ಕಾಡು ಭಸ್ಮವಾಯಿತಲ್ಲದೆ, ಅಲ್ಲಿನ ಅಸಂಖ್ಯ ವನ್ಯಜೀವಿಗಳ ಬದುಕು ನಾಶವಾಯಿತು. ಚಾಮುಂಡಿಬೆಟ್ಟದ ಉತ್ತನಹಳ್ಳಿ ಹಾಗೂ ಲಲಿತಾದ್ರಿಪುರ ಭಾಗದಲ್ಲಿ ಶುಕ್ರವಾರ ಸುಮಾರು 200 ಎಕರೆ ಅರಣ್ಯ ಸಂಪತ್ತು ಬೆಂಕಿಗೆ ಆಹುತಿಯಾಯಿತು.

ಕರಿಗುಡ್ಡಕ್ಕೆ ಬೆಂಕಿ ಹಾಕಿದರೆ ಮಕ್ಕಳಾಗುತ್ತವೆ ಎಂಬ ಮೂಢನಂಬಿಕೆಯೂ ಬೆಂಕಿ ಹಚ್ಚಲು ಒಂದು ಕಾರಣ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಶುಷ್ಕತನದ ಚಳಿ ವಾತಾವರಣವು ನೆಲದ ತೇವಾಂಶವನ್ನು ವೇಗವಾಗಿ ಆರಿಸುತ್ತಿದೆ. ಮಧ್ಯಾಹ್ನದ ಉರಿಬಿಸಿಲಿನಿಂದ ಬಳಲುವ ಅರಣ್ಯ ಪ್ರದೇಶಗಳು ಮಾನವಪ್ರೇರಿತ ಬೆಂಕಿ ಅನಾಹುತಕ್ಕೆ ವೇಗವಾಗಿ ತುತ್ತಾಗುತ್ತಿವೆ. ಭಾರತದಲ್ಲಿ ಸಂಭವಿಸುವ ಬೆಂಕಿ ಅನಾಹುತಗಳಲ್ಲಿ ಶೇಕಡ 95ರಷ್ಟು ಮಾನವ ಪ್ರೇರಿತವಾದವು. ಕಾಡಂಚಿನ ಕೃಷಿಭೂಮಿಯಲ್ಲಿ ನಡೆಯುವ ಕೃಷಿ ಉಳಿಕೆ ಸುಡುವ ಚಟುವಟಿಕೆಗಳು ಕಾಡಿಗೆ ಬೆಂಕಿ ಹರಡಲು ಕಾರಣವಾಗುತ್ತವೆ. ಕಾಡಂಚಿನ ಹುಲ್ಲುಗಾವಲುಗಳಿಗೆ ಬೆಂಕಿ ಹಚ್ಚುವುದರಿಂದಲೂ ಕಾಡಿಗೆ ಬೆಂಕಿ ಆವರಿಸಿಕೊಳ್ಳುತ್ತದೆ. ಒಣಗಿದ ಹುಲ್ಲುಗಾವಲಿಗೆ ಬೆಂಕಿ ಹಚ್ಚುವುದರಿಂದ, ಮುಂದಿನ ಹುಲ್ಲಿನ ಫಸಲು ಚೆನ್ನಾಗಿ ಬರುತ್ತದೆ ಎಂಬ ನಂಬಿಕೆಯೂ ಕಾಡಿನ ಬೆಂಕಿಗೆ ಕಾರಣವಾಗುತ್ತಿದೆ. ನಂದಿಸದೇ ಎಸೆದ ಸಿಗರೇಟು ಮತ್ತು ಬೀಡಿಯ ತುಂಡುಗಳಿಂದಲೂ ಬೆಂಕಿ ಹರಡುತ್ತದೆ.

2020ರಿಂದ 2024ರವರೆಗೆ ಕರ್ನಾಟಕದ 20,933 ಸ್ಥಳಗಳಲ್ಲಿ ಬೆಂಕಿ ತಗುಲಿರುವುದನ್ನು ಉಪಗ್ರಹ ಆಧಾರಿತ ಅಂಕಿ-ಅಂಶಗಳು ದೃಢಪಡಿಸಿವೆ. ಇದೇ ಜನವರಿ 6ರಿಂದ 12ರವರೆಗೆ ರಾಜ್ಯದ ಅನೇಕ ಅರಣ್ಯ ಪ್ರದೇಶಗಳಲ್ಲಿ ಬೆಂಕಿ ಬಿದ್ದಿದೆ. ಪಶ್ಚಿಮಘಟ್ಟ ಭಾಗಗಳಲ್ಲಿ ಬೇಸಿಗೆಯಲ್ಲಿ ಬೆಂಕಿ ಹಾಕುವ ಪ್ರವೃತ್ತಿ ತುಸು ಹೆಚ್ಚೇ ಇದೆ. 2023ರ ಮಾರ್ಚ್ 10ರಂದು ಶಿವಮೊಗ್ಗದ ಶೆಟ್ಟಿಹಳ್ಳಿ ಅಭಯಾರಣ್ಯದಲ್ಲಿ ಒಂದೇ ದಿನದಲ್ಲಿ 23 ಕಡೆ ಬೆಂಕಿ ಹಚ್ಚಿದ ಪ್ರಕರಣ ದಾಖಲಾಗಿದೆ. ಕೃಷಿ ನೆಲೆಯನ್ನು ವಿಸ್ತರಿಸಿಕೊಳ್ಳಲು ಬೆಂಕಿ ಹಚ್ಚಲಾಗಿದೆ ಎಂದು ಅರಣ್ಯ ಇಲಾಖೆಯ ಮೂಲಗಳು ಹೇಳುತ್ತವೆ. ಒಂದು ಪ್ರಕರಣದಲ್ಲಿ ಮಾತ್ರ ಬೆಂಕಿ ಹಚ್ಚಿದವರ ವಿರುದ್ಧ ಪ್ರಕರಣ ದಾಖಲಾಗಿದೆ.

ಹಿಂದಿನ ಶತಮಾನದ ಅಂತ್ಯಭಾಗದವರೆಗೂ ಕಾಡಿಗೆ ಬೆಂಕಿ ಹಚ್ಚುವ ಪ್ರಕರಣಗಳು ಈಗಿನ ಪ್ರಮಾಣಕ್ಕೆ ಹೋಲಿಸಿದರೆ ತುಂಬಾ ಕಡಿಮೆಯಿದ್ದವು. ಕೃಷಿ ವಿಸ್ತರಣೆಗಾಗಿ, ನಿರ್ಲಕ್ಷ್ಯದಿಂದ ಅಥವಾ ಉದ್ದೇಶಪೂರ್ವಕ ವಾಗಿ ಕಾಡಿಗೆ ಬೆಂಕಿಯಿಕ್ಕುವುದರಿಂದ ದೀರ್ಘಕಾಲಿಕ ವಾಗಿ ಕಾಡಿನ ಆರೋಗ್ಯ ಹದಗೆಡುತ್ತದೆ. ಪ್ರಾಣಿಗಳು, ಹಕ್ಕಿಗಳ ಗೂಡು, ಮೊಟ್ಟೆ, ಮರಿಗಳು ವಿಪರೀತ ಶಾಖದಿಂದ ಸತ್ತು ಹೋಗುತ್ತವೆ. ಉಭಯಚರಿಗಳು, ಸರೀಸೃಪಗಳು, ಬಿಲಗಳಲ್ಲಿ ವಾಸಿಸುವ ಸ್ತನಿಗಳಂತಹ ನೆಲವಾಸಿಗಳು ಬಹಳ ತೊಂದರೆ ಅನುಭವಿಸುತ್ತವೆ. ಬೆಂಕಿ ಆರಿದ ನಂತರದಲ್ಲೂ ಅವುಗಳ ಕಷ್ಟ ನೀಗುವುದಿಲ್ಲ.

ಬದುಕುಳಿದ ಪ್ರಾಣಿಗಳು ಆಹಾರ, ನೀರು ಮತ್ತು ಪೌಷ್ಟಿಕಾಂಶದ ಕೊರತೆಯಿಂದ ಬಳಲುತ್ತಾ, ನಿಧಾನವಾಗಿ ಸಾವಿನ ದವಡೆಗೆ ಜಾರುತ್ತವೆ. ಆಕಸ್ಮಿಕವಾಗಿ ಬೆಂಕಿಯಿಂದ ತಪ್ಪಿಸಿಕೊಂಡರೂ ಸೇವಿಸಿದ ಹೊಗೆಯಿಂದಾಗಿ ಅವುಗಳ ಶ್ವಾಸಕೋಶಕ್ಕೆ ತೀವ್ರ ಹಾನಿಯಾಗಿ, ಉಸಿರಾಟಕ್ಕೆ ತೊಂದರೆಯಾಗುತ್ತದೆ. ಬೇಟೆಪ್ರಾಣಿಗಳಿಗೆ ಬಲಿಪ್ರಾಣಿಗಳ ಕೊರತೆಯಾಗುತ್ತದೆ. ಆನೆಯಂತಹ ಪ್ರಾಣಿಗಳು ತಮ್ಮ ನೆಲೆಯನ್ನು ಕಳೆದುಕೊಳ್ಳುತ್ತವೆ. ಇದು ಮಾನವ- ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗುತ್ತದೆ. ಕಾಡಿನ ಬೆಂಕಿಯಿಂದ ಸ್ಥಳೀಯ ಜಲಮೂಲಗಳಿಗೂ ಧಕ್ಕೆಯಾಗಿ, ವನ್ಯಜೀವಿಗಳಿಗೆ ಶುದ್ಧನೀರು ಮರೀಚಿಕೆ-ಆಗುತ್ತದೆ. ನಿರ್ಜಲೀಕರಣದಿಂದ ಸಾವು ಸಂಭವಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಸಾವಯವ ಕಸಕಡ್ಡಿಗಳನ್ನು ವಿಘಟಿಸಿ, ಮಣ್ಣಿಗೆ ಸೇರಿಸುವ ಕಾಯಕಜೀವಿಗಳಾದ ಮಣ್ಣಿನ ಸೂಕ್ಷ್ಮಾಣುಗಳು ಸಂಪೂರ್ಣವಾಗಿ ನಾಶವಾಗುತ್ತವೆ. ಇದರಿಂದ ಮಣ್ಣು ಪೆಡಸಾಗಿ

ಕೇಂದ್ರ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿ-2020 (ಎನ್‌ಇಪಿ) ಅನ್ನು ತಮಿಳುನಾಡಿನಲ್ಲಿ ಜಾರಿ ಮಾಡದೇ ಇರುವುದರಿಂದ ರಾಜ್ಯಕ್ಕೆ ಸಮಗ್ರ ಶಿಕ್ಷಣ ಅಭಿಯಾನ ಅಡಿ ಕೇಂದ್ರದ ಪಾಲಿನ ಅನುದಾನ ಬಿಡುಗಡೆಯಾಗಿಲ್ಲ. ಈ ವಿಚಾರವು ಕೇಂದ್ರ ಮತ್ತು ತಮಿಳುನಾಡಿನ ನಡುವೆ ಆರೋಪ-ಪ್ರತ್ಯಾರೋಪಗಳಿಗೆ ಕಾರಣವಾಗಿದೆ. ಕೇಂದ್ರ ಸರ್ಕಾರವು ಅನುದಾನದ ನೆಪದಲ್ಲಿ ತ್ರಿಭಾಷಾ ಸೂತ್ರ ಸೇರಿದಂತೆ ತನ್ನ ಸಿದ್ಧಾಂತಗಳನ್ನು ರಾಜ್ಯಗಳ ಮೇಲೆ ಹೇರುತ್ತಿದೆ ಎನ್ನುವುದು ತಮಿಳುನಾಡಿನ ವಾದ

ತ್ರಿಭಾಷಾ ಸೂತ್ರ

ಕೇಂದ್ರ V/S ತಮಿಳುನಾಡು

ಧರ್ಮೇಂದ್ರ ಪ್ರಧಾನ್

ಎಂ.ಕೆ.ಸ್ಟಾಲಿನ್

ಪ್ರಜಾವಾಣಿ ವಾರ್ತೆ

ಎನ್‌ಇಪಿ ವಿರುದ್ಧ ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತೀವ್ರ ವಾಗ್ದಾಳಿ ನಡೆಸಿದ್ದಾರೆ. 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ₹10,000 ಕೋಟಿ ಕೊಟ್ಟರೂ ನಾನು ರಾಜ್ಯದಲ್ಲಿ ಎನ್‌ಇಪಿ ಜಾರಿ ಮಾಡುವುದಿಲ್ಲ ಎಂದಿದ್ದಾರೆ. ಎನ್‌ಇಪಿ ಪ್ರತಿಗಾಮಿ ಯೋಜನೆಯಾಗಿದ್ದು ಅದನ್ನು ಜಾರಿ ಮಾಡಿ, ರಾಜ್ಯವನ್ನು ಎರಡು ಸಾವಿರ ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ಯುವಂತಹ ಪಾಪಕೃತ್ಯವನ್ನು ಎಸಗಲಾರೆ' ಎಂದು ಪ್ರತಿಕ್ರಿಯಿಸಿದ್ದಾರೆ. ಎನ್‌ಇಪಿ ಜಾರಿ ಸಂಬಂಧ ಒಪ್ಪಂದಕ್ಕೆ (ಎಂಒಯು) ಸಹಿ ಹಾಕದೇ ಇರುವುದರಿಂದ ಕೇಂದ್ರವು ಸಮಗ್ರ ಶಿಕ್ಷಣ ಅಭಿಯಾನದ (ಎಸ್‌ಎಸ್‌ಎ) ತನ್ನ ಪಾಲನ್ನು ತಮಿಳುನಾಡು, ಕೇರಳ, ಪಂಜಾಬ್, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಿಗೆ ಬಿಡುಗಡೆ ಮಾಡಿಲ್ಲ.

ಸಮಗ್ರ ಶಿಕ್ಷಣ ಅಭಿಯಾನಕ್ಕೂ ಎನ್‌ಇಪಿಯೂ ಸಂಬಂಧವಿಲ್ಲ. ಹಾಗಿದ್ದರೂ, ಅನುದಾನ ನೀಡದೇ ಬೆದರಿಕೆ ತಂತ್ರ ಹೂಡಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಕೇಂದ್ರ ಸರ್ಕಾರ ಒತ್ತಡ ಹೇರುತ್ತಿದೆ ಎಂದು ಆರೋಪಿಸಲಾಗಿದೆ.

ಸರ್ವ ಶಿಕ್ಷ ಅಭಿಯಾನ (ಎಸ್‌ಎಸ್‌ಎ), ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಮತ್ತು ಶಿಕ್ಷಕರ ಶಿಕ್ಷಣ ಯೋಜನೆಗಳನ್ನು ಒಟ್ಟುಗೂಡಿಸಿ 2018ರಲ್ಲಿ ಸಮಗ್ರ ಶಿಕ್ಷಣ ಅಭಿಯಾನವನ್ನು ಜಾರಿಗೊಳಿಸಲಾಗಿತ್ತು. ಈ ಯೋಜನೆಯ ಶೇ 60ರಷ್ಟು ವೆಚ್ಚವನ್ನು ಕೇಂದ್ರ ಭರಿಸಿದರೆ, ಉಳಿದ ಶೇ 40ರಷ್ಟನ್ನು ರಾಜ್ಯಗಳು ಭರಿಸುತ್ತವೆ. ಇದರ ಅಡಿಯಲ್ಲಿ ತಮಿಳುನಾಡಿಗೆ ಕೇಂದ್ರ ಸರ್ಕಾರವು ನೀಡಬೇಕಿದ್ದ ಸುಮಾರು ₹2,500 ಕೋಟಿಯನ್ನು ನೀಡಿಲ್ಲ (2024-25ರ ₹2,151 ಕೋಟಿ ಸೇರಿ) ಎನ್ನುವುದು ಸ್ಟಾಲಿನ್ ದೂರು.

ಅನುದಾನದ ಕೊರತೆಯಿಂದ ಶಾಲೆಗಳಿಗೆ ಮೂಲಸೌಕರ್ಯದ ಕೊರತೆ ಉಂಟಾಗಿ, ಲಕ್ಷಾಂತರ ಮಕ್ಕಳು ಮತ್ತು ಶಿಕ್ಷಕರ ಭವಿಷ್ಯಕ್ಕೆ ಪೆಟ್ಟು ಬೀಳಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ. ಶಿಕ್ಷಕರ ವೇತನ ಪಾವತಿಗೂ ತೊಂದರೆಯಾಗಿದೆ ಎಂದೂ ವರದಿಯಾಗಿದೆ.

ತ್ರಿಭಾಷಾ ಸೂತ್ರ ಜಾರಿಗೆ ಒತ್ತಾಯ

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಎನ್‌ಇಪಿ ಜಾರಿಗೊಳಿಸಬೇಕು ಎಂದು ತಮಿಳುನಾಡು ಸರ್ಕಾರವನ್ನು ಒತ್ತಾಯಿಸಿದ್ದಾರೆ. ತಮಿಳುನಾಡು ಸರ್ಕಾರವು ಪ್ರತ್ಯೇಕತೆಯ ಭಾವದಿಂದ ಕೂಡಿದ್ದು, ಎನ್‌ಇಪಿ ವಿಚಾರದಲ್ಲಿ ರಾಜಕೀಯಪ್ರೇರಿತ ನಿಲುವು ತೆಗೆದುಕೊಂಡಿದೆ ಎಂದು ಅವರು ಸ್ಟಾಲಿನ್ ಸರ್ಕಾರವನ್ನು ಟೀಕಿಸಿದ್ದಾರೆ. ಸಂವಿಧಾನದ ನಿಯಮಗಳಿಗೆ ಬದ್ಧರಾಗಿರಬೇಕು ಎಂದೂ ಹೇಳಿದ್ದಾರೆ.

ಎನ್‌ಇಪಿ-2020ಯು ತ್ರಿಭಾಷಾ ನೀತಿ ಸೂತ್ರವನ್ನು ಜಾರಿಗೊಳಿಸಬೇಕು ಎಂದು ಪ್ರತಿಪಾದಿಸುತ್ತದೆ. ತಮಿಳುನಾಡು ಎನ್‌ಇಪಿಯನ್ನು ವಿರೋಧಿಸಲು ಇದುವೇ ಮುಖ್ಯ ಕಾರಣ. ಆರಂಭದಿಂದಲೂ ತ್ರಿಭಾಷಾ ಸೂತ್ರವನ್ನು ಬಲವಾಗಿ ವಿರೋಧಿಸಿಕೊಂಡೇ ಬಂದಿರುವ ತಮಿಳುನಾಡು, 1968ರಿಂದಲೂ ದ್ವಿಭಾಷಾ ಸೂತ್ರವನ್ನು ಅಳವಡಿಸಿಕೊಂಡಿದೆ. ಆಡಳಿತಾರೂಢ ಡಿಎಂಕೆ ಕೂಡ ಮೊದಲಿನಿಂದಲೂ ತ್ರಿಭಾಷಾ ಸೂತ್ರದ ವಿರೋಧಿ ನಿಲುವು ಹೊಂದಿದೆ. 'ಸಂವಿಧಾನದ ಯಾವ ಭಾಗದಲ್ಲಿ ತ್ರಿಭಾಷಾ ಸೂತ್ರವನ್ನು ಕಡ್ಡಾಯಗೊಳಿಸಲಾಗಿದೆ ಎನ್ನುವುದನ್ನು ತಿಳಿಸಿ' ಎಂದು ಸ್ಟಾಲಿನ್ ಅವರು ಧರ್ಮೇಂದ್ರ ಪ್ರಧಾನ್ ಅವರಿಗೆ ಮರುಪ್ರಶ್ನೆ ಹಾಕಿದ್ದಾರೆ.

ಕೇಂದ್ರದ ಮತ್ತೊಂದು ಮಹತ್ವಾಕಾಂಕ್ಷಿ ಯೋಜನೆ, ಎನ್‌ಇಪಿ ಅಡಿಯಲ್ಲಿ ಬರುವ 'ಪಿಎಂ ಶ್ರೀ'ಯನ್ನೂ ವಿರೋಧಿಸಿರುವ ತಮಿಳುನಾಡು, ಸಮಗ್ರ ಶಿಕ್ಷಣ ಅಭಿಯಾನ ಮತ್ತು 'ಪಿಎಂ ಶ್ರೀ' ಯೋಜನೆಗಳ ಅನುದಾನ ಬಿಡುಗಡೆಗೆ ಸ್ಪಷ್ಟ ಮಾರ್ಗಸೂಚಿ ರೂಪಿಸಬೇಕು ಎಂದು ಒತ್ತಾಯಿಸಿದೆ.

ಮಗು ತನ್ನ ಶಿಕ್ಷಣದ ಆರಂಭಿಕ ಹಂತದಲ್ಲಿಯೇ ಹೆಚ್ಚು ಭಾಷೆಗಳನ್ನು ಕಲಿಯಲು ಎನ್‌ಇಪಿಯು ಉತ್ತೇಜಿಸುತ್ತದೆ. ಇದರಿಂದಾಗಿಯೇ ಎನ್‌ಇಪಿ ಅಳವಡಿಸಿಕೊಂಡ ರಾಜ್ಯಗಳು ತ್ರಿಭಾಷಾ ಸೂತ್ರ ಪಾಲಿಸಬೇಕು ಎಂಬ ನಿಯಮವನ್ನು ಕೇಂದ್ರ ರೂಪಿಸಿದೆ. ಮಗುವಿನ ಮಾತೃಭಾಷೆ, ಇಂಗ್ಲಿಷ್ ಜತೆಗೆ ಯಾವುದಾದರೊಂದು (ಪೋಷಕರ ಆಯ್ಕೆಯ) ಸ್ಥಳೀಯ ಭಾಷೆ ಆಯ್ಕೆ ಮಾಡಿಕೊಳ್ಳಬಹುದು ಎನ್ನುವುದು ಕೇಂದ್ರದ ವಾದ. ಆದರೆ, ಮೂರನೇ ಭಾಷೆಯ ನೆಪದಲ್ಲಿ ಕೇಂದ್ರವು ಹಿಂದಿ ಹೇರಿಕೆಗೆ ಮುಂದಾಗಿದೆ ಎನ್ನುವುದು ಎನ್‌ಇಪಿ ವಿರೋಧಿಸುತ್ತಿರುವ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ರಾಜ್ಯಗಳ ವಾದ.

ಸಿದ್ಧಾಂತ ಹೇರಿಕೆ: 'ಪಿಎಂ ಶ್ರೀ' ವ್ಯವಸ್ಥೆಯ ಅಡಿ ಮಗುವನ್ನು ಮೂರನೇ ವಯಸ್ಸಿಗೆ ಶಾಲೆಗೆ ಸೇರಿಸಬೇಕು. ತಮಿಳುನಾಡಿನಲ್ಲಿ ಸದ್ಯ ಇದಕ್ಕಿಂತ ಭಿನ್ನ ಶಿಕ್ಷಣ ಪದ್ಧತಿ ಅನುಸರಿಸಲಾಗುತ್ತಿದೆ. ತಮಿಳುನಾಡು ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಪ್ರಗತಿ ಸಾಧಿಸಿದೆ ಎನ್ನುವುದು ರಾಜ್ಯದ ವಾದ. 2030ರ ಹೊತ್ತಿಗೆ ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಅನುಪಾತವು (ಜಿಇಆರ್) ಶೇ 50ರಷ್ಟು ಇರಬೇಕು ಎನ್ನುವುದು ಎನ್‌ಇಪಿಯ ಒಂದು ಗುರಿ. ಆದರೆ, ತಮಿಳುನಾಡಿನಲ್ಲಿ ಸದ್ಯ ಜಿಇಆರ್ ಶೇ 51ರಷ್ಟು ಇದೆ. ಹೆಣ್ಣುಮಕ್ಕಳ ಶಿಕ್ಷಣ ಉತ್ತೇಜಿಸುವುದು ಸೇರಿದಂತೆ ಹಲವು ವಿಚಾರಗಳಲ್ಲಿ ಎನ್‌ಇಪಿ ಅಡಿ ನಿಗದಿಪಡಿಸಿರುವ ಗುರಿಗಳನ್ನು ದಾಟಿ ಮುಂದೆ ಸಾಗಿದ್ದೇವೆ ಎನ್ನುವುದು ತಮಿಳುನಾಡಿನ ವಾದ. ಎನ್‌ಇಪಿಯಲ್ಲಿ ಮೂರು, ಐದು ಮತ್ತು ಎಂಟನೇ ತರಗತಿಗಳಿಗೆ ಪಬ್ಲಿಕ್ ಪರೀಕ್ಷೆ ನಡೆಸಬೇಕಾಗುತ್ತದೆ. ಹಾಗೆ ಮಾಡುವುದರಿಂದ ಅನೇಕ ಮಕ್ಕಳು ಪ್ರಾಥಮಿಕ ಹಂತದಲ್ಲಿಯೇ ಶಿಕ್ಷಣದಿಂದ ಹೊರಗುಳಿಯುವಂತಾಗುತ್ತದೆ ಎಂದು ತಮಿಳುನಾಡು ಹೇಳುತ್ತಿದೆ.

ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ದೆಹಲಿ, ಪಂಜಾಬ್ ರಾಜ್ಯಗಳು ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ಲಿಂಗ ಅಸಮಾನತೆ ಮತ್ತು ಸಾಮಾಜಿಕ ನ್ಯಾಯಕ್ಕೆ ತಕ್ಕಂತೆ ಹಲವು ಯೋಜನೆಗಳನ್ನು ಕಾರ್ಯಗತಗೊಳಿಸಿವೆ. ಹೀಗಿದ್ದರೂ ಕೇಂದ್ರ ಸರ್ಕಾರವು ಅನುದಾನದ ಹೆಸರಿನಲ್ಲಿ ರಾಜ್ಯಗಳ ಮೇಲೆ ತನ್ನ ಸಿದ್ಧಾಂತವನ್ನು ಹೇರುತ್ತಿದೆ ಎನ್ನುವುದು ತಮಿಳುನಾಡು ಆರೋಪ.

ಕೇಂದ್ರದ ಪಾಲಿನ ಅನುದಾನ ಬಾರದೇ ಈ ರಾಜ್ಯಗಳು ತೀವ್ರ ಸಮಸ್ಯೆ ಎದುರಿಸುತ್ತಿವೆ. ಕಳೆದ ವರ್ಷವೂ ಹಲವು ರಾಜ್ಯಗಳಲ್ಲಿ ಇಂಥದ್ದೇ ಸ್ಥಿತಿ ಉದ್ಭವಿಸಿತ್ತು. ಕೇಂದ್ರ ಸರ್ಕಾರವು ತಮಿಳುನಾಡು, ಕೇರಳ, ದೆಹಲಿ, ಪಶ್ಚಿಮ ಬಂಗಾಳ ಮತ್ತು ಪಂಜಾಬ್ ರಾಜ್ಯಗಳಿಗೆ ಎಸ್‌ಎಸ್‌ಎ ಅನುದಾನವನ್ನು ತಡೆಹಿಡಿದಿತ್ತು. ಇದರಿಂದ ಶಾಲಾ ವಿದ್ಯಾರ್ಥಿಗಳಿಗೆ ಸೌಲಭ್ಯ ಕಲ್ಪಿಸಲು ಮತ್ತು ಶಿಕ್ಷಕರಿಗೆ ಸಂಬಳ ನೀಡಲು ಹಣವಿಲ್ಲದೇ ರಾಜ್ಯಗಳು ಸಮಸ್ಯೆ ಎದುರಿಸಿದ್ದವು.

ಆಧಾರ: ಪಿಟಿಐ, ಪಿಎಂ ಶ್ರೀ ಡ್ಯಾಶ್ ಬೋರ್ಡ್, ಕೇಂದ್ರ ಶಿಕ್ಷಣ ಸಚಿವಾಲಯದ ವೆಬ್‌ಸೈಟ್, ಸಂಸತ್ತಿನಲ್ಲಿ ಶಿಕ್ಷಣ ಸಚಿವರ ಉತ್ತರಗಳು, ತಮಿಳುನಾಡು ಶಿಕ್ಷಣ ಇಲಾಖೆ ವೆಬ್‌ಸೈಟ್

37,636 ತಮಿಳುನಾಡಿನಲ್ಲಿರುವ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು

54 ಲಕ್ಷ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಮಕ್ಕಳು

ಸಮಗ್ರ ಶಿಕ್ಷಣ ಅಭಿಯಾನ: ತಮಿಳುನಾಡಿಗೆ ಕೇಂದ್ರದಿಂದ ದೊರೆತ ಅನುದಾನ (ಕೋಟಿ ₹ಗಳಲ್ಲಿ)



ಕೇರಳ, ಪಶ್ಚಿಮ ಬಂಗಾಳಕ್ಕೂ ಇಲ್ಲ ಅನುದಾನ

ತಮಿಳುನಾಡು ಮಾದರಿಯಲ್ಲೇ ಎನ್‌ಇಪಿಯನ್ನು ವಿರೋಧಿಸುತ್ತಿರುವ ಕೇರಳ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೂ ಕೇಂದ್ರ ಸರ್ಕಾರವು ಸಮಗ್ರ ಶಿಕ್ಷಣ ಅಭಿಯಾನ ಯೋಜನೆಯ ಪಾಲನ್ನು ಸಂಪೂರ್ಣವಾಗಿ ಬಿಡುಗಡೆ ಮಾಡಿಲ್ಲ.

ಹಿಂದೆಯೂ ವಿರೋಧ

ತಮಿಳುನಾಡು ಸರ್ಕಾರವು ಭಾಷೆ, ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳನ್ನು ಮೊದಲಿನಿಂದಲೂ ಅನುಮಾನದಿಂದಲೇ ನೋಡುತ್ತಾ ಬಂದಿದೆ. ಕೇಂದ್ರ ಸರ್ಕಾರವು ಜವಾಹರ್ ನವೋದಯ ವಿದ್ಯಾಲಯಗಳನ್ನು ಆರಂಭಿಸಿದಾಗಲೂ ಅದನ್ನು ವಿರೋಧಿಸಿತ್ತು. ತಮಿಳುನಾಡಿನಲ್ಲಿ ನವೋದಯ ಶಾಲೆಗಳಿಲ್ಲ ಎಂದು ಹೇಳುತ್ತದೆ ಕೇಂದ್ರ ಸರ್ಕಾರದ ಮಾಹಿತಿ. ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಟ್ಟ ಶಾಲೆಗಳ ಪೈಕಿ ಕೇಂದ್ರೀಯ ವಿದ್ಯಾಲಯಗಳು ಮಾತ್ರ ಅಲ್ಲಿವೆ. ಈ ಸಂಸ್ಥೆಗಳು 34 ಇವೆ.

ರಾಜ್ಯದಿಂದಲೂ ಎನ್‌ಇಪಿಗೆ ಆಕ್ಷೇಪ

ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರ ಕೂಡ ಹೊಸ ಶಿಕ್ಷಣ ನೀತಿಯನ್ನು ವಿರೋಧಿಸಿದೆ. ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರ ಎನ್‌ಇಪಿಯನ್ನು ಜಾರಿಗೊಳಿಸಿತ್ತು. 2023ರಲ್ಲಿ ಅಸ್ತಿತ್ವಕ್ಕೆ ಬಂದಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯಕ್ಕಾಗಿ ಪ್ರತ್ಯೇಕ ಶಿಕ್ಷಣ ನೀತಿಯನ್ನು ಜಾರಿಗೊಳಿಸುವುದಾಗಿ ಘೋಷಿಸಿದೆಯಲ್ಲದೆ, ರಾಜ್ಯ ಶಿಕ್ಷಣ ನೀತಿಯ ಕರಡು ರೂಪಿಸಲು ಶಿಕ್ಷಣ ತಜ್ಞ ಹಾಗೂ ಯುಜಿಸಿ ಮಾಜಿ ಅಧ್ಯಕ್ಷ ಪ್ರೊ.ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ 'ರಾಜ್ಯ ಶಿಕ್ಷಣ ನೀತಿ ಆಯೋಗ'ವನ್ನೂ ರಚಿಸಿದೆ. ನಾಲ್ಕು ವರ್ಷಗಳ ಪದವಿ ಕೋರ್ಸ್ ಬದಲಿಗೆ ಮೊದಲಿದ್ದಂತೆ ಮೂರು ವರ್ಷಗಳ ಕೋರ್ಸ್ ಮುಂದುವರಿಸುವಂತೆ ತನ್ನ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿದೆ. ಸರ್ಕಾರ ಅದನ್ನು 2024-25ನೇ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಿದೆ. ಅಂತಿಮ ವರದಿ ಇನ್ನಷ್ಟೇ ಸಲ್ಲಿಸಬೇಕಿದೆ.

ಏನಿದು ಪಿಎಂ ಶ್ರೀ?

ಕೇಂದ್ರೀಯ ವಿದ್ಯಾಲಯ, ಜವಾಹರ್ ನವೋದಯ ವಿದ್ಯಾಲಯಗಳು ಸೇರಿದಂತೆ ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ/ಕೇಂದ್ರಾಡಳಿತ ಪ್ರದೇಶಗಳು/ ಸ್ಥಳೀಯ ಆಡಳಿತಗಳು ನಿರ್ವಹಿಸುವ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಆರಂಭಿಸಿರುವ ಯೋಜನೆ ಪಿಎಂ ಶ್ರೀ. ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಇಂತಹ 14,500ಕ್ಕೂ ಹೆಚ್ಚು ಶಾಲೆಗಳನ್ನು ಅಭಿವೃದ್ಧಿಪಡಿಸುವ ಗುರಿ ಕೇಂದ್ರದ್ದು. ಈ ಶಾಲೆಗಳಲ್ಲಿ ಮಕ್ಕಳ ಸಮಗ್ರ ಪ್ರಗತಿ, ಸೃಜನಶೀಲ ಕಲಿಕೆಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಕಲ್ಪಿಸುವ ಭರವಸೆಯನ್ನು ಈ ಯೋಜನೆ ನೀಡುತ್ತದೆ.

ದೇಶದಲ್ಲಿ

11,920 ಯೋಜನೆಯಡಿ ಆಯ್ಕೆ ಮಾಡಲಾಗಿರುವ ಒಟ್ಟು ಶಾಲೆಗಳು

884 ಕೇಂದ್ರೀಯ ವಿದ್ಯಾಲಯಗಳು

620 ಜವಾಹರ್ ನವೋದಯ ವಿದ್ಯಾಲಯಗಳು

ಕರ್ನಾಟಕದಲ್ಲಿ 'ಪಿಎಂ ಶ್ರೀ'

624 ಯೋಜನೆಯಡಿ ಆಯ್ಕೆಯಾದ ಒಟ್ಟು ಶಾಲೆಗಳು

12 ಪ್ರಾಥಮಿಕ ಶಾಲೆಗಳು

421 ಹಿರಿಯ ಪ್ರಾಥಮಿಕ ಶಾಲೆಗಳು

119 ಪ್ರೌಢಶಾಲೆಗಳು

3 ಹೈಯರ್ ಸೆಕೆಂಡರಿ ಸ್ಕೂಲ್‌ಗಳು (11 ಮತ್ತು 12ನೇ ತರಗತಿ)

38 ಕೇಂದ್ರೀಯ ವಿದ್ಯಾಲಯಗಳು

30 ನವೋದಯ ವಿದ್ಯಾಲಯಗಳು

1 ಎಸ್‌ಸಿಇಆರ್‌ಟಿ ಶಾಲೆ

ಮತ್ತೊಂದು ಸಿನಿಮಾದಲ್ಲಿ ಚಿಕ್ಕಣ್ಣ

ಚಿಕ್ಕಣ್ಣ

ಕಳೆದ ವರ್ಷ ಚಿಕ್ಕಣ್ಣ ನಟನೆಯ 'ಉಪಾಧ್ಯಕ್ಷ' ಹಿಟ್ ಚಿತ್ರಗಳ ಸಾಲಿಗೆ ಸೇರಿತ್ತು. ಅದಾದ ಬಳಿಕ ಅವರಿಗೆ ನಾಯಕ ನಟನಾಗಿ ಹೆಚ್ಚು ಅವಕಾಶಗಳು ಬರುತ್ತಿವೆ. ಸದ್ಯ ಲಕ್ಷ್ಮಿಪುತ್ರದಲ್ಲಿ ತೊಡಗಿಸಿಕೊಂಡಿದ್ದು, ನಾಯಕನಾಗಿ ಮತ್ತೊಂದು ಸಿನಿಮಾ ಒಪ್ಪಿಕೊಂಡಿದ್ದಾರೆ.

ಈ ಹಿಂದೆ ವಿನೋದ್ ಪ್ರಭಾಕರ್ ನಟನೆಯ 'ಫೈಟರ್' ಚಿತ್ರವನ್ನು ನಿರ್ಮಿಸಿದ್ದ ಸೋಮಶೇಖರ್ ಕಟ್ಟಿಗೇನಹಳ್ಳಿ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ.

'ಇದೊಂದು ವಿಭಿನ್ನ ಕಥಾಹಂದರ ಹೊಂದಿರುವ ಚಿತ್ರ. ಚಿಕ್ಕಣ್ಣಗೆ ಸೂಕ್ತವಾಗುವ ಹಾಸ್ಯಮಯ ಕಥೆಯನ್ನು ಹೊಂದಿದೆ. ಆಕಾಶ್ ಎಂಟರ್‌ಪ್ರೈಸಸ್ ಬ್ಯಾನರ್ ಅಡಿಯಲ್ಲಿ ದೊಡ್ಡ ಬಜೆಟ್‌ನಲ್ಲಿ ಸಿನಿಮಾ ನಿರ್ಮಾಣವಾಗಲಿದೆ. ಸದ್ಯ ಸ್ಕ್ರಿಪ್ಟ್ ಕೆಲಸ ಪೂರ್ಣಗೊಂಡಿದ್ದು, ಶೀಘ್ರದಲ್ಲಿ ಸಿನಿಮಾ ಸೆಟ್ಟೇರಲಿದೆ. ಉಳಿದ ತಾರಾಗಣ ಹಾಗೂ ತಾಂತ್ರಿಕ ಬಳಗದ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ಹಂಚಿಕೊಳ್ಳುತ್ತೇವೆ' ಎಂದಿದ್ದಾರೆ ನಿರ್ಮಾಪಕರು.

ಹೊಸಬರ 'ಕಿರಿಕ್'

ಬಹುತೇಕ ಹೊಸಬರಿಂದಲೇ ಕೂಡಿರುವ 'ಕಿರಿಕ್' ಚಿತ್ರದ ಟ್ರೇಲರ್, ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ನಾಗತಿಹಳ್ಳಿ ಗಂಗಾಧರಗೌಡ ನಿರ್ದೇಶನದ ಚಿತ್ರ ಪ್ರೇಮಕಥೆಯನ್ನು ಹೊಂದಿದೆ.

'ಗ್ಯಾರೇಜಿನಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುವ ನಾಯಕ ಸದಾ ಕಿರಿಕ್ ಮಾಡುವ ಇಬ್ಬರು ನಾಯಕಿಯರ ನಡುವೆ ಸಿಲುಕಿಕೊಳ್ಳುತ್ತಾನೆ. ಆಗ ಚೇಷ್ಟೆಗಳಿಂದ ಹುಟ್ಟಿದ ನಾಯಕ ಮತ್ತು ನಾಯಕಿ ನಡುವಿನ ಪ್ರೀತಿಯಾವ ಹಂತ ತಲುಪುತ್ತದೆ ಎಂಬುದೇ ಚಿತ್ರಕಥೆ. ಎಲ್ಲ ಕೆಲಸಗಳನ್ನು ಮುಗಿಸಿ ಚಿತ್ರ ಬಿಡುಗಡೆಗೆ ಸಿದ್ಧವಿದೆ' ಎಂದರು ನಿರ್ದೇಶಕರು.



ರವಿ ಶೆಟ್ಟಿ, ಪೂಜಾ ರಾಮಚಂದ್ರ ಪ್ರಮುಖ ಪಾತ್ರಗಳಲ್ಲಿದ್ದಾರೆ. ಈ ಚಿತ್ರವನ್ನು ನಾಗರಾಜ್ ಎಸ್. ನಿರ್ಮಿಸಿದ್ದಾರೆ. 'ಆರಂಭದಿಂದಲೂ ಈ ಚಿತ್ರತಂಡದ ಕೆಲಸವನ್ನು ನೋಡುತ್ತ ಬಂದಿದ್ದೇನೆ. ಒಂದಲ್ಲ ಒಂದು ಕಿರಿಕ್ ಎದುರಿಸುತ್ತಲೇ ಬಂದ ಈ ಚಿತ್ರ ಅಂತಿಮವಾಗಿ ಬಿಡುಗಡೆ ಹಂತ ತಲುಪಿದೆ' ಎಂದರು ಗೀತಸಾಹಿತಿ ನಾಗೇಂದ್ರ ಪ್ರಸಾದ್.

ಆರ್.ಬಿ. ಭರತ್ ಸಂಗೀತ ಸಂಯೋಜನೆ, ಎಸ್.ಕೀರ್ತಿವರ್ಧನ್ ಛಾಯಾಚಿತ್ರಗ್ರಹಣ, ಭಾರ್ಗವ್ ಕೆ.ಎಂ. ಸಂಕಲನ ಚಿತ್ರಕ್ಕಿದೆ. ಬಲ ರಾಜವಾಡಿ, ಹೊನ್ನವಳ್ಳಿ ಕೃಷ್ಣ, ಕುರಿ ರಂಗ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಪೂಜಾ ರಾಮಚಂದ್ರ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ದ

ಬಡ್ಡಿದರ ಇಳಿಸಿದ ಬಿಒಎಂ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರವು (ಬಿಒಎಂ) ಸಾಲದ ಮೇಲಿನ ಬಡ್ಡಿದರದಲ್ಲಿ ಶೇ 0.25ರಷ್ಟು ಕಡಿತಗೊಳಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ಕಡಿತಗೊಳಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಂಡಿದೆ.

ಸದ್ಯ ಗೃಹ ಸಾಲದ ಮೇಲಿನ ಬಡ್ಡಿದರವನ್ನು ಶೇ 8.10ಕ್ಕೆ ಪರಿಷ್ಕರಿಸಲಾಗಿದೆ. ಇದು ಇಡೀ ಬ್ಯಾಂಕಿಂಗ್ ವಲಯದಲ್ಲಿಯೇ ಅತಿ ಕಡಿಮೆ ಬಡ್ಡಿದರವಾಗಿದೆ ಎಂದು ಬ್ಯಾಂಕ್, ಭಾನುವಾರ ತಿಳಿಸಿದೆ.

ಕಾರು ಸಾಲದ ಮೇಲಿನ ವಾರ್ಷಿಕ ಬಡ್ಡಿದರವನ್ನು ಶೇ 8.45ಕ್ಕೆ ಪರಿಷ್ಕರಿಸಲಾಗಿದೆ. ರೆಪೊ ಆಧರಿತ ಶಿಕ್ಷಣ ಹಾಗೂ ಇತರೆ ಸಾಲದ ಬಡ್ಡಿದರವನ್ನು (ಆರ್‌ಎಲ್‌ಎಲ್‌ಆರ್) ಇಳಿಸಲಾಗಿದೆ ಎಂದು ಹೇಳಿದೆ. ಈಗಾಗಲೇ, ಗೃಹ ಹಾಗೂ ಕಾರು ಸಾಲದ ಮೇಲಿನ ಸಂಸ್ಕರಣಾ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ. ಈಗ ಬಡ್ಡಿದರವೂ ಇಳಿಕೆಯಾಗಿದೆ. ಇದರಿಂದ ಗ್ರಾಹಕರಿಗೆ ಹೆಚ್ಚಿನ ಅನುಕೂಲ ದೊರೆಯಲಿದೆ ಎಂದು ಹೇಳಿದೆ. ಗುಜರಾತ್‌ನ ಗಿಫ್ಟ್ ಸಿಟಿಯಲ್ಲಿರುವ ಅಂತರರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರದಲ್ಲಿ (ಐಎಫ್‌ಎಸ್‌ಸಿ) ತನ್ನ ಮೊದಲ ಅಂತರರಾಷ್ಟ್ರೀಯ ಶಾಖೆ ತೆರೆಯಲು ಬ್ಯಾಂಕ್ ಆಫ್ ಮಹಾರಾಷ್ಟ್ರಕ್ಕೆ ಆರ್‌ಬಿಐ ಅನುಮೋದನೆ ನೀಡಿದೆ.

ರೂಬಿ ರೋಮನ್ ದ್ರಾಕ್ಷಿ ಬೆಲೆ ಕೆ.ಜಿಗೆ ₹8 ಲಕ್ಷ

ದುಬಾರಿ ದ್ರಾಕ್ಷಿ ಆಕರ್ಷಣೆ

ಪ್ರಜಾವಾಣಿ ವಾರ್ತೆ

ರೂಬಿ ರೋಮನ್ ದ್ರಾಕ್ಷಿ ಹಣ್ಣು

ಕೊಪ್ಪಳ: ಜಿಲ್ಲಾ ತೋಟಗಾರಿಕಾ ಇಲಾಖೆಯು ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಇಲ್ಲಿನ ತನ್ನ ಕಚೇರಿ ಆವರಣದಲ್ಲಿ ಹಮ್ಮಿಕೊಂಡಿರುವ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಜಗತ್ತಿನ ದುಬಾರಿ ಬೆಲೆಯ ದ್ರಾಕ್ಷಿ ತಳಿಗಳಲ್ಲಿ ಒಂದಾದ 'ರೂಬಿ ರೋಮನ್' ಅನ್ನು ಪ್ರದರ್ಶನಕ್ಕಿಟ್ಟಿದೆ. ಈ ದ್ರಾಕ್ಷಿ ಹಣ್ಣು ಜನರ ಗಮನ ಸೆಳೆಯುತ್ತಿದೆ.

ಜಪಾನ್ ಮೂಲದ ರೂಬಿ ರೋಮನ್ ಬೆಲೆ ಒಂದು ಕೆ.ಜಿ.ಗೆ ₹8 ಲಕ್ಷ ಆಗಿದೆ. ಮೇಳದಲ್ಲಿ ಜಿಲ್ಲೆಯ ರೈತರು ತಾವು ಬೆಳೆದ ದ್ರಾಕ್ಷಿ, ಕಲ್ಲಂಗಡಿ, ಪೇರಲ, ದಾಳಿಂಬೆ, ಕರಬೂಜ, ಪಪ್ಪಾಯ, ಅಂಜೂರ, ಬಾಳೆ, ಸಪೋಟ ಹೀಗೆ ಹಲವು ಬಗೆಯ ಹಣ್ಣುಗಳನ್ನು ಪ್ರದರ್ಶಿಸಿದ್ದಾರೆ. ದುಬಾರಿ ಬೆಲೆಯ ಹಣ್ಣು ಎನ್ನುವ ಕಾರಣಕ್ಕೆ ರೂಬಿ ರೋಮನ್ ಪ್ರದರ್ಶನಕ್ಕೆ ಭೇಟಿ ನೀಡುವವರ ಪ್ರಮುಖ ಆಕರ್ಷಣೆಯಾಗಿದೆ.

'ರೂಬಿ ತಳಿ ಸಾಮಾನ್ಯ ದ್ರಾಕ್ಷಿಗಿಂತ ಶೇ 18ರಷ್ಟು ಹೆಚ್ಚು ಸಕ್ಕರೆಯ ಅಂಶ ಒಳಗೊಂಡಿದ್ದು, ರೋಗ ನಿರೋಧಕ ಶಕ್ತಿ ಹೆಚ್ಚಿದೆ. ವಿಟಮಿನ್ ಸಿ ಅಂಶವೂ ಈ ಹಣ್ಣಿನಲ್ಲಿದೆ. ಜಪಾನ್‌ನಲ್ಲಿ ಬೆಳೆಯುವ ವಿಶಿಷ್ಟ ತಳಿ ಇದಾಗಿದ್ದು, ಕೆಂಪು ಬಣ್ಣದಿಂದ ಕೂಡಿದೆ. ಇದರ ಗಾತ್ರ, ಬಣ್ಣ ಮತ್ತು ಇತರೆ ಅಂಶಗಳ ಕಾರಣಕ್ಕಾಗಿ ದುಬಾರಿಯಾಗಿದೆ. ರಸಭರಿತವಾಗಿದ್ದು, ಹೆಚ್ಚು ರುಚಿಯಿಂದ ಕೂಡಿದೆ' ಎನ್ನುತ್ತಾರೆ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು.

ಕಳೆದ ವರ್ಷ ನಡೆದ ಮೇಳದಲ್ಲಿ ಅಧಿಕ ಬೆಲೆ ಬಾಳುವ ಮೀಯಾ ಜಾಕಿ ಮಾವು ಪ್ರದರ್ಶನಕ್ಕೆ ಇರಿಸಲಾಗಿತ್ತು. ಈಗ ಈ ತಳಿಯನ್ನು ಜಿಲ್ಲೆಯಲ್ಲಿಯೇ ಬೆಳೆಯಲಾಗುತ್ತಿದೆ.

'ರೂಬಿ ರೋಮನ್ ದ್ರಾಕ್ಷಿ ಹಣ್ಣನ್ನು ಜಪಾನಿನ ಇಶಿಕಾವಾದಲ್ಲಿ ಮಾತ್ರ ಬೆಳೆಯಲಾಗುತ್ತದೆ. ಮುಂಬೈನ ವ್ಯಾಪಾರಿಯೊಬ್ಬರ ಮೂಲಕ 250 ಗ್ರಾಂ ಮಾತ್ರ ತರಿಸಲಾಗಿದೆ. ಒಂದು ಗೊಂಚಲಿನಲ್ಲಿ 20ರಿಂದ ಗರಿಷ್ಠ 26 ದ್ರಾಕ್ಷಿಗಳು ಇರುತ್ತವೆ. ಮುಂಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ಇದೇ ತಳಿ ಬೆಳೆಯಲು ರೈತರಿಗೆ ಪ್ರೋತ್ಸಾಹಿಸಲಾಗುವುದು' ಎಂದು ತೋಟಗಾರಿಕಾ ಇಲಾಖೆಯ ಉಪ ನಿರ್ದೇಶಕ ಕೃಷ್ಣ ಉಕ್ಕುಂದ ತಿಳಿಸಿದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹452-678
ದ್ವಿತಳಿ (ಬಿ.ಎ)	₹163-825

ತೆರಿಗೆ ಉಳಿತಾಯಕ್ಕೆ 5 ಸೂತ್ರ

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

2024-25ನೇ ಆರ್ಥಿಕ ವರ್ಷವು ಮಾರ್ಚ್ 31ಕ್ಕೆ ಕೊನೆಗೊಳ್ಳುತ್ತದೆ. ಹಳೆಯ ತೆರಿಗೆ ಪದ್ಧತಿ ಅಡಿ ಆದಾಯ ತೆರಿಗೆಯ ಅನುಕೂಲ ಪಡೆದುಕೊಳ್ಳಬೇಕಾದರೆ ನೀವು ಈಗಲೇ ಅದಕ್ಕೆ ಯೋಜನೆ ಹಾಕಿಕೊಳ್ಳಬೇಕು. ಅಸಲಿಗೆ ಆರ್ಥಿಕ ವರ್ಷದ ಆರಂಭದಲ್ಲೇ ತೆರಿಗೆ ಉಳಿತಾಯಕ್ಕೆ ತಯಾರಿ ಮಾಡಿಕೊಳ್ಳುವುದು ಸರಿಯಾದ ಕ್ರಮ.

ಆದರೆ, ತೆರಿಗೆ ನಿಯಮಗಳ ಬಗ್ಗೆ ಸರಿಯಾದ ಅರಿವಿಲ್ಲದ ಅನೇಕರು ಕೊನೆಯ ತನಕ ತೆರಿಗೆ ಉಳಿತಾಯಕ್ಕೆ ನೆರವಾಗುವ ಹೂಡಿಕೆ ಆಯ್ಕೆಗಳ ಬಗ್ಗೆ ತಿಳಿದುಕೊಳ್ಳಲು ಮುಂದಾಗುವುದಿಲ್ಲ. ಈ ಲೇಖನದಲ್ಲಿ ಕೊನೆಯ ಹಂತದಲ್ಲೂ ಹೂಡಿಕೆ ಮಾಡಿ, ತೆರಿಗೆ ಉಳಿತಾಯದ ಅನುಕೂಲ ಪಡೆದುಕೊಳ್ಳ ಬಹುದಾದ ಹಲವು ಆಯ್ಕೆಗಳ ಬಗ್ಗೆ ತಿಳಿಯೋಣ.

- **ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್):** ರಾಷ್ಟ್ರೀಯ ಪಿಂಚಣಿ ಯೋಜನೆಯಡಿ ಹೂಡಿಕೆ ಮಾಡಿದರೆ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿ ₹1.5 ಲಕ್ಷದ ವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಅಲ್ಲದೆ, ಸೆಕ್ಷನ್ 80ಸಿಸಿಡಿ 1ಬಿ ಅಡಿ ಹೆಚ್ಚುವರಿಯಾಗಿ ₹50 ಸಾವಿರ ಹೂಡಿಕೆ ಮಾಡಿದರೆ ಅದಕ್ಕೂ ವಿನಾಯಿತಿ ಲಭಿಸುತ್ತದೆ. ಒಟ್ಟಾರೆಯಾಗಿ ಹಳೆಯ ತೆರಿಗೆ ಪದ್ಧತಿ ಅಡಿ ಎನ್‌ಪಿಎಸ್ ಹೂಡಿಕೆಯಿಂದ ₹2 ಲಕ್ಷದ ವರೆಗೆ ತೆರಿಗೆ ಅನುಕೂಲ ಪಡೆಯಲು ಸಾಧ್ಯವಿದೆ.
- **ಇಎಲ್‌ಎಸ್‌ಎಸ್ ಟ್ಯಾಕ್ಸ್ ಸೇವಿಂಗ್ ಮ್ಯೂಚುವಲ್ ಫಂಡ್:** ಆದಾಯ ತೆರಿಗೆ ಸೆಕ್ಷನ್ 80ಸಿ ಅಡಿ ತೆರಿಗೆ ಉಳಿಸಲು ಹೆಚ್ಚು ಜನರು ಬಳಸುವ ಜನಪ್ರಿಯ ಆಯ್ಕೆ ಇಎಲ್‌ಎಸ್‌ಎಸ್ ಟ್ಯಾಕ್ಸ್ ಸೇವಿಂಗ್ ಮ್ಯೂಚುವಲ್ ಫಂಡ್ ಆಗಿದೆ. ಇಎಲ್‌ಎಸ್‌ಎಸ್ ಅಂದರೆ ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಂ ಎಂದರ್ಥ. ಈ ಫಂಡ್‌ನಲ್ಲಿ ಹೂಡಿಕೆ ಮಾಡುವ ದುಡ್ಡನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಲಾಗುತ್ತದೆ. ಆದರೆ, ಇಎಲ್‌ಎಸ್‌ಎಸ್ ಫಂಡ್‌ಗಳಲ್ಲಿನ ಹೂಡಿಕೆಗೆ ಮೂರು ವರ್ಷದ ಲಾಕಿನ್ ಅವಧಿ ಇರುತ್ತದೆ. ಈ ಫಂಡ್‌ಗಳಲ್ಲಿ ₹1.5 ಲಕ್ಷದ ವರೆಗಿನ ಹೂಡಿಕೆಗೆ ವಿನಾಯಿತಿ ಸಿಗುತ್ತದೆ.
- **ಆರೋಗ್ಯ ವಿಮೆ:** ಆರೋಗ್ಯ ವಿಮೆ ಮೇಲಿನ ಕಂತಿನ ಮೊತ್ತಕ್ಕೆ ಆದಾಯ ತೆರಿಗೆ ಸೆಕ್ಷನ್ 80ಡಿ ಅಡಿ ತೆರಿಗೆ ವಿನಾಯಿತಿ ಸಿಗುತ್ತದೆ. ಪತಿ- ಪತ್ನಿ ಮತ್ತು ಮಕ್ಕಳು ಸೇರಿ ಆರೋಗ್ಯ ವಿಮೆಗೆ ₹25 ಸಾವಿರದ ವರೆಗೆ ತೆರಿಗೆ ವಿನಾಯಿತಿ ಪಡೆಯಬಹುದು. 60 ವರ್ಷದ ಒಳಗಿನ ಪೋಷಕರಿಗೆ ₹25 ಸಾವಿರದ ವರೆಗೆ ವಿನಾಯಿತಿ ಸಿಗುತ್ತದೆ. 60 ವರ್ಷದ ಮೇಲ್ಪಟ್ಟ ಪೋಷಕರಿಗೆ ₹50 ಸಾವಿರದ ವರೆಗೆ ಸೆಕ್ಷನ್ 80ಡಿ ಅಡಿ ವಿನಾಯಿತಿ ಲಭಿಸುತ್ತದೆ.
- **ಅಂಚೆ ಕಚೇರಿ ಹೂಡಿಕೆ:** ಅಂಚೆ ಕಚೇರಿ ಹೂಡಿಕೆಗಳಾದ ಸಾರ್ವಜನಿಕ ಭವಿಷ್ಯ ನಿಧಿ (ಪಿಪಿಎಫ್), ರಾಷ್ಟ್ರೀಯ ಉಳಿತಾಯ ಪತ್ರ (ಎನ್‌ಎಸ್‌ಸಿ) ಮತ್ತು ಸುಕನ್ಯಾ ಸಮೃದ್ಧಿ ಯೋಜನೆಯಡಿ ಹೂಡಿಕೆಗೆ ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿ ₹1.5 ಲಕ್ಷದ ವರೆಗೆ ತೆರಿಗೆ ವಿನಾಯಿತಿ ಸಿಗುತ್ತದೆ. ಸುಕನ್ಯಾ ಸಮೃದ್ಧಿ ಯೋಜನೆಯಡಿ 10 ವರ್ಷದೊಳಗಿನ ಹೆಣ್ಣು ಮಕ್ಕಳಿದ್ದ ಪೋಷಕರು ಮಾತ್ರ ಹೂಡಿಕೆ ಮಾಡಬಹುದು ಎನ್ನುವುದು ನಿಮ್ಮ ಗಮನದಲ್ಲಿ ಇರಲಿ.
- **ಫಿಕ್ಸೆಡ್ ಡೆಪಾಸಿಟ್:** ತೆರಿಗೆ ವಿನಾಯಿತಿಗೆ ಒಳಪಡುವ ಫಿಕ್ಸೆಡ್ ಡೆಪಾಸಿಟ್‌ನಲ್ಲಿ 5 ವರ್ಷಗಳ ಅವಧಿಗೆ ಹೂಡಿಕೆ ಮಾಡಿದರೆ ಆದಾಯ ತೆರಿಗೆ ಸೆಕ್ಷನ್ 80ಸಿ ಅಡಿ ತೆರಿಗೆ ವಿನಾಯಿತಿ ಸಿಗುತ್ತದೆ. ಆದರೆ, ಫಿಕ್ಸೆಡ್ ಡೆಪಾಸಿಟ್ ಮೇಲೆ ಸಿಗುವ ಬಡ್ಡಿಗೆ ತೆರಿಗೆ ಅನ್ವಯಿಸುತ್ತದೆ.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಸತತ 2ನೇ ವಾರವೂ ಷೇರುಪೇಟೆ ಕುಸಿತ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ದಾಖಲಿಸಿವೆ. ಫೆಬ್ರುವರಿ 21ಕ್ಕೆ ಕೊನೆಗೊಂಡ ವಾರದಲ್ಲಿ ನಿಫ್ಟಿ ಮತ್ತು ಸೆನ್ಸೆಕ್ಸ್ ಕುಸಿತ ದಾಖಲಿಸಿವೆ. 75,311 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.83ರಷ್ಟು ತಗ್ಗಿದೆ. 22,795 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.58ರಷ್ಟು ಇಳಿಕೆಯಾಗಿದೆ.

ಆದರೆ, ನಿಫ್ಟಿ ಮಿಡ್ ಕ್ಯಾಪ್ ಸೂಚ್ಯಂಕ ಶೇ 1.68 ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.49ರಷ್ಟು ಗಳಿಸಿಕೊಂಡಿವೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ, ಭಾರತ ಮತ್ತು ಅಮೆರಿಕ ನಡುವೆ ಸುಂಕದ ಬಿಕ್ಕಟ್ಟು, ಗ್ರಾಹಕನ ಖರೀದಿ ಸಾಮರ್ಥ್ಯ ಕುಂಠಿತ, ಕಂಪನಿಗಳ ತ್ರೈಮಾಸಿಕ ವರದಿಯಲ್ಲಿ ಸಾಧಾರಣ ಗಳಿಕೆ ಸೇರಿ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ವಾರದ ಲೆಕ್ಕಾಚಾರ ನೋಡಿದಾಗ ಆಟೊ ಶೇ 2.5, ಫಾರ್ಮಾ ಶೇ 2.05, ಎಫ್‌ಎಂಸಿಜಿ ಶೇ 1.96, ಮಾಹಿತಿ ತಂತ್ರಜ್ಞಾನ ಶೇ 1.86, ಸರ್ವಿಸ್ ಶೇ 0.45, ಬ್ಯಾಂಕ್ ನಿಫ್ಟಿ ಶೇ 0.24, ಮತ್ತು ಫೈನಾನ್ಸ್ ಶೇ 0.05ರಷ್ಟು ಕುಸಿದಿವೆ.

ನಿಫ್ಟಿ ಲೋಹ ವಲಯ ಶೇ 5.16, ಎನರ್ಜಿ ಶೇ 3.34, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.67 ಮತ್ತು ಮಾಧ್ಯಮ ಶೇ 0.02ರಷ್ಟು ಗಳಿಸಿಕೊಂಡಿವೆ.

ಇಳಿಕೆ-ಗಳಿಕೆ: ನಿಫ್ಟಿಯಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 9.28, ಏರ್‌ಟೆಲ್ ಶೇ 4.59, ಟಿಸಿಎಸ್ ಶೇ 3.74, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 3.67, ಸನ್ ಫಾರ್ಮಾ ಶೇ 3.61, ಹಿಂದೂಸ್ತಾನ್ ಯುನಿಲಿವರ್ ಶೇ 3.3, ಮಾರುತಿ ಸುಜುಕಿ ಶೇ 2.76, ಐಟಿಸಿ ಶೇ 2.33, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 2.24, ಇನ್ಫೊಸಿಸ್ ಶೇ 2.22, ಐಸಿಐಸಿಐ ಬ್ಯಾಂಕ್ ಶೇ 2.1 ಮತ್ತು ಟಾಟಾ ಕನ್ಸ್ಯೂಮರ್ ಶೇ 1.83ರಷ್ಟು ಕುಸಿದಿವೆ.

ಶ್ರೀರಾಮ್ ಫೈನಾನ್ಸ್ ಶೇ 8.59, ಎಸ್‌ಟಿಪಿಸಿ ಶೇ 8.56, ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 7.89, ಐಷರ್ ಮೋಟರ್ಸ್ ಶೇ 5.55, ಟಾಟಾ ಸ್ಟೀಲ್ ಶೇ 4.61, ಕೋಲ್ ಇಂಡಿಯಾ ಶೇ 4.48, ಭಾರತ್ ಎಲೆಕ್ಟ್ರಾನಿಕ್ಸ್ ಶೇ 2.36, ಎಲ್ ಆ್ಯಂಡ್ ಟಿ ಶೇ 2.27, ಬಜಾಜ್ ಫಿನ್‌ಸರ್ವ್ ಶೇ 2.23 ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 2.08 ಮತ್ತು ಅದಾನಿ ಪೋರ್ಟ್ಸ್ ಶೇ 1.89ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಈ ವಾರ ಮಂಜೀರಾ ಕನ್‌ಸ್ಟ್ರಕ್ಷನ್, ರೇನ್ ಇಂಡಸ್ಟ್ರೀಸ್, ಎನ್. ಕೆ. ವೀಲ್ಸ್ ಇಂಡಿಯಾ, ಸನೋಫಿ ಇಂಡಿಯಾ, ಶೇಫ್ಲರ್ ಇಂಡಿಯಾ, ಫ್ಲೂಸೆಕೋ ಇಂಡಿಯಾ, ರಾಣಾ ಷುಗರ್ಸ್, ಇಂಟರ್ ನ್ಯಾಷನಲ್ ಜೆಮೋಲಜಿಕಲ್ ಇನ್‌ಸ್ಟಿಟ್ಯೂಟ್ ಇಂಡಿಯಾ ಸೇರಿ ಕೆಲ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಸದ್ಯದ ಪರಿಸ್ಥಿತಿಯಲ್ಲಿ ಮಾರುಕಟ್ಟೆಯಲ್ಲಿ ಅನಿಶ್ಚಿತತೆಯ ವಾತಾವರಣ ಮುಂದುವರಿಯಲಿದೆ. ಉಳಿದಂತೆ ಜಾಗತಿಕ ವಿದ್ಯಮಾನ ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆಯ ಮೇಲೆ ಪರಿಣಾಮ ಬೀರಲಿವೆ.

ಎಫ್‌ಐಐಟಿ ಜೆಇಇ ಕೇಂದ್ರದ ವಿರುದ್ಧ ಅಪಪ್ರಚಾರಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಫ್‌ಐಐಟಿ ಜೆಇಇ ತರಬೇತಿ ಕೇಂದ್ರಗಳು ದೇಶದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುತ್ತಿವೆ. ಇದನ್ನು ಸಹಿಸದೆ ನಮ್ಮ ಬ್ರ್ಯಾಂಡ್ ಮೌಲ್ಯಕ್ಕೆ ಪ್ರತಿಸ್ಪರ್ಧಿಗಳಿಂದ ಧಕ್ಕೆ ತರುವ ಪಿತೂರಿ ನಡೆದಿದೆ ಎಂದು ಎಫ್‌ಐಐಟಿ ಜೆಇಇ ಸಮೂಹ ತಿಳಿಸಿದೆ.

ಐಐಟಿ-ಜೆಇಇ ಸೇರಿ ಹಲವು ಪ್ರತಿಷ್ಠಿತ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ದೇಶದಾದ್ಯಂತ ವಿದ್ಯಾರ್ಥಿಗಳನ್ನು ಸಂಸ್ಥೆಯಿಂದ ಸಜ್ಜುಗೊಳಿಸಲಾಗುತ್ತಿದೆ. ಸಂಸ್ಥೆಗೆ ಒಳ್ಳೆಯ ಹೆಸರು ಇದೆ. ಇದಕ್ಕೆ ಧಕ್ಕೆ ತರಲು ಪ್ರತಿಸ್ಪರ್ಧಿಗಳ ಜೊತೆಗೆ ತರಬೇತಿ ಕೇಂದ್ರದ ಕೆಲವು ಬೋಧಕರು ಕೂಡ ಕೈಜೋಡಿಸಿದ್ದಾರೆ. ಇದರ ಬಗ್ಗೆ ಪೋಷಕರು ಮತ್ತು ವಿದ್ಯಾರ್ಥಿಗಳು ಕಿವಿಗೊಡಬಾರದು ಎಂದು ಕೋರಿದೆ.

'ಸತ್ಯ, ಪಾರದರ್ಶಕತೆ ಮತ್ತು ಬದ್ಧತೆಯೇ ತರಬೇತಿ ಸಂಸ್ಥೆಯ ಧ್ಯೇಯವಾಗಿದೆ. ಸದಸ್ಯರು ಇದನ್ನು ಕಡ್ಡಾಯವಾಗಿ ಪಾಲಿಸಬೇಕಿದೆ. ಕಂಪನಿಯ ಹಣಕಾಸಿನ ಸ್ಥಿತಿಗತಿ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟದ್ದಾಗಿ ಚಿತ್ರಿಸಲಾಗುತ್ತಿದೆ. ಹಾಗಾಗಿ, ಸಂಸ್ಥೆಯ ಪಾರದರ್ಶಕತೆ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುವ ಅಗತ್ಯವಿದೆ' ಎಂದು ಕಂಪನಿಯ ಸಂಸ್ಥಾಪಕ ಅಧ್ಯಕ್ಷ ಡಿ.ಕೆ. ಗೋಯಲ್ ತಿಳಿಸಿದ್ದಾರೆ.

ಅಧ್ಯಕ್ಷರ ಸೂಚನೆ ಮೇರೆಗೆ ಆಡಳಿತ ಮಂಡಳಿಯ ಸಭೆ ನಡೆದಿದೆ. ಕಳೆದ 10 ವರ್ಷಗಳ ಲೆಕ್ಕಪತ್ರ, ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ ಹಾಗೂ ಕಾರ್ಪೊರೇಟ್ ವಹಿವಾಟಿನ ಬಗ್ಗೆ ಪ್ರತಿಷ್ಠಿತ ಲೆಕ್ಕಪರಿಶೋಧಕ ಸಂಸ್ಥೆಯಿಂದ ಪಾರದರ್ಶಕವಾಗಿ ತಪಾಸಣೆ ನಡೆಸಲು ಆಡಳಿತ ಮಂಡಳಿಯು ಸರ್ವಾನುಮತದಿಂದ ನಿರ್ಣಯ ಅಂಗೀಕರಿಸಿದೆ.

ಕಂಪನಿ ಬಗ್ಗೆ ಕೇಳಿಬಂದಿರುವ ಆರೋಪದ ಬಗ್ಗೆ ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಡಿ ವಿಚಾರಣಾ ಸಮಿತಿ ರಚನೆ ಬಗ್ಗೆ ಸಭೆಯು ಒಪ್ಪಿಗೆ ನೀಡಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

1st Year Death Anniversary

UMESH B.G.
DOB: 13-07-1954 DOD: 24-02-2024
With profound grief, we invite you to join us for the rituals and pooja on Monday, 24-02-2025 at our residence, No 69, 4th Main, Ganganagar Extension, Ganganagar, Bengaluru - 560032
From:
Smt. Anusuya Devi (Wife), Hari Prasad & Prakash (Sons), Surekha (Daughter), Family and Friends.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹495
12 ಕ್ಕೆ	₹67
ಮೈಸೂರು	
100ಕ್ಕೆ	₹495

ಸಂಕ್ಷಿಪ್ತ ಸುದ್ದಿ

ಅದಾನಿ ಸಮೂಹ ₹58,104 ಕೋಟಿ ತೆರಿಗೆ ಪಾವತಿ

ಗೌತಮ್ ಅದಾನಿ

ನವದೆಹಲಿ (ಪಿಟಿಐ): 2023-24ನೇ ಆರ್ಥಿಕ ವರ್ಷದಲ್ಲಿ ಅದಾನಿ ಕಂಪನಿಗಳು ₹58,104 ಕೋಟಿ ತೆರಿಗೆ ಪಾವತಿಸಿವೆ ಎಂದು ಅದಾನಿ ಸಮೂಹವು ತಿಳಿಸಿದೆ.

ಜಾಗತಿಕ ಮಟ್ಟದಲ್ಲಿ ಕಂಪನಿಗಳು ನೇರವಾಗಿ ಭರಿಸಿರುವ ತೆರಿಗೆ, ಸುಂಕ ಹಾಗೂ ಇತರೆ ಶುಲ್ಕಗಳು ಈ ಮೊತ್ತದಲ್ಲಿ ಸೇರಿವೆ. ಅಲ್ಲದೆ, ಪರೋಕ್ಷ ತೆರಿಗೆ ರೂಪದಲ್ಲಿ ಮಧ್ಯಸ್ಥಗಾರರ ಪರವಾಗಿ ಸಂಗ್ರಹಿಸಿರುವ ತೆರಿಗೆ, ಸುಂಕ ಹಾಗೂ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ಸೌಲಭ್ಯ ಕಲ್ಪಿಸಲು ಪಾವತಿಸಿರುವ ತೆರಿಗೆಯನ್ನು ಇದು ಒಳಗೊಂಡಿದೆ ಎಂದು ವಿವರಿಸಿದೆ. 2022-23ನೇ ಆರ್ಥಿಕ ವರ್ಷದಲ್ಲಿ ₹46,610 ಕೋಟಿ ತೆರಿಗೆ ಪಾವತಿಸಲಾಗಿತ್ತು ಎಂದು ತೆರಿಗೆ ಪಾರದರ್ಶಕತೆ ಕುರಿತಂತೆ

ಬೆಂಗಳೂರು ಓಪನ್ ಟೆನಿಸ್ ಇಂದಿನಿಂದ: ವಿಟ್ ಕೊಪ್ರಿವಾಗೆ ಅಗ್ರ ಶ್ರೇಯಾಂಕ

ಪ್ರಜ್ವಲ್, ರಾಮಕುಮಾರ್ ಮೇಲೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಎಸ್.ಡಿ. ಪ್ರಜ್ವಲ್ ದೇವ್ ಮತ್ತು ರಾಮಕುಮಾರ್ ರಾಮನಾಥನ್ ಅವರು ಸೋಮವಾರ ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ ಟೂರ್ ಟೆನಿಸ್ ಟೂರ್ನಿಯಲ್ಲಿ ಸುಧಾರಿತ ಆಟ ಪ್ರದರ್ಶನದ ವಿಶ್ವಾಸದಲ್ಲಿದ್ದಾರೆ.

ಕಬ್ಬನ್ ಪಾರ್ಕ್‌ನಲ್ಲಿರುವ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಕೋರ್ಟ್‌ನಲ್ಲಿ ಮಾರ್ಚ್ 2ರವರೆಗೆ ನಡೆಯುವ ಒಂಬತ್ತನೇ ಆವೃತ್ತಿಯ ಟೂರ್ನಿಯಲ್ಲಿ ಈ ಇಬ್ಬರು ಅನುಭವಿ ಆಟಗಾರರೊಂದಿಗೆ ಮಹಾರಾಷ್ಟ್ರದ ನವಪ್ರತಿಭೆ ಮಾನಸ್ ಧಾಮನೆ ಅವರು ಸಿಂಗಲ್ಸ್‌ನ ಮುಖ್ಯಸುತ್ತಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಮೈಸೂರಿನ 28 ವರ್ಷ ವಯಸ್ಸಿನ ಪ್ರಜ್ವಲ್ ಅವರು ಝೆಕ್ ರಿಪಬ್ಲಿಕ್‌ನ ಮರೆಕ್ ಗೆಂಗೆಲ್ ವಿರುದ್ಧ ಅಭಿಯಾನ ಆರಂಭಿಸುವರು. ಕಳೆದ ಆವೃತ್ತಿಯಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದ 30 ವರ್ಷ ವಯಸ್ಸಿನ ರಾಮಕುಮಾರ್ ಅವರು ಏಳನೇ ಶ್ರೇಯಾಂಕದ ಜಪಾನ್‌ನ ಶಿಂಟಾರೊ ಮೊಚಿಜುಕಿ ಅವರನ್ನು ಎದುರಿಸುವರು.

17 ವರ್ಷ ವಯಸ್ಸಿನ ಧಾಮನೆ ಆರಂಭಿಕ ಸುತ್ತಿನಲ್ಲಿ ಕ್ವಾಲಿಫೈಯರ್ ಆಟಗಾರರೊಂದಿಗೆ ಅಭಿಯಾನ ಶುರು ಮಾಡುವರು. ಈಚೆಗೆ ಟುನೀಶಿಯಾದ ಎಂ15 ಮೊನಾಸ್ತಿರ್‌ನಲ್ಲಿ ತಮ್ಮ ಚೊಚ್ಚಲ ಪ್ರಮುಖ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ಅವರು, 2023ರಲ್ಲಿ ಎಟಿಪಿ ಟೂರ್‌ನಲ್ಲಿ ಮುಖ್ಯಸುತ್ತಿನ ಪಂದ್ಯಗಳನ್ನು ಆಡಿದ ಅತಿ ಕಿರಿಯ ವಯಸ್ಸಿನ ಆಟಗಾರ ಎಂಬ ಹೆಗ್ಗಳಿಕೆ ಹೊಂದಿದ್ದಾರೆ.

ಕೊಪ್ರಿವಾಗೆ ಅಗ್ರ ಶ್ರೇಯಾಂಕ: ವಿಶ್ವ ರ‍್ಯಾಂಕಿಂಗ್‌ನಲ್ಲಿ 120ನೇ ಸ್ಥಾನದಲ್ಲಿರುವ ಝೆಕ್ ರಿಪಬ್ಲಿಕ್‌ನ ವಿಟ್ ಕೊಪ್ರಿವಾ ಅವರು ಅಗ್ರ ಶ್ರೇಯಾಂಕದೊಂದಿಗೆ ಕಣಕ್ಕೆ ಇಳಿಯುವರು.

ಭಾರತದ ಕರಣ್‌ಸಿಂಗ್ ಆವರ ಆಟದ ಪರಿ

ಪ್ರಜಾವಾಣಿ ಚಿತ್ರ/ ಕೃಷ್ಣ ಕುಮಾರ್ ಪಿ.ಎಸ್.

ಭಾರತದಲ್ಲಿ ನಡೆಯುತ್ತಿರುವ ಪ್ರಸಕ್ತ ಋತುವಿನ ಎಟಿಪಿ ಚಾಲೆಂಜರ್ ಟೂರ್‌ನ ಕೊನೆಯ ಟೂರ್ನಿ ಇದಾಗಿದೆ. ಕಳೆದ ಮೂರು ವಾರಗಳಲ್ಲಿ ಕ್ರಮವಾಗಿ ನಡೆದ ಚೆನ್ನೈ, ದೆಹಲಿ ಮತ್ತು ಪುಣೆ (ಮಹಾ) ಓಪನ್ ಟೂರ್ನಿಯಲ್ಲಿ ಸ್ಪರ್ಧಿಸಿದ್ದ ವಿದೇಶಿ ಆಟಗಾರರು ಇಲ್ಲಿ ಮತ್ತೆ ಮುಖಾಮುಖಿಯಾಗುವರು.

27 ವರ್ಷ ವಯಸ್ಸಿನ ಕೊಪ್ರಿವಾ ಅವರು ಇಲ್ಲಿ ಚೊಚ್ಚಲ ಕಿರೀಟವನ್ನು ಎದುರು ನೋಡುತ್ತಿದ್ದಾರೆ. ದೆಹಲಿ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಅವರು, ಇಲ್ಲಿ ಮೊದಲ ಸುತ್ತಿನಲ್ಲಿ ಕ್ವಾಲಿಫೈಯರ್ ಆಟಗಾರನನ್ನು ಎದುರಿಸುವರು.

ಕ್ವಾಲಿಫೈಯರ್: ಕರಣ್, ಮುಕುಂದ್ ಮುನ್ನಡೆ

ಭಾರತದ ಡೇವಿಸ್ ಕಪ್ ತಂಡದ ಸದಸ್ಯರಾದ ಕರಣ್ ಸಿಂಗ್, ಮುಕುಂದ್ ಶಶಿಕುಮಾರ್ ಅವರು ಭಾನುವಾರ ನಡೆದ ಸಿಂಗಲ್ಸ್‌ನ ಕ್ವಾಲಿಫೈಯರ್ ಮೊದಲ ಸುತ್ತಿನಲ್ಲಿ ಜಯ ಗಳಿಸಿದರು.

ಕರಣ್ 7-5, 6-3ರಿಂದ ಉಕ್ರೇನ್‌ನ ಯೂರಿ ಝವಾಕಿಯಾನ್ ವಿರುದ್ಧ ಜಯ ಸಾಧಿಸಿದರೆ, ಮುಕುಂದ್ 6-3, 4-6, 6-3ರಿಂದ ಸ್ವದೇಶದ ರಿಷಿ ರೆಡ್ಡಿ ವಿರುದ್ಧ ಗೆದ್ದರು. ಕ್ವಾಲಿಫೈಯರ್‌ನ ಎರಡನೇ ಸುತ್ತಿನಲ್ಲಿ ಸ್ಪರ್ಧೆ ಸೋಮವಾರ ನಡೆಯಲಿದೆ.

ಯುವ ಆಟಗಾರ ಅರ್ಯನ್ ಶಾ 6-4, 7-6(4)ರಿಂದ ಐದನೇ ಶ್ರೇಯಾಂಕದ ಕ್ರಿಸ್ ವ್ಯಾನ್ ವೈಕ್ ಅವರಿಗೆ ಆಘಾತ ನೀಡಿದರು. ಆದರೆ, ಸಿದ್ಧಾಂತ್ ರಾವತ್ 4-6, 4-6ರಿಂದ ಝೆಕ್ ರಿಪಬ್ಲಿಕ್‌ನ ಹೈನೆಕ್ ಬಾರ್ಟನ್ ಅವರಿಗೆ ಮಣಿದರು. ದೆಹಲಿ ಓಪನ್‌ನ ಡಬಲ್ಸ್ ರನ್ನರ್ ಅಪ್ ನಿಕಿ ಪೂಣಚ್ಚ ಅವರೂ ಮೊದಲ ಸುತ್ತಿನಲ್ಲಿ ನಿರಾಸೆ ಅನುಭವಿಸಿದರು.

ಜೋಡಿ ಭಾರತದ ಸಾಯಿ ಕಾರ್ತಿಕ್ ರೆಡ್ಡಿ ಮತ್ತು ಉಜ್ಬೇಕಿಸ್ತಾನದ ಖುಮೋಯುನ್ ಸುಲ್ತಾನೋವ್ ವಿರುದ್ಧ ಅಭಿಯಾನ ಆರಂಭಿಸಲಿದೆ.

ಹಾಲಿ ಚಾಂಪಿಯನ್ ರಾಮಕುಮಾರ್ ಮತ್ತು ಸಾಕೇತ್ ಮೈನೇನಿ ಸೇರಿದಂತೆ ಭಾರತದ ನಾಲ್ಕು ಜೋಡಿ ಡಬಲ್ಸ್‌ನಲ್ಲಿ ಸ್ಪರ್ಧಿಸುತ್ತಿದೆ. ಅಲ್ಲದೆ, ಮೂವರು ಭಾರತೀಯರು ವಿದೇಶಿ ಆಟಗಾರರ ಜೊತೆಗೂಡಿ ಕಣಕ್ಕೆ ಇಳಿಯುತ್ತಿದ್ದಾರೆ.

ಜಯದ ಹಾದಿಗೆ ಮರಳುವತ್ತ ಆರ್‌ಸಿಬಿ

ಮಂದಾನ ಪಡೆ–ಯು.ಪಿ ವಾರಿಯರ್ಸ್ ಹಣಾಹಣಿ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಪ್ರೇಕ್ಷಕರ ಗ್ಯಾಲರಿಗಳು ಭರ್ತಿಯಾಗಿದ್ದವು. ಆದರೆ ಅವತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಜಯಿಸಲಿಲ್ಲ. ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಮುಂಬೈ ಇಂಡಿಯನ್ಸ್ ಗೆದ್ದಿತ್ತು.

ವಡೋದರಾದಲ್ಲಿ ನಡೆದಿದ್ದ ಟೂರ್ನಿಯ ಮೊದಲ ಹಂತದ ಎರಡೂ ಪಂದ್ಯಗಳಲ್ಲಿ ಜಯಿಸಿದ್ದ ಸ್ಮೃತಿ ಬಳಗವು ತವರಿನಂಗಳದಲ್ಲಿ ಎಡವಿತ್ತು. ಸೋಮವಾರ ಯು.ಪಿ. ವಾರಿಯರ್ಸ್ ಎದುರು ಕಣಕ್ಕಿಳಿಯಲಿರುವ ಬೆಂಗಳೂರು ತಂಡವು ಗೆಲುವಿನ ಛಲದಲ್ಲಿದೆ.

ಹಾಲಿ ಚಾಂಪಿಯನ್ ಬೆಂಗಳೂರು ತಂಡದ ನಾಯಕ ಸ್ಮೃತಿ ಮಂದಾನ ಉತ್ತಮ ಲಯದಲ್ಲಿದ್ದಾರೆ. ಇನಿಂಗ್ಸ್‌ಗೆ ಉತ್ತಮ ಆರಂಭ ಒದಗಿಸುತ್ತಿದ್ದಾರೆ. ಅಭಿಮಾನಿಗಳ 'ಕಣ್ಮಣಿ' ಎಲಿಸ್ ಪೆರಿ ಕಳೆದ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ಮಾಡಿದ್ದರು. ಅದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಲು ಸಾಧ್ಯವಾಗಿತ್ತು. ರಿಚಾ ಘೋಷ್ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ.

ವೈಟ್ ಹಾಜ್, ರಾಘವಿ ಬಿಷ್ಟ್ ಮತ್ತು ಕನಿಕಾ ಅಹುಜಾ ಅವರು ತಮಗೆ ಲಭಿಸಿದ ಅವಕಾಶವನ್ನು ಬಳಸಿಕೊಂಡರೆ ತಂಡವು ದೊಡ್ಡ ಮೊತ್ತ ಪೇರಿಸಬಹುದು ಅಥವಾ ದೊಡ್ಡ ಗುರಿಯನ್ನು ಬೆನ್ನತ್ತಿ ಜಯಿಸಲೂಬಹುದು.

ಆರ್‌ಸಿಬಿ ಆಟಗಾರ್ತಿಯರ ಅಭ್ಯಾಸ –ಪ್ರಜಾವಾಣಿ ಚಿತ್ರ

ಯು.ಪಿ. ವಾರಿಯರ್ಸ್ ತಂಡದ ನಾಯಕಿ ದೀಪ್ತಿ ಶರ್ಮಾ

ಬೌಲಿಂಗ್ ವಿಭಾಗದಲ್ಲಿ ಜಾರ್ಜಿಯಾ ವೇರ್‌ಹ್ಯಾಮ್, ಕಿಮ್ ಗಾರ್ಥ್ ಮತ್ತು ರೇಣುಕಾ ಸಿಂಗ್ ಅವರ ಮೇಲೆ ಹೆಚ್ಚು ಭರವಸೆ ಇಡಬಹುದು. ಆದರೆ ಯು.ಪಿ. ವಾರಿಯರ್ಸ್ ತಂಡದ ಬ್ಯಾಟಿಂಗ್ ಬಲ ಹೆಚ್ಚಿದೆ. ವಾರಿಯರ್ಸ್ ತಂಡದ ಎಂಟನೇ ಕ್ರಮಾಂಕದ ಆಟಗಾರ್ತಿ ಚೈನೆಲ್ ಹೆನ್ರಿ ಎಂಟು ಸಿಕ್ಸರ್‌ಗಳ ಚಿತ್ತಾರ ಬಿಡಿಸಿದ್ದರು. ಅದರಿಂದಾಗಿ ತಂಡವು ಉತ್ತಮ ಮೊತ್ತ ಗಳಿಸಿತ್ತು. ಬೌಲಿಂಗ್‌ನಲ್ಲಿ ತಲಾ 4 ವಿಕೆಟ್ ಗಳಿಸಿದ ಕ್ರಾಂತಿ ಗೌಡ್ ಮತ್ತು ಗ್ರೇಸ್ ಹ್ಯಾರಿಸ್ ತಂಡವನ್ನು ಜಯದತ್ತ ಮುನ್ನಡೆಸಿದ್ದರು. ವಾರಿಯರ್ಸ್ ತಂಡವು ಇದುವರೆಗೆ 3 ಪಂದ್ಯಗಳನ್ನು ಆಡಿ ಎರಡರಲ್ಲಿ ಸೋತಿದೆ. ಎರಡನೇ ಜಯ ಸಾಧಿಸಲು ಆರ್‌ಸಿಬಿಗೆ ಕಠಿಣ ಸವಾಲೊಡ್ಡಲು ಸಿದ್ಧವಾಗಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ದಾಲಿಬೋರ್‌ಗೆ ಸಿಂಗಲ್ಸ್ ಕಿರೀಟ

ಪುಣೆ (ಪಿಟಿಐ): ಝೆಕ್ ರಿಪಬ್ಲಿಕ್‌ನ ದಾಲಿಬೋರ್ ಸ್ವರ್ಸಿನಾ ಅವರು ಇಲ್ಲಿ ಭಾನುವಾರ ಮುಕ್ತಾಯಗೊಂಡ ಮಹಾ ಓಪನ್ ಎಟಿಪಿ ಚಾಲೆಂಜರ್ಸ್ 100 ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಕಿರೀಟವನ್ನು ಮುಡಿಗೇರಿಸಿಕೊಂಡರು.

ಫೈನಲ್ ಹಣಾಹಣಿಯಲ್ಲಿ 21 ವರ್ಷ ವಯಸ್ಸಿನ ದಾಲಿಬೋರ್ 7-6 (3), 6-1ರಿಂದ ಬ್ರಾಂಡನ್ ಹಾಲ್ಟ್ ಅವರನ್ನು ಮಣಿಸಿದರು. ದಾಲಿಬೋರ್ ಅವರಿಗೆ ಮೊದಲ ಸೆಟ್‌ನಲ್ಲಿ ಅಮೆರಿಕದ ಆಟಗಾರನಿಂದ ಪ್ರಬಲ ಪೈಪೋಟಿ ಎದುರಾಯಿತು. ಆರಂಭಿಕ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ವಶಪಡಿಸಿಕೊಂಡ ಅವರು, ಎರಡನೇ ಸೆಟ್‌ನಲ್ಲಿ ಸುಲಭ ಜಯ ಸಾಧಿಸಿದರು.

ಈ ಗೆಲುವಿನೊಂದಿಗೆ ದಾಲಿಬೋರ್ ಅವರು ₹19.69 ಲಕ್ಷ ಬಹುಮಾನ ಮತ್ತು 100 ಎಟಿಪಿ ರ‍್ಯಾಂಕಿಂಗ್ ಪಾಯಿಂಟ್ಸ್ ತಮ್ಮದಾಗಿಸಿಕೊಂಡರು. ಹಾಲ್ಟ್ ಅವರು ₹11.56 ಲಕ್ಷ ಮತ್ತು 60 ಎಟಿಪಿ ಪಾಯಿಂಟ್ಸ್ ಗಳಿಸಿದರು.

ದಾಲಿಬೋರ್ ಸ್ವರ್ಸಿನಾ –ಎಕ್ಸ್ ಚಿತ್ರ

ಪ್ರೊ ಲೀಗ್ ಹಾಕಿ: ಮಹಿಳೆಯರಿಗೆ ನೆದರ್ಲೆಂಡ್ಸ್ ಎದುರಾಳಿ

ಹರ್ಮನ್ ಪಡೆಗೆ ಇಂಗ್ಲೆಂಡ್ ಸವಾಲು

ಭುವನೇಶ್ವರ (ಪಿಟಿಐ): ಹ್ಯಾಟ್ರಿಕ್ ಗೆಲುವಿನೊಂದಿಗೆ ಆತ್ಮವಿಶ್ವಾಸ ವೃದ್ಧಿಸಿಕೊಂಡಿರುವ ಭಾರತ ಪುರುಷರ ಹಾಕಿ ತಂಡವು ಪ್ರೊ ಲೀಗ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಭಾರತ ತಂಡ ಆರು ಪಂದ್ಯಗಳಿಂದ (4 ಗೆಲುವು, 2 ಸೋಲು) 12 ಅಂಕ ಗಳಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಇಂಗ್ಲೆಂಡ್ ಅಷ್ಟೇ ಪಂದ್ಯಗಳಿಂದ (3 ಗೆಲುವು, 2 ಡ್ರಾ, 1ಸೋಲು) 13 ಅಂಕ ಸಂಪಾದಿಸಿದ್ದು, ಮೂರನೇ ಸ್ಥಾನದಲ್ಲಿದೆ. ಭಾರತಕ್ಕೆ ತವರು ಲೆಗ್‌ನಲ್ಲಿ ಇಂಗ್ಲೆಂಡ್ ವಿರುದ್ಧದ ಎರಡು ಪಂದ್ಯ ಮಾತ್ರ ಬಾಕಿ ಉಳಿದಿವೆ. ಆ ಪಂದ್ಯಗಳಲ್ಲಿ ಉತ್ತಮ ಆಟ ಪ್ರದರ್ಶಿಸುವತ್ತ ಹರ್ಮನ್ ಪಡೆ ಚಿತ್ತ ಹರಿಸಿದೆ.

ಕಳಿಂಗ ಹಾಕಿ ಕ್ರೀಡಾಂಗಣದಲ್ಲಿ ಭಾರತವು ಸ್ಪೇನ್ ಮತ್ತು ಜರ್ಮನಿ ತಂಡಗಳ ವಿರುದ್ಧ ಮಿಶ್ರ ಫಲಿತಾಂಶ ಪಡೆದಿದೆ. ಮೊದಲ ಲೆಗ್‌ನಲ್ಲಿ ಸೋತು, ರಿವರ್ಸ್ ಲೆಗ್‌ನಲ್ಲಿ ಪಾರಮ್ಯ ಸಾಧಿಸಿದೆ. ಐರ್ಲೆಂಡ್ ವಿರುದ್ಧದ ಎರಡೂ ಪಂದ್ಯಗಳಲ್ಲಿ ಭಾರತ ಜಯಿಸಿದೆ.

ಹರ್ಮನ್‌ಪ್ರೀತ್ ಸಿಂಗ್

ಮಹಿಳೆಯರಿಗೆ ನೆದರ್ಲೆಂಡ್ಸ್ ಸವಾಲು: ಭಾರತದ ಮಹಿಳೆಯರು ಪ್ರೊ ಲೀಗ್‌ನ ಪಂದ್ಯದಲ್ಲಿ ಸೋಮವಾರ ಪ್ರಬಲ ನೆದರ್ಲೆಂಡ್ಸ್ ತಂಡವನ್ನು ಎದುರಿಸಲಿದ್ದಾರೆ.

ಆರು ಪಂದ್ಯಗಳಿಂದ (2 ಗೆಲುವು, 1 ಡ್ರಾ, 3 ಸೋಲು) 7 ಅಂಕ ಗಳಿಸಿರುವ ಸಲೀಮಾ ಟೆಟೆ ಬಳಗವು ಪಾಯಿಂಟ್ ಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ. ನೆದರ್ಲೆಂಡ್ಸ್ ತಂಡವು (5 ಗೆಲುವು, 1ಸೋಲು) 15 ಅಂಕದೊಂದಿಗೆ ಎರಡನೇ ಸ್ಥಾನದಲ್ಲಿದೆ. ಚೀನಾ (16) ಅಗ್ರಸ್ಥಾನದಲ್ಲಿದೆ.

ಕಬಡ್ಡಿ: ಸರ್ವಿಸಸ್ ಚಾಂಪಿಯನ್

ಕಟಕ್ (ಪಿಟಿಐ): ಸರ್ವಿಸಸ್ ತಂಡವು ಇಲ್ಲಿ ನಡೆದ 71ನೇ ಸೀನಿಯರ್ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ಮುಡಿಗೇರಿಸಿಕೊಂಡಿತು.

ಇಲ್ಲಿನ ಜವಾಹರಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನ ರೋಚಕ ಹಣಾಹಣಿಯಲ್ಲಿ ಸರ್ವಿಸಸ್ 30-30 (6-4)ರಿಂದ ರೈಲ್ವೇಸ್ ತಂಡವನ್ನು ಮಣಿಸಿತು. ನಿಗದಿತ ಅವಧಿಯಲ್ಲಿ ಪಂದ್ಯ ಸಮಬಲಗೊಂಡು, ಟೈಬ್ರೇಕರ್‌ನಲ್ಲಿ ಸರ್ವಿಸಸ್ ಪಾರಮ್ಯ ಮೆರೆಯಿತು.

ಸೆಮಿಫೈನಲ್‌ನಲ್ಲಿ ಸರ್ವಿಸಸ್ 43-35ರಿಂದ ಪಂಜಾಬ್ ವಿರುದ್ಧ; ರೈಲ್ವೇಸ್ ತಂಡವು 42-34ರಿಂದ ಉತ್ತರ ಪ್ರದೇಶ ವಿರುದ್ಧ ಗೆದ್ದಿತ್ತು.

ಫುಟ್‌ಬಾಲ್: 27ರಿಂದ ಟ್ರಯಲ್ಸ್

ಬೆಂಗಳೂರು: ಮುಂಬರುವ ಸ್ವಾಮಿ ವಿವೇಕಾನಂದ (20 ವರ್ಷದೊಳಗಿನ ವರ) ಪುರುಷರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಾಗಿ ಕರ್ನಾಟಕ ರಾಜ್ಯ ತಂಡದ ಆಯ್ಕೆಗಾಗಿ ಇದೇ 27 ಮತ್ತು 28ರಂದು ಟ್ರಯಲ್ಸ್ ಆಯೋಜಿಸಲಾಗಿದೆ.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಅಂದು ಬೆಳಿಗ್ಗೆ 9ರಿಂದ ಟ್ರಯಲ್ಸ್ ನಡೆಯಲಿದೆ. 2006 ಜನವರಿ 1ರಿಂದ 2008 ಡಿಸೆಂಬರ್ 31ರ ನಡುವೆ ಜನಿಸಿದವರು ತಮ್ಮ ಜನನ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್ ದಾಖಲೆಯೊಂದಿಗೆ ಹಾಜರಾಗಲು ಸೂಚಿಸಿದೆ.

ಬಿಹಾರ: ಅವಧಿಗೂ ಮುನ್ನ ಚುನಾವಣೆ?

ಪ್ರಜಾವಾಣಿ ವಾರ್ತೆ

ಪಟ್ನಾ: ದೆಹಲಿ ಚುನಾವಣೆಯಲ್ಲಿ ದೊರೆತ ಭರ್ಜರಿ ಗೆಲುವಿನಿಂದ ಹುಮ್ಮಸ್ಸು ಹೆಚ್ಚಿಸಿಕೊಂಡಿರುವ ಬಿಜೆಪಿಯು ಬಿಹಾರದಲ್ಲಿ ಅವಧಿಗೂ ಮುನ್ನವೇ ವಿಧಾನಸಭಾ ಚುನಾವಣೆಯನ್ನು ನಡೆಸುವ ಆಲೋಚನೆ ಹೊಂದಿದೆಯೇ?

ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಆಪ್ತರೂ ಆಗಿರುವ ಸಚಿವ ವಿಜಯ್ ಚೌಧರಿ ಶನಿವಾರ ನೀಡಿದ ಹೇಳಿಕೆಯು ಅವಧಿ ಪೂರ್ವ ಚುನಾವಣೆಗೆ ಸಂಬಂಧಿಸಿದ ಊಹಾಪೋಹಗಳನ್ನು ಹೆಚ್ಚಿಸುವಂತೆ ಮಾಡಿದೆ. ನಿಗದಿತ ವೇಳಾಪಟ್ಟಿಯಂತೆ ಬಿಹಾರದಲ್ಲಿ ಈ ವರ್ಷದ ಅಕ್ಟೋಬರ್‌ನಲ್ಲಿ ಚುನಾವಣೆ ನಡೆಯಬೇಕಿದೆ.

'ನಾವು ಯಾವುದೇ ಸಮಯದಲ್ಲಿ ವಿಧಾನಸಭಾ ಚುನಾವಣೆ ಎದುರಿಸಲು ಸಿದ್ಧರಿದ್ದೇವೆ. ಆದರೆ ಚುನಾವಣೆಯನ್ನು ಯಾವಾಗ ನಡೆಸಬೇಕು ಎಂಬುದನ್ನು ಚುನಾವಣಾ ಆಯೋಗ ನಿರ್ಧರಿಸಲಿದೆ' ಎಂದು ಚೌಧರಿ ಹೇಳಿದ್ದಾರೆ.

ಸ್ಪೀಕರ್ ಕೂಡ ಆಗಿದ್ದ ಚೌಧರಿ ಅವರು ಪ್ರತಿಯೊಂದು ಮಾತನ್ನೂ ಎಚ್ಚರಿಕೆಯಿಂದಲೇ ಆಡುವರು. ಆದ್ದರಿಂದ ಅವರ ಹೇಳಿಕೆ ಅಚ್ಚರಿ ಮೂಡಿಸಿಲ್ಲ. ಬದಲಿಗೆ, ಬೇಗನೇ ಚುನಾವಣೆ ನಡೆಯಬಹುದು ಎಂಬ ವದಂತಿಯನ್ನು ಇನ್ನಷ್ಟು ಹೆಚ್ಚುವಂತೆ ಮಾಡಿದೆ.

ಚುನಾವಣೆ ಬೇಗನೇ ನಡೆಯುವ ಸಾಧ್ಯತೆಯನ್ನು ಹೆಚ್ಚಿಸುವ ಇನ್ನೊಂದು ಅಂಶ ನಿತೀಶ್ ಕುಮಾರ್ ಆರೋಗ್ಯ. 'ನಿತೀಶ್ ಆರೋಗ್ಯವಾಗಿರಲಿ' ಎಂದು ಪ್ರತಿಯೊಬ್ಬ ರಾಜಕಾರಣಿಯೂ ಹಾರೈಸುತ್ತಿದ್ದಾರೆ. ಬಿಹಾರದಲ್ಲಿ ಕಾನೂನು ಸುವ್ಯವಸ್ಥೆ ಮರುಸ್ಥಾಪಿಸುವುದರ ಜತೆಯಲ್ಲೇ ರಾಜ್ಯವನ್ನು ಅಭಿವೃದ್ಧಿಪಥದಲ್ಲಿ ಮುನ್ನಡೆಸಿರುವ ಅವರ ನೇತೃತ್ವದಲ್ಲೇ ಎನ್‌ಡಿಎ ಚುನಾವಣೆ ಎದುರಿಸಬೇಕೆಂಬುದು ಬಿಜೆಪಿಯ ಬಯಕೆಯಾಗಿದೆ.

ನಿತೀಶ್ ಅವರನ್ನು ಮುಂಚೂಣಿಯಲ್ಲಿ ನಿಲ್ಲಿಸಿ ಚುನಾವಣೆಯಲ್ಲಿ ಹೆಚ್ಚಿನ ಸೀಟುಗಳನ್ನು ಗೆಲ್ಲಬಹುದು ಎಂಬ ಲೆಕ್ಕಾಚಾರವನ್ನು ಬಿಜೆಪಿ ಹಾಕಿಕೊಂಡಿದೆ.

'ನಿತೀಶ್ ಅವರ ಆರೋಗ್ಯ ಇನ್ನಷ್ಟು ಹದಗೆಟ್ಟರೆ ಬಿಜೆಪಿ ನೇತೃತ್ವದ ಎನ್‌ಡಿಎಗೆ ಮುಜುಗರ ಉಂಟುಮಾಡಬಹುದು. ಆದ್ದರಿಂದ ಅವಧಿಗೂ ಮುನ್ನವೇ ಚುನಾವಣೆ ನಡೆಯುವುದನ್ನು ಎನ್‌ಡಿಎ ಬಯಸುತ್ತದೆ. ಸಿ.ಎಂ. ಆರೋಗ್ಯವನ್ನು ಪರಿಗಣಿಸಿ ಅವರನ್ನು ಈಗಾಗಲೇ ಮಾಧ್ಯಮಗಳಿಂದ ದೂರ ಇಡಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ನಿಜಕ್ಕೂ ದುಃಖದ ವಿಚಾರ' ಎಂದು ಕಾಂಗ್ರೆಸ್ ಬಿಹಾರ ಘಟಕದ ಮಾಜಿ ಅಧ್ಯಕ್ಷ ಕೌಕಬ್ ಕಾದ್ರಿ ಹೇಳಿದ್ದಾರೆ.

ಪ್ರಧಾನಿ ಭೇಟಿ ಇಂದು

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಬಿಹಾರಕ್ಕೆ ಭೇಟಿ ನೀಡಲಿದ್ದು, ರೈತರಿಗೆ ₹22 ಸಾವಿರ ಕೋಟಿ ಮೊತ್ತದ ವಿವಿಧ ಕಾರ್ಯಕ್ರಮಗಳನ್ನು ಘೋಷಿಸಲಿದ್ದಾರೆ. ಈ ತಿಂಗಳ ಆರಂಭದಲ್ಲಿ ಮಂಡಿಸಿದ ಕೇಂದ್ರ ಬಜೆಟ್‌ನಲ್ಲಿ ಬಿಹಾರಕ್ಕೆ ಭರಪೂರ ಕೊಡುಗೆಗಳನ್ನು ಘೋಷಿಸಲಾಗಿತ್ತು.

'ಭಾರತದ ಚುನಾವಣೆಗೆ ₹155 ಕೋಟಿ'

'ಯುಎಸ್‌ಐಡ್': ಬೈಡನ್ ಆಡಳಿತದ ವಿರು

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ-ದುಬೈ)

ಪಾಕ್ ಎದುರು ಗೆದ್ದು ಮಯ್ಯಿ ತೀರಿಸಿಕೊಂಡ ಭಾರತ • ಶ್ರೇಯಸ್ ಬ್ಯಾಟಿಂಗ್ ಭರಾಟೆ • ಚಾಂಪಿಯನ್ ಪಾಕಿಸ್ತಾನಕ್ಕೆ ಆಘಾತ

ಗತವೈಭವಕ್ಕೆ ಮರಳಿದ ವಿರಾಟ್ ಕೊಹ್ಲಿ

• ಆರ್. ಕೌಶಿಕ್

ದುಬೈ: ವಿರಾಟ್ ಕೊಹ್ಲಿ ಅವರಿಗೆ 2014 ರಿಂದ 2019ರವರೆಗಿನ ಐದು ವರ್ಷಗಳಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ಶತಕಗಳನ್ನು ಗಳಿಸುವುದು ಕರಗತವಾಗಿತ್ತು. ಆಗ ಅವರಿಗೆ ತಡೆಯೊಡ್ಡುವುದು ಕಷ್ಟಸಾಧ್ಯವೇ ಆಗಿತ್ತು. ಅದರಲ್ಲೂ ಚೇಸಿಂಗ್‌ನಲ್ಲಿ ಅವರಿಗೆ ಅವರೇ ಸಾಟಿಯಾಗಿದ್ದರು.

ಭಾರತ ತಂಡದ ಮಾಜಿ ನಾಯಕ ವಿರಾಟ್, ಭಾನುವಾರ ರಾತ್ರಿ ದುಬೈ ಅಂತರ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮತ್ತೆ ತಮ್ಮ ಹಳೆಯ ವೈಭವಕ್ಕೆ ಮರಳಿದರು. ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಹಳೆಯ ಎದುರಾಳಿಯೇ ಆಗಿರುವ ಪಾಕಿಸ್ತಾನ ಈ ಹಿಂದೆಯೂ ವಿರಾಟ್ ಪ್ರತಾಪದ ಬಿಸಿ ಅನುಭವಿಸಿತ್ತು. ಇಲ್ಲಿ ದಾಖಲಿಸಿದ ಕೊಹ್ಲಿ (ಅಜೇಯ 100) ಆಟಕ್ಕೆ ಮೊಹಮ್ಮದ್ ರಿಜ್ವಾನ್ ಬಳಗವು ಶರಣಾಯಿತು. ವಿರಾಟ್ 51ನೇ ಶತಕ ದಾಖಲಿಸಿದರು. 2023ರ ನವೆಂಬರ್‌ನಲ್ಲಿ ವಿಶ್ವಕಪ್ ಪಂದ್ಯದಲ್ಲಿ ಶತಕ ಹೊಡೆದಿದ್ದರು. ಅದರ ನಂತರ ಈಗಲೇ ಮತ್ತೆ ಮೂರಂಕಿ ಗಳಿಸಿದರು.

51
ಏಕದಿನ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಅವರ ದಾಖಲೆಯ ಶತಕಗಳು. ಕ್ರಿಕೆಟ್ ದಿಗ್ಗಜ ಸಚಿನ್ ತೆಂಡೂಲ್ಕರ್ (49) ನಂತರದ ಸ್ಥಾನದಲ್ಲಿದ್ದಾರೆ

ಕ್ರೀಸ್‌ಗೆ ಬಂದ ಕೊಹ್ಲಿ ನಸೀಮ್ ಶಾ ಹಾಕಿದ ಎಸೆತವನ್ನು ಎದುರಿಸಿದಾಗಲೇ ಅವರ ಆತ್ಮವಿಶ್ವಾಸದ ಹಾವಭಾವ ಗಮನ ಸೆಳೆದಿತ್ತು. ಎರಡನೇ ವಿಕೆಟ್ ಜೊತೆಯಾಟ ದಲ್ಲಿ ಶುಭಮನ್ ಗಿಲ್ ಅವರೊಂದಿಗೆ 69 ರನ್ ಮತ್ತು 3ನೇ ವಿಕೆಟ್ ಜೊತೆಯಾಟದಲ್ಲಿ ಶ್ರೇಯಸ್ ಅಯ್ಯರ್ ಜೊತೆಗೆ 114 ರನ್ ಸೇರಿಸಿದರು. ಇದರಿಂದಾಗಿ ಭಾರತ 6 ವಿಕೆಟ್‌ಗಳ ಜಯ ಸಾಧಿಸಿತು. ವಿರಾಟ್ ಹೊಡೆದ 7ನೇ ಬೌಂಡರಿಯು ತಂಡಕ್ಕೆ ವಿಜಯದ ರನ್ ಒದಗಿಸಿತು. ಜೊತೆಗೆ ಶತಕವೂ ಪೂರ್ಣಗೊಂಡಿತು.ವಿಕೆಟ್ ನಡುವೆ ಚುರುಕಾದ ಓಟ ಮತ್ತು ಎಸೆತಗಳ ನಿಖರವಾದ ಪ್ಲೇಸ್‌ಮೆಂಟ್ ಅವರ ಆಟವನ್ನು ಉತ್ಕೃಷ್ಟಗೊಳಿಸಿದವು.

ಭಾರತವು, ಏಕದಿನ ಕ್ರಿಕೆಟ್‌ನಲ್ಲಿ ಸತತ 13ನೇ ಬಾರಿ ಟಾಸ್ ಸೋತಿತು. ಪಾಕ್ ನಾಯಕ ಮೊಹಮ್ಮದ್ ರಿಜ್ವಾನ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಬಾಬರ್ ಆಜಂ ಮತ್ತು ಇಮಾಮ್ ಉಲ್ ಹಕ್ ಮೊದಲ ವಿಕೆಟ್‌ಗೆ 41 ರನ್ ಸೇರಿಸಿದರು. ಅದು ಬಿಟ್ಟರೆ 3ನೇ ವಿಕೆಟ್ ಜೊತೆಯಾಟದಲ್ಲಿ ಸೌದ್ ಶಕೀಲ್ ಮತ್ತು ನಾಯಕ ರಿಜ್ವಾನ್ ಅವರು ಸೇರಿಸಿದ 104 ರನ್‌ಗಳು ತಂಡವು 241 ರನ್‌ಗಳನ್ನು ಗಳಿಸಲು ನೆರವಾದವು.

ಪಾಕಿಸ್ತಾನ ತಂಡದಲ್ಲಿ ಸ್ಲೋ ಬೌಲಿಂಗ್ ಆಯ್ಕೆಗಳು ಹೆಚ್ಚು ಇರಲಿಲ್ಲ. ಅಬ್ರಾರ್ ಅಹಮದ್ ಒಬ್ಬರೇ ಆ ಕಾರ್ಯಕ್ಕೆ ಸೂಕ್ತವಾದವರು. ಉಳಿದಂತೆ ವೇಗಿ ಶಾಹೀನ್ ಶಾ ಆಫ್ರಿದಿ, ನಸೀಂ ಮತ್ತು ಹ್ಯಾರಿಸ್ ರವೂಫ್ ಅವರನ್ನೇ ಪಾಕ್ ನೆಚ್ಚಿಕೊಂಡಿತ್ತು. ಆಫ್ರಿದಿ ತಮ್ಮ ಪರಿಣಾಮಕಾರಿಯಾದ ಇನ್‌ಸ್ವಿಂಗಿಂಗ್ ಯಾರ್ಕರ್ ಮೂಲಕ ರೋಹಿತ್ ವಿಕೆಟ್ ಹಾರಿಸಿದರು. ಅದಕ್ಕೂ ಮುನ್ನ ರೋಹಿತ್ ಕೆಲವು ಚೆಂದದ ಬೌಂಡರಿಗಳನ್ನು ಹೊಡೆದು ಇನಿಂಗ್ಸ್‌ಗೆ ಆರಂಭ ನೀಡಿದ್ದರು.

ಶ್ರೇಯಸ್ ಆಯ್ಯರ್ ಬ್ಯಾಟಿಂಗ್ —ಎಎಫ್‌ಪಿ ಚಿತ್ರಗಳು

ಅದೇ ಆಫ್ರಿದಿಯನ್ನು ಗಿಲ್ ದಂಡಿಸಿದರು. ಡ್ರೈವ್‌ಗಳ ಮೂಲಕ ಬೌಂಡರಿಗಳನ್ನು ಬಾರಿಸಿದರು. ಇನ್ನೊಂದೆಡೆ ಕೊಹ್ಲಿ ಫೀಲ್ಡರ್‌ಗಳ ನಡುವಿನ ಗ್ಯಾಪ್‌ಗಳನ್ನು ಗುರುತಿಸಿ ಚೆಂಡಿಗೆ ದಾರಿ ತೋರಿಸಿದರು. ಹ್ಯಾರಿಸ್ ರವೂಫ್ ಎಸೆತವನ್ನು ಮಿಡ್ ಆಫ್ ದಾಟಿಸಿ ಮೊದಲ ಬೌಂಡರಿ ಗಳಿಸಿದರು. ಅವರು 14 ಸಾವಿರ ರನ್‌ಗಳ ಮೈಲಿಗಲ್ಲು ದಾಟಿದರು.

ಅಬ್ರಾರ್ ಹಾಕಿದ ಕೇರಂ ಬಾಲ್‌ನಲ್ಲಿ ಗಿಲ್ ವಿಕೆಟ್ ಉರುಳಿತು. ಕ್ರೀಸ್‌ಗೆ ಬಂದ ಶ್ರೇಯಸ್ ಅಯ್ಯರ್ ಅವರು ಕೊಹ್ಲಿಯೊಂದಿಗೆ ಜೊತೆಗೂಡಿದರು. ಅಯ್ಯರ್ ಆರಂಭದಲ್ಲಿ ಸ್ವಲ್ಪ ನಿಧಾನವಾಗಿ ಆಡಿದರು. ನಂತರ ವೇಗ ಹೆಚ್ಚಿಸಿದರು. ಕೊಹ್ಲಿ ಅವರು ಇನಿಂಗ್ಸ್ ಕೊನೆಯವರೆಗೆ ಆಡುವ ಇರಾದೆಯಿಂದಲೇ ಬ್ಯಾಟಿಂಗ್ ಮಾಡಿದರು. ಯಶಸ್ವಿಯೂ ಆದರು. ಭಾರತದ ಬೌಲಿಂಗ್ ಪೂರ್ಣ ಪ್ರಮಾಣದಲ್ಲಿ ಪಾಕಿಸ್ತಾನವನ್ನೂ ಸೋಲಿಸಬೇಕು.

ಆದರೆ ಕಿವೀಸ್ ವಿರುದ್ಧ ಜಯಿಸುವುದು ಬಾಂಗ್ಲಾಗೆ ಅಷ್ಟು ಸುಲಭವಲ್ಲ. ಮೊದಲ ಪಂದ್ಯದಲ್ಲಿ ವಿಲ್ ಯಂಗ್ ಮತ್ತು ಟಾಮ್ ಲೇಥಮ್ ಶತಕ ಹೊಡೆದಿದ್ದರು. ಗಾಯಗೊಂಡು ವಿಶ್ರಾಂತಿಯಲ್ಲಿರುವ ರಚಿನ್ ರವೀಂದ್ರ ಬದಲಿಗೆ ತಂಡದಲ್ಲಿ ಸ್ಥಾನ ಪಡೆದಿದ್ದ ಯಂಗ್ ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದರು. ಅವರು ಡೆವೊನ್ ಕಾನ್ವೆ ಜೊತೆಗೆ ಉತ್ತಮ ಆರಂಭ ನೀಡಿದ್ದರು. ಈಗ ರಚಿನ್ ಫಿಟ್ ಆಗಿ ಮರಳಿದರೆ ಯಂಗ್ ಅವರನ್ನು ತಂಡವು ಕೈಬಿಡುವುದೇ ಎಂಬುದನ್ನು ನೋಡಬೇಕು. ಅನುಭವಿ ಕೇನ್ ವಿಲಿಯಮ್ಸನ್, ಡ್ಯಾರಿಸ್ ಮಿಚೆಲ್ ಅವರು ಲಯಕ್ಕೆ ಮರಳಿದರೆ ಮಧ್ಯಮ ಕ್ರಮಾಂಕ ಮತ್ತಷ್ಟು ಬಲಾಢ್ಯವಾಗುತ್ತದೆ.

ಪಾಕ್ ಎದುರಿನ ಪಂದ್ಯದಲ್ಲಿ ಗ್ಲೆನ್ ಫಿಲಿಪ್ಸ್ ಮಿಂಚಿನ ಅರ್ಧಶತಕ ಹೊಡೆದಿದ್ದರು. ಅಲ್ಲದೇ ಫೀಲ್ಡಿಂಗ್‌ನಲ್ಲಿ ಮಿಂಚಿದ್ದರು. ವಿಲಿಯಮ್ ಓ ರೂರ್ಕಿ, ಮ್ಯಾಟ್ ಹೆನ್ರಿ ಹಾಗೂ ಸ್ಯಾಂಟನರ್ ಅವರು ಎದುರಾಳಿ ಬ್ಯಾಟರ್‌ಗಳಿಗೆ ಕಠಿಣ ಸವಾಲೊಡ್ಡುವ ಬೌಲರ್‌ಗಳು.

ಬಾಂಗ್ಲಾ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಲಯಕ್ಕೆ ಮರಳುವ ಸವಾಲು ಎದುರಿಸುತ್ತಿದ್ದಾರೆ. ಭಾರತದ ಎದುರಿನ ಪಂದ್ಯದಲ್ಲಿ ತಂಡವು 35ಕ್ಕೆ5 ವಿಕೆಟ್ ಕಳೆದುಕೊಂಡಿತ್ತು. ಆ ಹಂತದಲ್ಲಿ ಶತಕ ಬಾರಿಸಿದ್ದ ತೌಹಿದ್ ಹೃದಯ್ ತಂಡವು ಅಲ್ಪಮೊತ್ತಕ್ಕೆ ಕುಸಿಯುವುದನ್ನು ತಡೆದಿದ್ದರು. ಏಳನೇ ಕ್ರಮಾಂಕದ ಬ್ಯಾಟರ್ ಜಾಕಿರ್ ಅಲಿ ಅರ್ಧಶತಕ ಹೊಡೆದಿದ್ದರು. ಬೌಲಿಂಗ್‌ನಲ್ಲಿ ರಿಷಾದ್ ಹುಸೇನ್, ಅನುಭವಿ ಮುಸ್ತಫಿಜುರ್ ರೆಹಮಾನ್ ಮತ್ತು ತಸ್ಕಿನ್ ಅಹಮದ್ ಅವರಮೇಲೆ ತಂಡವು ಅವಲಂಬಿತವಾಗಿದೆ.

ಪಂದ್ಯ ಆರಂಭ: ಮಧ್ಯಾಹ್ನ 2.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

158
ಏಕದಿನ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಪಡೆದ ಒಟ್ಟು ಕ್ಯಾಚ್‌ಗಳು. ಈ ಮೂಲಕ ಭಾರತದ ಮೊಹಮ್ಮದ್ ಅಜರುದ್ದೀನ್ (156) ದಾಖಲೆಯನ್ನು ಮೀರಿ ನಿಂತರು. ಶ್ರೀಲಂಕಾದ ಮಹೇಲ ಜಯವರ್ಧನೆ (218) ಮತ್ತು ರಿಕಿ ಪಾಂಟಿಂಗ್ (160) ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿದ್ದಾರೆ.

5
ಐಸಿಸಿ ಟೂರ್ನಿಗಳಲ್ಲಿ ಪಾಕಿಸ್ತಾನ ವಿರುದ್ಧ ವಿರಾಟ್ ಕೊಹ್ಲಿ ಪಡೆದ 'ಪಂದ್ಯದ ಆಟಗಾರ' ಗೌರವ. ಯಾವುದೇ ದೇಶದ ಆಟಗಾರ ಒಂದೇ ತಂಡದ ವಿರುದ್ಧ ಮೂರಕ್ಕಿಂತ ಅಧಿಕ ಬಾರಿ ಈ ಗೌರವ ಗಳಿಸಿಲ್ಲ.

11
ಏಕದಿನ ಕ್ರಿಕೆಟ್‌ನಲ್ಲಿ ಒಂದೇ ಓವರ್‌ನಲ್ಲಿ ಗರಿಷ್ಠ ಎಸೆತ ಬೌಲಿಂಗ್ ಮಾಡಿದ ದಾಖಲೆಯನ್ನು ಮೊಹಮ್ಮದ್ ಶಮಿ ಅವರು ಇರ್ಫಾನ್ ಪಠಾಣ್ (2006) ಮತ್ತು ಜಹೀರ್ ಖಾನ್ (2003) ಅವರೊಂದಿಗೆ ಹಂಚಿಕೊಂಡರು

ಶಿಸ್ತುಬದ್ಧವಾಗಿರಲಿಲ್ಲ. ಮೊಹಮ್ಮದ್ ಶಮಿ ಅವರು ಇನಿಂಗ್ಸ್‌ನ ಮೊದಲ ಓವರ್‌ನಲ್ಲಿಯೇ 5 ವೈಡ್ ಹಾಕಿದರು. ನಂತರದಲ್ಲಿ ತಮ್ಮ ಸ್ವಿಂಗ್ ಕೌಶಲಗಳನ್ನು ತೋರಿದರು. ಆದರೆ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಉತ್ತಮವಾಗಿ ಬೌಲಿಂಗ್ ಮಾಡಿದರು. 3 ವಿಕೆಟ್ ಗಳಿಸಿದರು.

ಶಕೀಲ್ ಮತ್ತು ರಿಜ್ವಾನ್ ಅವರ ಬ್ಯಾಟಿಂಗ್‌ನಿಂದಾಗಿ ಪಾಕ್ ತಂಡವು 34 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 151 ರನ್ ಗಳಿಸಿತ್ತು. ಇದರಿಂದಾಗಿ ದೊಡ್ಡಮೊತ್ತ ಗಳಿಸುವ ಭರವಸೆ ಇತ್ತು. ಆದರೆ ಹಾರ್ದಿಕ್ ಮತ್ತು ಅಕ್ಷರ್ ಅವರ ದಾಳಿಯಿಂದ ಇದು ಸಾಧ್ಯವಾಗಲಿಲ್ಲ. 10 ಎಸೆತಗಳ ಅಂತರದಲ್ಲಿ ಇಬ್ಬರ ವಿಕೆಟ್‌ಗಳೂ ಪತನವಾದವು. ಅಲ್ಲಿಂದ ಬ್ಯಾಟಿಂಗ್ ಪಡೆಯ ಕುಸಿತ ಆರಂಭವಾಯಿತು.

2017ರ ಫೈನಲ್‌ನಲ್ಲಿ ಅನುಭವಿಸಿದ್ದ ಸೋಲಿಗೆ ಭಾರತ ಇಲ್ಲಿ ಮುಯ್ಯಿ ತೀರಿಸಿಕೊಂಡಿತು.

ಸ್ಕೋರ್ ಕಾರ್ಡ್

ಪಾಕಿಸ್ತಾನ 241 (49.4 ಓವರ್‌ಗಳಲ್ಲಿ)

ಇಮಾಮ್ ರನೌಟ್ (ಪಟೇಲ್) 10 (26ಎ)
ಬಾಬರ್ ಸಿ ರಾಹುಲ್ ಬಿ ಪಾಂಡ್ಯ 23 (26ಎ, 4x5)
ಶಕೀಲ್ ಸಿ ಪಟೇಲ್ ಬಿ ಪಾಂಡ್ಯ 62 (76ಎ, 4x5)
ರಿಜ್ವಾನ್ ಬಿ ಪಟೇಲ್ 46 (77ಎ, 4x3)
ಸಲ್ಮಾನ್ ಸಿ ಜಡೇಜ ಬಿ ಕುಲದೀಪ್ 19 (24ಎ)
ತಯ್ಯಬ್ ಬಿ ಜಡೇಜ 4 (6ಎ)
ಖುಷ್ದಿಲ್ ಸಿ ಕೊಹ್ಲಿ ಬಿ ರಾಣಾ 38 (39ಎ, 6x2)
ಶಾಹೀನ್ ಎಲ್‌ಬಿಡಬ್ಲ್ಯು ಕುಲದೀಪ್ 0 (1ಎ)
ನಸೀಂ ಸಿ ಕೊಹ್ಲಿ ಬಿ ಕುಲದೀಪ್ 14 (16ಎ, 4x1)
ಹ್ಯಾರಿಸ್ ರನೌಟ್ (ಪಟೇಲ್/ರಾಹುಲ್) 8 (7ಎ, 6x1)
ಅಬ್ರಾರ್ ಅಹಮ್ಮದ್ ಔಟಾಗದೇ 0 (0)
ಇತರೆ: 17 (ಲೆಗ್‌ಬೈ 8, ವೈಡ್ 9)
ವಿಕೆಟ್ ಪತನ: 1-41 (ಬಾಬರ್ ಆಜಂ, 8.2), 2-47 (ಇಮಾಮ್ ಉಲ್ಹಕ್, 9.2), 3-151 (ಮೊಹಮ್ಮದ್ ರಿಜ್ವಾನ್, 33.2), 4-159 (ಸೌದ್ ಶಕೀಲ್, 34.5), 5-165 (ತಯ್ಯಬ್ ತಾಹೀರ್, 36.1), 6-200 (ಸಲ್ಮಾನ್ ಆಘಾ, 42.4), 7-200 (ಶಾಹೀನ್ ಆಫ್ರಿದಿ, 42.5), 8-222 (ನಸೀಂ ಶಾ, 46.4), 9-241 (ಹ್ಯಾರಿಸ್ ರವೂಫ್, 48.6), 10-241 (ಖುಷ್ದಿಲ್ ಶಾ, 49.4)
ಬೌಲಿಂಗ್: ಮೊಹಮ್ಮದ್ ಶಮಿ 8-0-43-0, ಹರ್ಷಿತ್ ರಾಣಾ 7.4-0-30-1, ಹಾರ್ದಿಕ್ ಪಾಂಡ್ಯ 8-0-31-2, ಅಕ್ಷರ್ ಪಟೇಲ್ 10-0-49-1, ಕುಲದೀಪ್ ಯಾದವ್ 9-0-40-3, ರವೀಂದ್ರ ಜಡೇಜ 7-0-40-1

ಭಾರತ: 4ಕ್ಕೆ 244 (42.3 ಓವರ್‌ಗಳಲ್ಲಿ)

ರೋಹಿತ್ ಸಿ ಶಾಹೀನ್ 20 (15ಎ, 4x3, 6x1)
ಶುಭಮನ್ ಬಿ ಅಬ್ರಾರ್ 46 (52ಎ, 4x7)
ವಿರಾಟ್ ಕೊಹ್ಲಿ ಔಟಾಗದೇ 100 (111ಎ, 4x7)
ಶ್ರೇಯಸ್ ಸಿ ಇಮಾಮ್ ಬಿ ಖುಷ್ದಿಲ್ 56 (67ಎ, 4x5, 6x1)
ಹಾರ್ದಿಕ್ ಸಿ ರಿಜ್ವಾನ್ ಬಿ ಶಾಹೀನ್ 8 (6ಎ, 4x1)
ಅಕ್ಷರ್ ಪಟೇಲ್ ಔಟಾಗದೇ 3 (4ಎ)
ಇತರೆ: 11 (ವೈಡ್ 11)
ವಿಕೆಟ್ ಪತನ: 1-31 (ರೋಹಿತ್ ಶರ್ಮಾ, 4.6), 2-100 (ಶುಭಮನ್ ಗಿಲ್, 17.3), 3-214 (ಶ್ರೇಯಸ್ ಅಯ್ಯರ್, 38.5), 4-223 (ಹಾರ್ದಿಕ್ ಪಾಂಡ್ಯ, 39.6)
ಬೌಲಿಂಗ್: ಶಾಹೀನ್ ಆಫ್ರಿದಿ 8-0-74-2, ನಸೀಂ ಶಾ 8-0-37-0, ಹ್ಯಾರಿಸ್ ರವೂಫ್ 7-0-52-0, ಅಬ್ರಾರ್ ಅಹಮ್ಮದ್ 10-0-28-1, ಖುಷ್ದಿಲ್ ಶಾ 7.3-0-43-1, ಸಲ್ಮಾನ್ ಆಘಾ 2-0-10-0
ಪಂದ್ಯದ ಆಟಗಾರ: ವಿರಾಟ್ ಕೊಹ್ಲಿ

ಫಲಿತಾಂಶ: ಭಾರತಕ್ಕೆ 6 ವಿಕೆಟ್‌ಗಳ ಜಯ

ಪಾಯಿಂಟ್ಸ್ ಪಟ್ಟಿ

ಗುಂಪು ಎ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಭಾರತ	2	2	0	4	0.647
ನ್ಯೂಜಿಲೆಂಡ್	1	1	0	2	1.200
ಬಾಂಗ್ಲಾದೇಶ	1	0	1	0	-0.408
ಪಾಕಿಸ್ತಾನ	2	0	2	0	-1.087

ಗುಂಪು ಬಿ

ದಕ್ಷಿಣ ಆಫ್ರಿಕಾ	1	1	0	2	2.140
ಆಸ್ಟ್ರೇಲಿಯಾ	1	1	0	2	0.475
ಇಂಗ್ಲೆಂಡ್	1	0	1	0	-0.475
ಅಫ್ಗಾನಿಸ್ತಾನ	1	0	1	0	-2.140

ಬೂಮ್ರಾಗೆ ಐಸಿಸಿ ಪ್ರಶಸ್ತಿ ಪ್ರದಾನ

ದುಬೈ (ಪಿಟಿಐ): ಭಾರತ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ಭಾನುವಾರ ಐಸಿಸಿ ವರ್ಷದ ಕ್ರಿಕೆಟಿಗ ಹಾಗೂ ಶ್ರೇಷ್ಠ ಟೆಸ್ಟ್ ಕ್ರಿಕೆಟಿಗ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಭಾರತ ಮತ್ತು ಪಾಕ್ ನಡುವಣ ಪಂದ್ಯದ ಆರಂಭಕ್ಕೂ ಮುನ್ನ ನಡೆದ ಕಾರ್ಯಕ್ರಮದಲ್ಲಿ ಅವರನ್ನು ಗೌರವಿಸಲಾಯಿತು.

'ಬೂಮ್ರಾ ಅವರು 2024ರ ಐಸಿಸಿ ಪ್ರಶಸ್ತಿಗಳು ಮತ್ತು ವರ್ಷದ ತಂಡದ ಕ್ಯಾಪ್‌ಗಳನ್ನು ಸ್ವೀಕರಿಸಿದ್ದಾರೆ' ಎಂದು ಐಸಿಸಿ ಎಕ್ಸ್‌ನಲ್ಲಿ ಸಂದೇಶ ಹಾಕಿದೆ.

ಬೆನ್ನುನೋವಿನ ಚಿಕಿತ್ಸೆಗಾಗಿ ಬೂಮ್ರಾ ಅವರು ವಿಶ್ರಾಂತಿಯಲ್ಲಿದ್ದಾರೆ. ಆದ್ದರಿಂದ ಅವರು ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿಲ್ಲ. ಪ್ರಶಸ್ತಿ ಸಮಾರಂಭಕ್ಕೂಮುನ್ನ ಅಭ್ಯಾಸನಿರತ ಭಾರತ ತಂಡದ ಆಟಗಾರರನ್ನೂ ಬೂಮ್ರಾ ಭೇಟಿಯಾದರು.

ಭಾರತದ ಜಸ್‌ಪ್ರೀತ್ ಬೂಮ್ರಾ ಅವರಿಗೆ ಐಸಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು – ಎಕ್ಸ್ ಚಿತ್ರ

ನ್ಯೂಜಿಲೆಂಡ್‌ಗೆ ಶಾಂತೋ ಬಳಗದ ಸವಾಲು ಇಂದು

ರಾವಲ್ಪಿಂಡಿ (ಪಿಟಿಐ): ಆತ್ಮವಿಶ್ವಾಸಭರಿತ ನ್ಯೂಜಿಲೆಂಡ್ ತಂಡವು ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸುವ ಉತ್ಸಾಹದಲ್ಲಿದೆ.

ಸೋಮವಾರ ಇಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶವನ್ನು ಸೋಲಿಸಿ ನಾಲ್ಕರ ಘಟ್ಟಕ್ಕೆ ಪ್ರವೇಶಿಸುವತ್ತ ಚಿತ್ತ ನೆಟ್ಟಿದೆ. ಮಿಚೆಲ್ ಸ್ಯಾಂಟನರ್ ನಾಯಕತ್ವದ ಕಿವೀಸ್ ಬಳಗವು ಮೊದಲ ಪಂದ್ಯದಲ್ಲಿ ಆತಿಥೇಯ ಪಾಕಿಸ್ತಾನವನ್ನು 60 ರನ್‌ಗಳಿಂದ ಸೋಲಿಸಿತ್ತು. ಜೊತೆಗೆ 1.200 ನೆಟ್ ರನ್ ರೇಟ್ ಕೂಡ ಹೊಂದಿದೆ.

ಇನ್ನೊಂದೆಡೆ, ಬಾಂಗ್ಲಾದೇಶ ತಂಡವು ಭಾರತದ ಎದುರು 6 ವಿಕೆಟ್‌ಗಳಿಂದ ಸೋತಿತ್ತು. ಸೆಮಿಫೈನಲ್ ಪ್ರವೇಶಿಸುವ ಆಸೆ ಜೀವಂತವಾಗುಳಿಯಬೇಕಾದರೆ ಬಾಂಗ್ಲಾ ತಂಡವು ಈ ಪಂದ್ಯದಲ್ಲಿ ಜಯಿಸಲೇಬೇಕು. ನಂತರ ಮೂರನೇ ಪಂದ್ಯದಲ್ಲಿ

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

EXECUTIVE AD SALES

Job Location : Bangalore (MG Road)

Key Responsibilities:
- Sales Strategy & Client Acquisition
- Client Relationship Management
- Campaign Development & Coordination
- Market Research & Trends
- Performance Analysis

Requirements :
- Any Graduate
- 3+ years of experience in PR, advertising sales in print media, radio, digital or native advertising.
- Stakeholder management.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಸಂಕ್ಷಿಪ್ತ ಸುದ್ದಿ

ಭಾರತದ ರಾಷ್ಟ್ರಗೀತೆ: ಸ್ಪಷ್ಟನೆ ಕೇಳಿದ ಪಿಸಿಬಿ

ಲಾಹೋರ್ (ಪಿಟಿಐ): ಇಲ್ಲಿಯ ಗಡಾಫಿ ಕ್ರೀಡಾಂಗಣದಲ್ಲಿ ಶನಿವಾರ ನಡೆದಿದ್ದ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಣ ಪಂದ್ಯದ ಆರಂಭಕ್ಕೂ ಮುನ್ನ ಭಾರತದ ರಾಷ್ಟ್ರ ಗೀತೆಯು ಅರೆಕ್ಷಣ ಮೊಳಗಿತ್ತು. ಈ ಬಗ್ಗೆ ಆತಿಥೇಯ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಸಮಾಧಾನ ವ್ಯಕ್ತಪಡಿಸಿದೆ. ಈ ಕುರಿತು ಸ್ಪಷ್ಟನೆ ನೀಡಬೇಕು ಎಂದು ಪಿಸಿಬಿಯು ಐಸಿಸಿಯನ್ನು ಆಗ್ರಹಿಸಿದೆ.

ಪಂದ್ಯ ಆರಂಭಕ್ಕೂ ಮುನ್ನ ರಾಷ್ಟ್ರ ಗೀತೆಗಾಗಿ ಉಭಯ ತಂಡಗಳ ಆಟಗಾರರು ಸಾಲಿನಲ್ಲಿ ನಿಂತಿದ್ದರು. ಆದರೆ ಇದ್ದಕ್ಕಿದ್ದಂತೆ ಭಾರತದ ರಾಷ್ಟ್ರ ಗೀತೆ ಮೊಳಗಿತು. ಒಂದೇ ಸೆಕೆಂಡಿನಲ್ಲಿಯೇ ಬಂದ್ ಮಾಡಲಾಯಿತು. ಕ್ರೀಡಾಂಗಣ ದಲ್ಲಿದ್ದ ಆಟಗಾರರು ಮತ್ತು ಪ್ರೇಕ್ಷಕರು ಇದರಿಂದ ಚಕಿತರಾದರು.

'ರಾಷ್ಟ್ರ ಗೀತೆಯ ಧ್ವನಿಸುರುಳಿಗಳ ನಿರ್ವಹಣೆಯು ಐಸಿಸಿ ನಿಯೋಜಿತ ಸಿಬ್ಬಂದಿಯ ಹೊಣೆ. ಅದರಿಂದಾಗಿ ಇಂದು ನಡೆದ ಘಟನೆಗೆ ಐಸಿಸಿ ಸ್ಪಷ್ಟನೆ ನೀಡಬೇಕೆಂದು ಪಿಸಿಬಿಯು ಪತ್ರ ಬರೆದಿದೆ' ಎಂದು ಮೂಲಗಳು ತಿಳಿಸಿವೆ.

ಅಭ್ಯಾಸಕ್ಕೆ ಬಾಬರ್ ಆಜಂ ಗೈರು

ದುಬೈ (ಪಿಟಿಐ): ಶನಿವಾರ ಸಂಜೆ ಪಾಕಿಸ್ತಾನ ತಂಡವು ಅಭ್ಯಾಸ ನಡೆಸಿದ ಹೊತ್ತಿನಲ್ಲಿ ಅನುಭವಿ ಬ್ಯಾಟರ್ ಬಾಬರ್ ಆಜಂ ಗೈರುಹಾಜರ